₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 12.07.2024 ಸಂಪುಟ: 09 ಸಂಚಿಕೆ: 200 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಹಿನ್ನೆಲೆಯಲ್ಲಿ ತಪಾಸಣೆ

100 ಅಧಿಕಾರಿಗಳಿಂದ 56 ಕಡೆ ಏಕಕಾಲಕ್ಕೆ ದಾಳಿ

11 ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾ ದಾಳಿ

ಬೆಂಗಳೂರು: ಗುರುವಾರ ಬೆಳ್ಳಂಬೆಳಗ್ಗೆ 11 ಭ್ರಷ್ಟ ಅಧಿಕಾರಿಗಳಿಗೆ ಸೇರಿದ 56 ಸ್ಥಳಗಳಲ್ಲಿ ಲೋಕಾಯುಕ್ತ ಏಕಾಏಕಿ ದಾಳಿ ಮಾಡಿದೆ.

ಒಂಬತ್ತು ಜಿಲ್ಲೆಗಳಲ್ಲಿ ಲೋಕಾಯುಕ್ತ ದಾಳಿ ನಡೆಸಿದೆ. 11 ಪ್ರಕರಣಗಳಿಗೆ ಸಂಬಂಧಿಸಿ ಸುಮಾರು 100 ಅಧಿಕಾರಿಗಳು 56 ಕಡೆ ನಡೆದ ದಾಳಿಗಳಲ್ಲಿ ಪಾಲ್ಗೊಂಡಿದ್ದರು. ಮಂಡ್ಯ, ಕಲಬುರಗಿ, ಚಿತ್ರದುರ್ಗ, ದಾವಣಗೆರೆ, ಬೆಳಗಾವಿ, ಕೋಲಾರ, ಮೈಸೂರು, ಹಾಸನ, ಬೆಂಗಳೂರು ಜಿಲ್ಲೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು, ಬೆಳಗಾಗುವ ಮುನ್ನವೇ ತಂಡ ಕಟ್ಟಿಕೊಂಡು ದಾಳಿ ನಡೆಸಿದರು. ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಹಿನ್ನೆಲೆಯಲ್ಲಿ ಇವರ ತಪಾಸಣೆ ನಡೆದಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕೆಂಗೇರಿ ವಿಭಾಗದ ಕಂದಾಯ ಅಧಿಕಾರಿ ಬಸವರಾಜ ಮಾಗಿ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕುಮಾರಪಾರ್ಕ್ ಲ್ಲಿರುವ ಮೋತಿ ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್‌ನಲ್ಲಿ ಚಿನ್ನಾಭರಣಗಳ ಜತೆಗೆ ಐದು ತಲವಾರ್, ಮೂರು ಚಾಕು ಮತ್ತು ಎರಡು ಹುಲಿ ಉಗುರು ಪತ್ತೆ ಆಗಿವೆ. ದುಬಾರಿ ಮೌಲ್ಯದ 7 ಲೈಟರ್‌ಗಳು ಕೂಡ ಪತ್ತೆಯಾಗಿದ್ದು, ಬಸವರಾಜ ಮಾಗಿ ವಿಲಾಸಿ ಜೀವನ ನಡೆಸುತ್ತಿದ್ದರು. ಸದ್ಯ ಚಿನ್ನ, 2 ಹುಲಿ ಉಗುರು ಜಪ್ತಿ ಮಾಡಿರುವ ಅರಣ್ಯಾಧಿಕಾರಿಗಳು ಕೊಂಡೊಯ್ದಿದ್ದಾರೆ. ಎರಡು ಹುಲಿ ಉಗುರು ಪತ್ತೆ ಬಗ್ಗೆ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ವಲಯ ಅರಣ್ಯಾಧಿಕಾರಿ ತ್ಯಾಗರಾಜ್ ಮತ್ತು ಅಧಿಕಾರಿಗಳ ತಂಡ ಫ್ಲ್ಯಾಟ್‌ಗೆ ಬಂದು ಎರಡು ಹುಲಿ ಉಗುರು ಜಪ್ತಿ ಮಾಡಿದ್ದಾರೆ.

ಬಸವರಾಜ್ ಮಾಗಿ ಒಂದೂವರೆ ತಿಂಗಳ ಹಿಂದೆ ಜೈಲಿಂದ ಹೊರಗಡೆ ಬಂದಿದ್ದರು. ನಕಲಿ ದಾಖಲಾತಿ ಸೃಷ್ಟಿಸಿದ ಪ್ರಕರಣದಲ್ಲಿ ಜೈಲುಪಾಲಾ ಗಿದ್ದು, ಬೇಲ್ ಮೇಲೆ ಬಿಡುಗಡೆಯಾಗಿದ್ದಾರೆ. ಬೆಂಗಳೂರಿನಲ್ಲಿ 5 ಕಡೆ, ಕಲಬುರಗಿಯಲ್ಲಿ 4 ಕಡೆ ಹೀಗೆ ಬಸವರಾಜ ಮಾಗಿಗೆ ಸಂಬಂಧಿಸಿದಂತೆ ಒಟ್ಟು 9 ಕಡೆ ಲೋಕಾ ದಾಳಿ ಮಾಡಿದೆ. ಕಲಬುರಗಿಯ ಬಡೇಪುರ, ಪಿ.ಟಿ ಕಾಲೋನಿ, ಪಾಳಾ ಗ್ರಾಮದ ಮನೆ ಹೊಂದಿದ್ದಾರೆ.

→ 4

ಯಾರ್‍ಯಾರ ಮೇಲೆ ದಾಳಿ? ಎಷ್ಟೆಷ್ಟು ವಶ?

1) ಡಿ. ಮಹದೇವ ಬನ್ನೂರ್
ಎಇಇ, ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ-ವಿಭಾಗ, ಬೆಳಗಾವಿ
- 4 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 1.5 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 29.67 ಲಕ್ಷ ರು. ಮೌಲ್ಯದ ಚರಾಸ್ತಿ.
- ಒಟ್ಟು 2.96 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

2) ಡಿ.ಎಚ್. ಉಮೇಶ್
ಕಾರ್ಯಪಾಲಕ ಅಭಿಯಂತರರು(ವಿ), ಕೆ.ಪಿ.ಟಿ.ಸಿ.ಎಲ್, ಚಿಕ್ಕಮಗಳೂರು.
- 5 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 4.83 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 55 ಲಕ್ಷ ರು. ಚರಾಸ್ತಿ.
- ಒಟ್ಟು 5.38 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

3) ಎಂ. ಎಸ್. ಪ್ರಭಾಕರ್
ಸಹಾಯಕ ಕಾರ್ಯಪಾಲಕ ಭಿಯಂತರರು(ವಿ), ಬೆಸ್ಕಾಂ ವಿಜಿಲೆನ್ಸ್, ದಾವಣಗೆರೆ.
- 4 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 1.57 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 4.35 ಲಕ್ಷ ರು. ಚರಾಸ್ತಿ.
- ಒಟ್ಟು 2.01 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

4) ಶೇಖರ್ ಗೌಡ ಹನುಮಗೌಡ ಕುರಡಗಿ
ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬೆಳಗಾವಿ.
- 7 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 6.73 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 1.15 ಕೋಟಿ ರು. ಮೌಲ್ಯದ ಚರಾಸ್ತಿ.
- ಒಟ್ಟು 7.88 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

5) ಎಂ. ರವೀಂದ್ರ
ಮುಖ್ಯ ಅಭಿಯಂತರರು(ನಿವೃತ್ತ), ಲೋಕೋಪಯೋಗಿ ಇಲಾಖೆ.
- 4 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 3.92 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 2.33 ಕೋಟಿ ರು. ಮೌಲ್ಯದ ಚರಾಸ್ತಿ.
- ಒಟ್ಟು 5.75 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

6) ಕೆ. ಜಿ. ಜಗದೀಶ,
ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ.
- 5 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 5.01 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 24.61 ಲಕ್ಷ ರು. ಮೌಲ್ಯದ ಚರಾಸ್ತಿ.
- 5.26 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

7) ಶಿವರಾಜು. ಎಸ್
ಕಾರ್ಯಪಾಲಕ ಅಭಿಯಂತರರು(ನಿವೃತ್ತ), ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ ಜಿಲ್ಲೆ,
- 6 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 2.91 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 3.05 ಕೋಟಿ ರು. ಚರಾಸ್ತಿ.
- ಒಟ್ಟು 5.08 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

8) ವಿಜಯಣ್ಣ
ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.
- 6 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 2.53 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 1.02 ಕೋಟಿ ರು. ಚರಾಸ್ತಿ.
- ಒಟ್ಟು 2.45 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ.

ಸಮಾಚಾರ ಸಣ್ಣದಲ್ಲ

ಬೆದರಿಕೆ; ಆರ್‌ಟಿಐ ಕಾರ್ಯಕರ್ತ ಸೆರೆ

ಬೆಂಗಳೂರು: ಮಹಿಳೆಗೆ ಅತ್ಯಾಚಾರ ಎಸಗುವುದಾಗಿ ಬೆದರಿಕೆ ಒಡ್ಡಿದ ಆರೋಪದ ಹಿನ್ನೆಲೆ ಆರ್‌ಟಿಐ ಕಾರ್ಯಕರ್ತ ಶ್ರೀನಿವಾಸ್ ಎಂಬಾತನನ್ನು ಕಾಡುಗೋಡಿ ಪೊಲೀಸರು ಬಂಧಿಸಿದ್ದಾರೆ. ಸ್ನೇಹಿತನ ಜತೆಗಿದ್ದ ಪರಿಚಯವಿದ್ದ ಮಹಿಳೆಯ ಖಾಸಗಿ ಫೋಟೋ ಇಟ್ಟುಕೊಂಡು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಶ್ರೀನಿವಾಸ್ ಬೆದರಿಕೆ ಹಾಕಿದ್ದ. ಈ ಕುರಿತು ಸಂತ್ರಸ್ತ ಮಹಿಳೆ ಕಾಡುಗೋಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಜುಲೈ 01 ರಂದು ಕಾಡುಗೋಡಿ ಮೆಟ್ರೋ ನಿಲ್ದಾಣದ ಬಳಿ ಶ್ರೀನಿವಾಸ್ ಬೆದರಿಕೆ ಹಾಕಿದ್ದ. ಈ ಬಗ್ಗೆ ಕಾಡುಗೋಡಿ ಪೊಲೀಸ್ ಠಾಣೆಗೆ ಮಹಿಳೆ ನೀಡಿದ ದೂರಿನ ಮೇರೆಗೆ ಗುರುವಾರ ಶ್ರೀನಿವಾಸ್‌ನನ್ನು ಬಂಧಿಸಲಾಗಿದೆ. ಈ ಹಿಂದೆ ಇತ ಕೆಆರ್‌ಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ. ಇದೀಗ ಆತನ ಮೇಲೆ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಣಿ ಅಪಘಾತ: ವ್ಯಕ್ತಿ ಸಾವು

ಬೆಂಗಳೂರು: ಬನ್ನೇರುಘಟ್ಟ ಮುಖ್ಯ ರಸ್ತೆಯ ಪಾರಿಜಾತ ಆಸ್ಪತ್ರೆ ಎದುರು ಸರಣಿ ಅಪಘಾತ ಸಂಭವಿಸಿದ್ದು, ರಸ್ತೆ ಬದಿ ನಿಂತಿದ್ದ ವ್ಯಕ್ತಿ ದುರಂತ ಸಾವನ್ನಪ್ಪಿದ್ದಾನೆ. ಅಡ್ಡ ಬಂದ ಬೈಕ್ ಸವಾರರನ್ನು ಉಳಿಸಲು ಹೋಗಿ ಈ ಸರಣಿ ಅಪಘಾತ ನಡೆದಿದ್ದು, 2 ಬೈಕ್, ಗೂಡ್ಸ್ ವಾಹನ, ಥಾರ್ ವಾಹನಕ್ಕೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆಯಿತು. ಬಳಿಕ ನಿಯಂತ್ರಣ ತಪ್ಪಿದ ಬಸ್, 4 ವಾಹನಗಳಿಗೆ ಡಿಕ್ಕಿ ಹೊಡೆದು ವಿದ್ಯುತ್ ಕಂಬಕ್ಕೆ ಗುದ್ದಿದೆ. ಘಟನೆಯಲ್ಲಿ ಆಂಧ್ರ ಮೂಲದ ಪ್ರಸಾದ್ ರಾವ್(60) ಕೊನೆಯುಸಿರೆಳೆದಿದ್ದಾರೆ. ಪಾದಚಾರಿ, ಇಬ್ಬರು ಬೈಕ್ ಸವಾರರು ಹಾಗೂ ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಗಂಭೀರ ಗಾಯವಾಗಿದ್ದು, ಕೂಡಲೇ ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದರು.

ಅನುದಾನ ಡೈವರ್ಟ್ ಆದರೆ ಶಿಸ್ತು ಕ್ರಮ

ಬೆಂಗಳೂರು: ಎಸ್‌ಸಿಎಸ್‌ಟಿ, ಎಸ್‌ಟಿಪಿ ಅನುದಾನದ ಬಗ್ಗೆ ಪ್ರತಿಪಕ್ಷದಿಂದ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದು, ಈ ಕುರಿತು ಸರಕಾರ ಎಚ್ಚೆತ್ತುಕೊಂಡಿದ್ದು ಜಿಲ್ಲಾಧಿಕಾರಿಗಳಿಗೆ ಆದೇಶ ರವಾನಿಸಿದೆ. ಮಂಡ್ಯ ಹಾಗೂ ಕಲಬುರಗಿಯಲ್ಲಿ ಅನುದಾನವನ್ನು ಬೇರೆ ಕಾಮಗಾರಿಗೆ ನಿಯೋಜಿಸಿರುವುದು ದೃಢವಾಗಿದ್ದು, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ. ಈ ಕುರಿತು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದು, ಎಸ್‌ಸಿಎಸ್‌ಟಿ/ಎಸ್‌ಟಿಪಿ ಯ ಅನುದಾನವನ್ನು ಬೇರೆ ಯೋಜನೆಗೆ ನಿಯೋಜಿಸದರೆ ಸಂಬಂಧಪಟ್ಟ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಆದೇಶಿಸಲಾಗಿದೆ.

ಆರ್‌ಆರ್ ನಗರ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ್ದ ನಟ ದರ್ಶನ್, ಪವಿತ್ರಾ ಗೌಡ ಗ್ಯಾಂಗ್

ದಾಸನ ಜೈಲುವಾಸಕ್ಕೆ ಮಾಸ

ಖಳ ನಾಯಕ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್ ಬಂಧನವಾಗಿ ಗುರುವಾರಕ್ಕೆ ಒಂದು ತಿಂಗಳು ಪೂರೈಸಿದೆ.

ಜೂ.8 ರಂದು ಬೆಳಗ್ಗೆ 11 ಗಂಟೆ ಸುಮಾರಿಗೆ ರೇಣುಕಾಸ್ವಾಮಿ ಅವರನ್ನು ಅಪಹರಣ ಮಾಡಲಾಗಿತ್ತು. ಫಾರ್ಮಸಿಯಿಂದ ಕರೆ ತಂದು ರಾಘವೇಂದ್ರ, ಎಂಬಾತ ಅಪಹರಣ ಮಾಡಿದ್ದ. ಅಂದು ಮಧ್ಯಾಹ್ನ 4 ಗಂಟೆ ಸುಮಾರಿಗೆ ಆರೋಪಿಗಳು ಬೆಂಗಳೂರು ತಲುಪಿದ್ದರು. ಆರ್‌ಆರ್ ನಗರ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆದಿತ್ತು. ಮನಸೋ ಇಚ್ಛೆ ಹಲ್ಲೆ ನಡೆಸಿ ಅಮಾನುಷವಾಗಿ ಡಿ ಗ್ಯಾಂಗ್ ಕೊಲೆ ಮಾಡಿತ್ತು. ನಟ ದರ್ಶನ್, ಪವಿತ್ರಾ ಗೌಡ ಗ್ಯಾಂಗ್‌ನಿಂದ ಈ ಹಲ್ಲೆ, ಕೊಲೆಯಾಗಿತ್ತು.

ಅಂದು ಸಂಜೆ ಆರು ಗಂಟೆ ವೇಳೆಗೆ ತೀವ್ರ ಹಲ್ಲೆಯಿಂದ ರೇಣುಕಾಸ್ವಾಮಿ ಮೃತಪಟ್ಟಿದ್ದ. ಈ ವೇಳೆ ಮನೆಯಲ್ಲಿದ್ದ ದರ್ಶನ್‌ಗೆ ವಿನಯ್ ಆ್ಯಂಡ್ ಟೀಂ ವಿಷಯ ಮುಟ್ಟಿಸಿತು. ಸಾವಿನ ವಿಚಾರ ತಿಳಿದು ಕಂಗಾಲಾಗಿ ನಟ ಆತಂಕಕ್ಕೀಡಾದರು. ನಂತರ ಶವ ವಿಲೇವಾರಿ ಮಾಡಲು ಹಣಕಾಸು ಡೀಲ್ ಮಾಡಿಕೊಳ್ಳಲಾಗಿತ್ತು. ಪ್ರದೂಷ್ ಟೀಂಗೆ 30 ಲಕ್ಷ ಹಣ ಕೊಟ್ಟು ಡೀಲ್ ಮಾಡಲಾಗಿತ್ತು. ಆರಂಭದಲ್ಲಿ ಶವ ವಿಲೇವಾರಿ ಮಾಡಲು ಆರೋಪಿಗಳು ಹಿಂದೇಟು ಹಾಕಿದರು. ನಂತರ ಮೈಸೂರಿಗೆ ತೆರಳಿ ದರ್ಶನ್ ಭೇಟಿಯಾಗಿ ಮಾತುಕತೆ ನಡೆಸಿದರು. ಬಳಿಕ ರಾತ್ರಿ 1:30 ರ ಸುಮಾರಿಗೆ ಸ್ಕಾರ್ಪಿಯೋ ಕಾರಿನಲ್ಲಿ ಶವ ಸಾಗಾಟ ಮಾಡಲಾಯಿತು. ಪ್ರದೂಷ್‌ಗೆ ಸೇರಿದ ಕಾರಿನಲ್ಲಿ ಶವ ವಿಲೇವಾರಿ ಮಾಡಲಾಯಿತು. ಮನಹಳ್ಳಿ ರಿಂಗ್ ರಸ್ತೆಯ ರಾಜಕಾಲುವೆ ಬಳಿ ಶವ ಎಸೆದು ಆರೋಪಿಗಳು ಪರಾರಿಯಾಗಿದ್ದರು. ರಾಘವೇಂದ್ರ, ನಿಖಿಲ್ ನಾಯಕ್, ಕಾರ್ತಿಕ್ ಅಲಿಯಾಸ್ ಕಪ್ಪೆ ಹಾಗೂ ಕೇಶವಮೂರ್ತಿಯಿಂದ ಶವ ವಿಲೇವಾರಿ ಮಾಡಿದ್ದರು.

ಜೂ.9ರಂದು ಬೆಳಗ್ಗೆ 8 ಗಂಟೆಗೆ ಸುಮನಹಳ್ಳಿ ರಾಜಕಾಲುವೆ ಬಳಿ ಶವ ಪತ್ತೆಯಾಯಿತು. ಸತ್ವ ಅಪಾರ್ಟ್‌ಮೆಂಟ್ ಸೆಕ್ಯುರಿಟಿ ಶವ ಪತ್ತೆಹಚ್ಚಿದ್ದರು. ಸೆಕ್ಯುರಿಟಿ ಗಾರ್ಡ್, ಪೊಲೀಸರಿಗೆ ಮಾಹಿತಿ ನೀಡಿದ. ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ಮಾಡಿದರು. ಮೃತದೇಹ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಯಿತು. ಬಳಿಕ ಅಪರಿಚಿತ ಶವದ ಬಗ್ಗೆ ಪೊಲೀಸರ ತನಿಖೆ ಆರಂಭಿಸಿದ್ದರು. ಜೂ.10 ರಂದು ಕೊಲೆ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ನಾಲ್ವರು ಆರೋಪಿಗಳು ಪೊಲೀಸರ ಬಳಿ ಸರೆಂಡರ್ ಆದರು. ಹಣಕಾಸು ವಿಚಾರವಾಗಿ ಕೊಲೆ ಮಾಡಿದ್ದಾಗಿ ಹೇಳಿಕೊಂಡಿದ್ದರು.

ರಾಘವೇಂದ್ರ, ಕೇಶವಮೂರ್ತಿ, ಕಾರ್ತಿಕ್, ನಿಖಿಲ್ ನಾಯಕ್ ಸರೆಂಡರ್ ಆದರು. ಪೊಲೀಸರು ನಾಲ್ವರು ಆರೋಪಿಗಳನ್ನು ತೀವ್ರ ವಿಚಾರಣೆ ನಡೆಸಿದ್ದ ಪೊಲೀಸರು. ಸೋಮವಾರ ರಾತ್ರಿ ಆರೋಪಿಗಳು ಕೊಲೆ ಪ್ರಕರಣಕ್ಕೆ ಮೇಜರ್ ಟ್ವಿಸ್ಟ್ ಕೊಟ್ಟರು. ನಟ ದರ್ಶನ್ ಹಾಗೂ ಪವಿತ್ರಾ ಗೌಡ ಹೆಸರನ್ನು ಆರೋಪಿಗಳು ಬಾಯಿಬಿಟ್ಟರು. ಕೂಡಲೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸಭೆ ಮಾಡಲಾಯಿತು. ಸಭೆ ನಡೆಸಿ ದರ್ಶನ್ ಎಲ್ಲಿದ್ದಾರೆ ಅಂತಾ ಮಾಹಿತಿ ಸಂಗ್ರಹಿಸಲಾಯಿತು.

ಕಂಬಿಯ ಹಿಂದೆ 17 ಆರೋಪಿಗಳು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಬಂಧನಕ್ಕೆ ಎಸಿಪಿ ಚಂದನ್ ನೇತೃತ್ವದ ತಂಡ ಜೂ.11 ರಂದು ಮೈಸೂರಿಗೆ ತೆರಳಿತ್ತು. ಈ ವೇಳೆ ದರ್ಶನ್ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿದ್ದರು. ಹೋಟೆಲ್‌ನಿಂದ ದರ್ಶನ್ ವಶಕ್ಕೆ ಪಡೆದು ಕರೆತಂದರು. 11:30 ರ ಸುಮಾರಿಗೆ ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಕರೆತಂದರು. ನಂತರ ಆರ್‌ಆರ್ ನಗರ ಮನೆಯಿಂದ ಪವಿತ್ರಾಗೌಡ ಕಸ್ಟಡಿಗೆ ತೆಗೆದುಕೊಂಡರು. ಪೊಲೀಸ್ ಠಾಣೆಯಲ್ಲಿ ಇಬ್ಬರ ಪ್ರಾಥಮಿಕ ವಿಚಾರಣೆ ನಡೆಸಲಾಯಿತು. ಪೊಲೀಸರಿಂದ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಬಂಧನವಾಯಿತು. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಒಟ್ಟು 17 ಮಂದಿ ಬಂಧನವಾಯಿತು.

ಕೊಲೆಗೆ ಸುಪಾರಿ ನೀಡಿದವರ ಮನೆಗಳ ಮೇಲೆ ದಾಳಿ

ಬೆಂಗಳೂರು: ಕೊಲೆ ಪ್ರಕರಣವೊಂದರಲ್ಲಿ ಕೊಲೆಗೆ ಸುಪಾರಿ ನೀಡಿದವರ ಮನೆಗಳ ಮೇಲೆ ದಾಳಿ ಮಾಡಿದ್ದು, ಕೈಗೆ ಸಿಕ್ಕ ವಸ್ತುಗಳನ್ನೆಲ್ಲ ಪುಡಿಗಟ್ಟಿ ಸೇಡು ತೀರಿಸಿಕೊಂಡಿದ್ದಾರೆ.

ಜೂನ್ 16ರಂದು ಬೆಳಗ್ಗೆ ಹೊಸಕೋಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಗಂಗಾಪುರ ಗ್ರಾಮದ ನವೀನ್ ನಾಯಕ್ ಎಂಬಾತನನ್ನು ದುಷ್ಕರ್ಮಿಗಳು ಕಾರಿನಲ್ಲಿ ಬಂದು ಬರ್ಬರವಾಗಿ ಕೊಲೆಗೈದಿದ್ದರು. ತರಕಾರಿ ತರುತ್ತಿದ್ದ ನವೀನ್ ಕಾರು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು.ನವೀನ್ ನಾಯಕ್ ಹೊಸಕೋಟೆ-ಕೋಲಾರ ಸಂಪರ್ಕ ಕಲ್ಪಿಸುವ ರಾಮಸಮುದ್ರದ ಬಳಿ ತರಕಾರಿ ಅಂಗಡಿ ಇಟ್ಟುಕೊಂಡಿದ್ದರು. ಇವರ ಅಂಗಡಿ ಪಕ್ಕದಲ್ಲಿದ್ದ ಸೊಣ್ಣಪ್ಪ ಎಂಬಾತ ನವೀನ್ ಏಳಿಗೆ ಸಹಿಸುತ್ತಿರಲಿಲ್ಲ. ಹೀಗಾಗಿ, ಕೋಲಾರ ತಾಲೂಕಿನ ಮಹೀಂದ್ರ, ಎಂಬಾತನೊಂದಿಗೆ ಸೇರಿಕೊಂಡು ನವೀನ್ ಕೊಲೆಗೆ ಸುಪಾರಿ ಕೊಟ್ಟಿದ್ದಾನೆ.

ನಂದಗುಡಿ ಪೊಲೀಸರ ತನಿಖೆಯಲ್ಲಿ ಕೊಲೆ ರಹಸ್ಯ ಬಯಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಇಬ್ಬರು ಬಂಧನವಾಗಿದ್ದಾರೆ . ಕೊಲೆ ಪ್ರಕರಣದ ಆರೋಪಿ ಸೊಣ್ಣಪ್ಪ ಅವರ ಹೊಸಕೋಟೆ ಮನೆ ಹಾಗೂ ಮಹೀಂದ್ರ ಅವರ ಕೋಲಾರದ ನಿವಾಸದ ಮೇಲೆ ಕೊಲೆಯಾದ ನವೀನ್ ನಾಯಕ್ ಕುಟುಂಬಸ್ಥರು ದಾಳಿ ನಡೆಸಿದ್ದಾರೆ ಎಂದು ಸೊಣ್ಣಪ್ಪ ತಾಯಿ ಆರೋಪಿಸಿದ್ದಾರೆ. ಮನೆಯಲ್ಲಿನ ಪೀಠೋಪಕರಣಗಳು, ಟಿವಿ, ಫ್ರಿಡ್ಜ್, ಮನೆ ಮುಂದೆ ನಿಲ್ಲಿಸಿದ್ದ ಕಾರು, ಬೈಕ್, ಮನೆ ಮುಂದಿನ ಶೀಟ್‌ಗಳನ್ನೂ ನಾಶ ಮಾಡಲಾಗಿದೆ. ಹೊಸಕೋಟೆ ಗ್ರಾಮಾಂತರ ಠಾಣೆಗೆ ದೂರು ನೀಡಲಾಗಿದೆ.

The Oriental Insurance Co. Ltd.

(Govt. Of India U/Taking)
Regional Office : Leo Shopping Complex, 44/45, Residency Road Cross, Bangalore-560025.
Ph: 080 46616100, **IRDA Reg. No.556 CIN:U66010DL1947GOI007158**

NOTICE

The below mentioned Motor / Fire / Miscellaneous Covernotes of the Company have been lost:

42000056988	CN420000245905	42000037914	DM INDIA31	42000025031	420000509	420000114416	42000038393
420000313065	DCNN29	42000037915	DM INDIA32	42000025032	420000510	420000114417	42000038394
420000313066	DCNN30	42000037914	DM INDIA33	42000025033	421701117	420000114418	42000038395
420000313067	42000055116	42000037915	DM INDIA34	42000025034	421701118	420000114419	42000038396
420000313068	42000055117	DCN13	DM INDIA35	42000025035	421701119	420000114420	42000038397
420000313069	42000055118	DCN14	DM INDIA36	42000025036	421701120	420000430002	42000038398
420000313070	42000055119	421100421100152	DM INDIA37	42000025037	4200002034	420000430003	42000038399
420000313051	42000055120	421100421100153	DM INDIA38	42000025038	4200002035	420000430004	42000038381
420000313052	42000037912	421100421100154	DM INDIA39	42000025039	4200002036	420000430005	42000038382
420000313053	42000037913	421100421100155	DM INDIA40	42000025040	4200002037	420000430006	42000038383
420000313054	42000023861	4200007748	DM INDIA41	42000025041	4200002038	420000430007	42000038384
420000313055	42000023862	4200007748	DM INDIA42	42000025042	4200002039	420000430008	42000038385
420000313056	42000023863	4200007749	DM INDIA43	42000018905	4200002040	420000430009	42000038386
420000313057	42000023864	42000011796	DM INDIA44	42000018906	CN-4200001004	420000430010	42000038387
420000313058	42000023865	42000011805	DM INDIA45	42000018907	CN-4200001005	42000016571	42000038388
420000313059	42000026702	42000011806	DM INDIA46	42000034391	CN-4200001006	42000016574	42000038389
420000313060	42000026703	42000011807	DM INDIA47	42000034392	CN-4200001007	42000016573	42000018367
420000313041	42000026704	42000011809	DM INDIA48	42000034393	CN-4200001008	420000609605	42000018368
420000313042	42000026705	42000011810	DM INDIA49	42000034394	CN-4200001009	420000609606	42000018369
420000313043	42000026706	420000CN6813435	DM INDIA50	42000034395	CN-4200001010	420000609607	42000018370
420000313044	42000026707	420000CN6813435	DM INDIA51	42000034396	4200003835	420000609608	42000038370
420000313045	42000026708	421200194949	DM INDIA52	42000034397	4200003836	420000609609	42000038371
420000313046	42000026709	42000015441	DM INDIA53	42000034398	4200003837	420000609610	42000038372
420000313047	42000026710	42000014064	DM INDIA54	42000034399	4200003838	42000056126	42000038373
420000313048	42000026711	42000010429	DM INDIA55	4200002226	4200003839	42000056127	42000038374
420000313049	42000023866	42000057584	DM INDIA56	4200002227	4200003840	42000056128	42000038375
420000313050	42000023867	42000018612	DM INDIA57	4200002228	42000057130	42000056129	42000038376
420000313031	42000023868	420000192774	DM INDIA58	4200002229	42000057131	4200003295	42000038377
420000313032	42000023869	42000018027	DM INDIA59	4200002230	42000057132	42000036732	42000038378
420000313033	42000023870	42000051526	DM INDIA60	4200006813239	42000057133	42000036733	42000038379
420000313034	4211007	42000051527	4200001	4200006813240	42000057134	4200002896	42000018361
420000313035	4211008	42000051528	4200002	42000067585	42000057135	4200002897	42000018362
420000313036	42110042110033	42000051529	4200003	42000067586	42000057136	4200002898	4200006814271
420000313037	42110042110034	42000015449	4200004	42000067587	42000057137	4200002899	423100402
420000313038	42110042110035	42000015450	4200005	42000041821	4200002711	4200002900	4200003455
420000313039	42110042110036	42000051525	4200006	42000041822	4200002712	42000020983	4200003456
420000313040	42110042110037	4200003014	4200007	42000041823	4200003758	42000020984	4200003457
420000313021	42110042110038	4200003017	4200008	42000041824	4200003759	42000020985	4200003458
420000313022	42110042110039	4200003018	4200009	421701101	4200003760	42000020986	4200003459
420000313023	42110042110040	4200003019	42000010	421701102	420000191527	42000020987	4200003460
420000313024	42110042110041	4200003020	CN218611	421701103	420000191529	42000020988	4200003490
420000313025	42110042110042	42000057413	DCN222	421701104	420000191530	42000020989	420000670942
420000313026	42110042110043	42000057414	CN-42000054937	421701105	420000CN25449	42000020990	420000670943
420000313027	42110042110044	42000057415	CN-42000054938	421701106	4200005302	42000020991	420000670944
420000313028	42110042110045	42000057416	CN-42000054939	421701107	4200005303	42000020992	420000670945
420000313029	42110042110046	42000057417	CN-42000054940	421701108	4200005304	42000020993	420000670946
420000313030	42110042110047	42000031564	CN4200001757	421701109	4200005305	42000020994	420000670947
420000313011	42110042110048	42000031565	CN4200001758	421701110	4200005306	42000020995	420000670948
420000313012	42110042110049	42000031566	CN4200001759	4200002295	4200005307	42000020996	420000670949
420000313013	42110042110050	DM INDIA13	CN4200001760	4200002052	4200005308	42000020997	420000670950
420000313014	42110042110051	DM INDIA14	42000025015	4200002053	4200005309	42000020998	4200003063
420000313015	4200002553	DM INDIA15	42000025016	4200002054	4200005310	42000020999	4200003064
420000313016	4200002554	DM INDIA16	42000025017	4200002055	4200005232	42000021000	4200003065
420000313017	4200002555	DM INDIA17	42000025018	4200002056	4200005233	42000021001	4200003066
420000313018	4200002556	DM INDIA18	42000025019	4200002057	4200005234	42000036788	4200003067
420000313019	4200002557	DM INDIA19	42000025020	4200002058	4200005235	42000034488	4200003068
420000313020	4200002558	DM INDIA20	42000025021	4200002059	4200005236	42000034489	4200003069
420000313001	4200002559	DM INDIA21	42000025022	4200002060	4200005237	42000034490	4200003070
420000313002	42110055	DM INDIA22	42000025023	421701169	4200005238	42000034491	4200002533
420000313003	42110056	DM INDIA23	42000025024	421701170	4200005239	DMCN4231003	4200002534
420000313004	42110057	DM INDIA24	42000025025	420000503	4200005240	DMCN4231002	4200002535
420000313005	42110058	DM INDIA25	42000025026	420000504	420000114411	42000018363	4200002536
420000313006	42110059	DM INDIA26	42000025027	420000505	420000114412	42000018364	4200002537
420000313007	42110060	DM INDIA27	42000025028	420000506	420000114413	42000018365	4200002538
420000313008		DM INDIA28	42000025029	420000507	420000114414	42000018366	4200002539
420000313009		DM INDIA29	42000025030	420000508	420000114415	42000038392	4200002540
420000313010		DM INDIA30					

Police Report has been lodged vide LR No. 1127101/2024 dated 03-07-2024
The Company shall not be liable for any loss or liability arising due to the misuse of the above covernotes.
Finder may return to: The Oriental Insurance Company Limited, Leo Shopping Complex, Residency road cross, Bangalore-25.

Sd/- Deputy General Manager

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ ವಸ್ತಾರೆ | ಕಳೆದ ಕೆಲ ತಿಂಗಳಿನಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಕಲಾವಿದೆ

ಕಳಚಿತು ಅಚ್ಚ ಕನ್ನಡದ ಕೊಂಡಿ

ಬೆಂಗಳೂರು: ಸ್ಪಷ್ಟ ಕನ್ನಡದ ಮೂಲಕವೇ ಮನೆ ಮಾತಾಗಿದ್ದ, ಕನ್ನಡ ಭಾಷೆಗೆ ಸಂಬಂಧಿಸಿದ ಯಾವುದೇ ವೇದಿಕೆಯಿದ್ದರೂ ನಿರೂಪಣೆ ಮೂಲಕವೇ ಕೋಟಿ ಕೋಟಿ ಜನರ ಮನ ಗೆದ್ದಿದ್ದ ಹಿರಿಯ ನಿರೂಪಕಿ, ನಟಿ ಅಪರ್ಣಾ ವಸ್ತಾರೆ ಗುರುವಾರ ರಾತ್ರಿ ಕೊನೆಯುಸಿರು ಎಳೆದಿದ್ದಾರೆ.

57 ವರ್ಷದ ಅಪರ್ಣಾ ಅವರು ಕಳೆದ ಮೂರು ನಾಲ್ಕು ತಿಂಗಳಿನಿಂದ ಕ್ಯಾನ್ಸರ್ ಉಲ್ಬಣ ಗೊಳಿಸಿದ್ದರಿಂದ ಸಾರ್ವಜನಿಕವಾಗಿ ಕಾಣಿಸಿಕೊಂಡಿ ರಲಿಲ್ಲ. ಕೆಲ ದಿನಗಳಿಂದ ಅನಾರೋಗ್ಯ ತೀವ್ರ ಗೊಂಡ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. ಗುರುವಾರ ರಾತ್ರಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರು ಎಳೆದಿದ್ದಾರೆ. ಅಪರ್ಣಾ ಸಾವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ವಿವಿಧ ನಾಯಕರು, ಸಾಹಿತಿಗಳು, ಚಿತ್ರನಟರು ಸಂತಾಪ ವ್ಯಕ್ತಪಡಿಸಿದ್ದಾರೆ.

ಬಹುತೇಕ ಸರಕಾರಿ ಕಾರ್ಯಕ್ರಮಕ್ಕೆ ಖಾಯಂ ನಿರೂಪಕಿ: ಅಚ್ಚ-ಸ್ಪಷ್ಟ ಕನ್ನಡದ ಮೂಲಕ ರಾಜ್ಯದ ನಿರೂಪಕರಿಗೆ ಮಾದರಿಯಾಗಿದ್ದ ಅಪರ್ಣಾ ಅವರು ಕಳೆದ ಎರಡು ದಶಕಗಳಿಂದ ರಾಜ್ಯದ ಬಹುತೇಕ ಸರಕಾರಿ ಕಾರ್ಯಕ್ರಮಗಳಲ್ಲಿ ನಿರೂಪಕಿಯಾಗಿ ಕಾಣಿಸಿಕೊಳ್ಳುತ್ತಿದ್ದರು.

ಇದರೊಂದಿಗೆ ಬೆಂಗಳೂರು ನಮ್ಮ ಮೆಟ್ರೋದಲ್ಲಿ ಕನ್ನಡದ ಉದ್ಘೋಷಣೆಯೂ ಅಪರ್ಣಾ ಅವರ ಧ್ವನಿಯಲ್ಲಿಯೇ ಇದೆ. ಇನ್ನು ಯಾವುದೇ ಬೃಹತ್ ಕಾರ್ಯಕ್ರಮಗಳಿದ್ದರೂ, ಅದರಲ್ಲಿ ಅಪರ್ಣಾ ನಿರೂಪಣೆ ಇರುತ್ತಿತ್ತು ಎಂದರೆ ಅತಿಶಯೋಕ್ತಿಯಲ್ಲ.

- ಮಸಣದ ಹೂವು ಸೇರಿದಂತೆ ಹತ್ತಾರು ಚಿತ್ರಗಳಲ್ಲಿ ಅಭಿನಯ
- ಮೂಡಲಮನೆ, ಮುಕ್ತ ಸೇರಿದಂತೆ ಹಲವು ಕಿರುತರೆಯಲ್ಲಿ ಅಭಿನಯ
- ದೂರದರ್ಶನದ ಮೂಲಕ ನಿರೂಪಕಿಯಾಗಿ ಪಾದಾರ್ಪಣೆ
- ಮಜಾ ಟಾಕೀಸ್‌ನಲ್ಲಿ ವರಲಕ್ಷ್ಮೀಯಾಗಿ ನಗಿಸಿದ್ದ ಅಪರ್ಣಾ
- ಬಿಗ್ ಬಾಸ್ ಮೊದಲ ಸೀಸನ್‌ನಲ್ಲಿ ಭಾಗಿ

89ರಲ್ಲಿ ನಿರೂಪಕಿಯಾಗಿ ವೃತ್ತಿ ಆರಂಭ

ಅಪರ್ಣಾ 1989ರಲ್ಲಿ ನಿರೂಪಕಿಯಾಗಿ ದೂರದರ್ಶನಕ್ಕೆ ಸೇರಿದ ಅಪರ್ಣಾ ಅವರು, ಅದಕ್ಕೂ ಮೊದಲು 1984ರಲ್ಲಿ ತೆರೆಕಂಡ ಪುಟ್ಟಣ್ಣ ಕಣಗಾಲ್ ಅವರ ಮಸಣದ ಹೂವು ಚಿತ್ರದಿಂದ ಬೆಳಕಿಗೆ ಬಂದವರು. ನಂತರ ಇನ್ಸ್‌ಪೆಕ್ಟರ್ ವಿಕ್ರಮ್ ಸೇರಿ ಹಲವು ಚಿತ್ರಗಳಲ್ಲಿ ನಟಿಸಿದರು.90ರ ದಶಕದಲ್ಲೇ ಚಂದನ ವಾಹಿನಿ ಯಲ್ಲಿ ಹಲವು ಕಾರ್ಯಕ್ರಮಗಳನ್ನು ನಿರೂಪಿಸಿದರು ಅಪರ್ಣಾ. ನಂತರ ರೇಡಿಯೋ ಜಾಕಿಯಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ. 1998 ರಲ್ಲೇ ದೀಪಾವಳಿ ಕಾರ್ಯಕ್ರಮದಲ್ಲಿ 8 ಗಂಟೆಗಳ ನಿರೂಪಣೆ ಮಾಡಿ ದಾಖಲೆ ಬರೆದಿದ್ದರು.ಮೂಡಲ ಮನೆ, ಮುಕ್ತ ಮುಂತಾದ ಧಾರಾವಾಹಿಗಳಲ್ಲಿ ನಟಿಸಿದ್ರು. 2013ರಲ್ಲಿ ಬಿಗ್ ಬಾಸ್ ಕನ್ನಡದ ಮೊದಲ ಸೀಸನ್ ನಲ್ಲಿ ಭಾಗವಹಿಸಿದ್ದರು. 2015ರಲ್ಲಿ ಸೃಜನ್ ಲೋಕೇಶ್ ನೇತೃತ್ವದಲ್ಲಿ ಆರಂಭವಾದ 'ಮಜಾ ಟಾಕೀಸ್ ಕಾರ್ಯಕ್ರಮದಲ್ಲಿ ವರಲಕ್ಷ್ಮಿ ಪಾತ್ರ ಮಾಡಿದ್ದಾರೆ.



ನಟಿ, ಖ್ಯಾತ ನಿರೂಪಕಿ ಅಪರ್ಣಾ ಅವರ ನಿಧನದ ಸುದ್ದಿ ತಿಳಿದು ನೋವಾಯಿತು. ಸರಕಾರಿ ಸಮಾರಂಭಗಳು ಸೇರಿದಂತೆ ಕನ್ನಡದ ಪ್ರಮುಖ ವಾಹಿನಿಗಳ ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ನಿರೂಪಣೆ ಮಾಡುತ್ತಾ ನಾಡಿನ ಮನೆ ಮಾತಾಗಿದ್ದ ಬಹುಮುಖ ಪ್ರತಿಭೆ ಬಹುಬೇಗ ನಮ್ಮನ್ನು ಅಗಲಿರುವುದು ದುಃಖದ ಸಂಗತಿ. ಅಪರ್ಣಾಳ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಸಿಗಲೆಂದು ಪ್ರಾರ್ಥಿಸುತ್ತೇನೆ.
-ಸಿದ್ದರಾಮಯ್ಯ, ಸಿಎಂ

1984ರಲ್ಲಿ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಮಸಣದ ಹೂ ಚಿತ್ರದ ಮೂಲಕ ಬೆಳ್ಳಿ ಪರದೆಗೆ ಪ್ರವೇಶ ಮಾಡಿದ್ದ ಅಪರ್ಣಾ ಅವರು ತಮ್ಮ ಅಚ್ಚ ಕನ್ನಡದ ಶೈಲಿಯ ನಿರೂಪಣೆ ಮೂಲಕ ರಾಜ್ಯದ ಜನತೆಯ ಮನ ಗೆದ್ದಿದ್ದರು. ಸರಕಾರಿ ಕಾರ್ಯಕ್ರಮ ಅಥವಾ ಯಾವುದೇ ಪ್ರಮುಖ ಕಾರ್ಯಕ್ರಮವಾದರೆ ಅಲ್ಲಿ ಅಪರ್ಣಾ ಅವರೇ ನಿರೂಪಕಿಯಾಗಿರುತ್ತಿದ್ದರು. ಕಿರಿಯ ವಯಸ್ಸಿನಲ್ಲೇ ನಮ್ಮನ್ನು ಅಗಲಿರುವುದು ದುಃಖ ತರಿಸಿದೆ.
- ಶಿವರಾಜ್ ತಂಗಡಗಿ, ಸಚಿವ

ಕನ್ನಡದ ಖ್ಯಾತ ನಿರೂಪಕಿ ಅಪರ್ಣಾ ಅವರ ನಿಧನದ ಸುದ್ದಿ ಕೇಳಿ ಮನಸಿಗೆ ಅತ್ಯಂತ ನೋವಾಯಿತು. ಸರಳ ಕನ್ನಡದಲ್ಲಿ ಸುಂದರವಾಗಿ ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವ ಮೂಲಕ ಎಲ್ಲರ ಮನೆ ಮಾತಾಗಿದ್ದರು. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ, ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಅವರ ಅಭಿಮಾನಿಗಳು ಹಾಗೂ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.
-ಬಸವರಾಜ ಬೊಮ್ಮಾಯಿ, ಸಂಸದ

ದಿವ್ಯಾ ವಸಂತ ಬಂಧನ

ಬೆಂಗಳೂರು: ಸ್ಪಾ ಮಾಲೀಕರಿಗೆ ಬ್ಲ್ಯಾಕ್ ಮೇಲ್ ಮಾಡಿ ಹಣ ಸುಲಿಗೆ ಯತ್ನ ಪ್ರಕರಣದಲ್ಲಿ ಬೆಂಗಳೂರಿನ ಜೀವನ್ ಭೀಮಾನಗರ ಪೊಲೀಸರು ಆರೋಪಿ ದಿವ್ಯಾ ವಸಂತ ಅವರನ್ನು ಬಂಧಿಸಿದ್ದಾರೆ.



ಪ್ರಕರಣ ದಾಖಲಾಗಿದ್ದೇ ಬೆಂಗಳೂರು ನಗರದಿಂದ ಕಾಲ್ಕಿತ್ತಿದ್ದ ಆರೋಪಿ ದಿವ್ಯಾ ವಸಂತ ಬಂಧನಕ್ಕೆ ಪೊಲೀಸರು ವಿಶೇಷ ತಂಡ ರಚನೆ ಮಾಡಿ ದ್ದರು. ಕಳೆದ ಒಂದು ವಾರದಿಂದ ದಿವ್ಯಾ ವಸಂತಗಾಗಿ ಹುಡು ಕಾಟ ನಡೆಸಲಾಗಿತ್ತು. ಬೆಂಗಳೂರಿನಿಂದ ತಮಿಳು ನಾಡಿಗೆ ತೆರಳಿದ್ದ ದಿವ್ಯಾ ವಸಂತ, ಅಲ್ಲಿಂದ ಕೇರಳಕ್ಕೆ ಹೋಗಿದ್ದರು. ಕೇರಳದಲ್ಲಿಯೇ ದಿವ್ಯಾ ವಸಂತ ಪೊಲೀಸರ ಬಂಧನಕ್ಕೆ ಈಡಾಗಿದ್ದಾರೆ.

ರಹಸ್ಯ ಕಾರ್ಯಾಚರಣೆಯ ನೆಪದಲ್ಲಿ ಸ್ಪಾ ಮ್ಯಾನೇಜರ್‌ಗೆ ಬ್ಲ್ಯಾಕ್ ಮೇಲ್ ಮಾಡಿ ಲಕ್ಷ ಲಕ್ಷ ಹಣಕ್ಕೆ ಬೇಡಿಕೆ ಇಟ್ಟ ಆರೋಪದ ಮೇರೆಗೆ ಪೊಲೀಸರು ಖಾಸಗಿ ಚಾನಲ್‌ನ ಇಬ್ಬರು ಸಿಬ್ಬಂದಿಯನ್ನು ಬಂಧಿಸಿರುವ ಮಾಹಿತಿ ಲಭ್ಯವಾಗಿದೆ. ಅಲ್ಲದೇ, ಆರೋಪಿ ಗಳಿಗೆ ಸ್ನೇಹಿತೆ ದಿವ್ಯಾ ವಸಂತ ಎಂಬ ಯುವತಿ ಸಹಾಯ ಮಾಡಿರುವ ಆರೋಪ ಕೇಳಿ ಬಂದಿತ್ತು. ಮಸಾಜ್ ಪಾರ್ಲರ್‌ನಲ್ಲಿ ರಹಸ್ಯ ಕಾರ್ಯಾಚರಣೆ ನೆಪದಲ್ಲಿ ಸುಲಿಗೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಖಾಸಗಿ ಚಾನೆಲ್ ನಲ್ಲಿ ಕೆಲಸ ಮಾಡುತ್ತಿದ್ದ ರಾಜಾನುಕುಂಟೆ ವೆಂಕಟೇಶ್ ಮತ್ತು ಸಂದೇಶ್ ಎಂಬ ಆರೋಪಿಗಳನ್ನು ಬಂಧಿಸಲಾಗಿತ್ತು.

ಏನಿದು ಪ್ರಕರಣ?

ಬೆಂಗಳೂರಿನ ಇಂದಿರಾನಗರದ ಟ್ರೀ ಸ್ಪಾ ಬ್ಯೂಟಿ ಆ್ಯಂಡ್ ಮಸಾಜ್ ಪಾರ್ಲರ್ ಮೇಲೆ ರಹಸ್ಯ ಕಾರ್ಯಾಚರಣೆ ಹೆಸರಿನಲ್ಲಿ ಮಾಡಿದ ವಿಡಿಯೊಗಳನ್ನು ಸಂಗ್ರಹಿಸಿ ಬೆದರಿಸಿದ ಆರೋಪ ಇದಾಗಿದೆ. ವಿಡಿಯೊ ತೋರಿಸಿ ಸ್ಪಾ ಮ್ಯಾನೇಜರ್ ಶಿವಶಂಕರ್‌ಗೆ 15 ಲಕ್ಷ ಹಣಕ್ಕೆ ಬೇಡಿಕೆ ಇಟ್ಟು, ಕೊನೆಗೆ 8 ಲಕ್ಷ ರೂಪಾಯಿ ಡೀಲ್ ನೀಡುವಂತೆ ತಾಕೀತು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.



ಕೇಂದ್ರ ಹಣಕಾಸು ಇಲಾಖೆಗೆ 1838 ಕೋಟಿ ರು. ಚೆಕ್ ಅನ್ನು ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಸತ್ಯನಾರಾಯಣ ರಾಜು ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ನೀಡಿದರು. ಕೆನರಾಬ್ಯಾಂಕ್‌ನ ಅಧಿಕಾರಿಗಳು ಉಪಸ್ಥಿತರಿದ್ದರು.

ಲಾರಿಗೆ ಬೆಂಕಿ: 40 ದ್ವಿಚಕ್ರ ವಾಹನ ಭಸ್ಮ

ಬೆಂಗಳೂರು: ಚಲಿಸುತ್ತಿದ್ದ ಕಂಟೇನರ್ ಲಾರಿಗೆ ವಿದ್ಯುತ್ ತಂತಿ ತಗುಲಿ ಬೆಂಕಿ ಹೊತ್ತಿಕೊಂಡು 40 ದ್ವಿಚಕ್ರ ವಾಹನ ಗಳು ಸುಟ್ಟ ಭಸ್ಮವಾಗಿ ಅದೃಷ್ಟವಶಾತ್ ಚಾಲಕ ಹಾಗೂ ಕ್ಲೀನರ್ ಪಾರಾಗಿರುವ ಘಟನೆ ಆನೇಕಲ್‌ನ ರಾಷ್ಟ್ರೀಯ ಹೆದ್ದಾರಿಯ ರಾಯಕೋಟೆ ಸಮೀಪದ ಕೆಲಮಂಗಳ ಬಳಿ ನಡೆದಿದೆ. ಕೆಲಮಂಗಳ ಬಳಿಯ ಧಮ್ಮನರಹಳ್ಳಿ ದ್ವಿಚಕ್ರ ವಾಹನ 'ಗಳನ್ನು ತುಂಬಿಕೊಂಡು ಚಲಿಸುತ್ತಿದ್ದ ಕಂಟೇನರ್ ಲಾರಿಗೆ ವಿದ್ಯುತ್ ತಂತಿ ತಗುಲಿ ಬೆಂಕಿ ಹೊತ್ತಿದ ತಕ್ಷಣವೇ ಚಾಲಕ ಹಾಗೂ ಕ್ಲೀನರ್ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಟಿವಿಎಸ್ ಕಂಪನಿಯ ಸುಮಾರು 40 ದ್ವಿಚಕ್ರ ವಾಹನ ಗಳನ್ನು ಕಂಟೇನರ್ ಮೂಲಕ ಉತ್ತನಹಳ್ಳಿಯ ಗೋದಾಮಿನಿಂದ ಕೊತ್ತಕೊಂಡಹಳ್ಳಿಗೆ ಕೊಂಡೊಯ್ಯುತ್ತಿದ್ದಾಗ ಕಂಟೇನರ್ ವಾಹನಕ್ಕೆ ವಿದ್ಯುತ್ ತಂತಿ ತಗುಲಿ ಬೆಂಕಿ ಕಾಣಿಸಿ ಕೊಂಡಿದೆ. ನೋಡನೋಡುತ್ತಿದ್ದಂತೆ 30 ಲಕ್ಷ ಬೆಲೆಬಾಳುವ 40 ದ್ವಿಚಕ್ರ ವಾಹನಗಳು ಬೆಂಕಿಗಾಹುತಿ ಆಗಿವೆ. ಅದೃಷ್ಟವ ಶಾತ್ ಬೆಂಕಿ ಕಾಣಿಸಿಕೊಳ್ಳುತ್ತಿದ್ದ ಚಾಲಕ ಹಾಗೂ ಕ್ಲೀನರ್ ಜಿಗಿದು ಪ್ರಾಣವನ್ನು ಉಳಿಸಿಕೊಂಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿ ಭೇಟಿ ನೀಡಿ ಬೆಂಕಿಯನ್ನು ನಂದಿಸಿದ್ದಾರೆ.

ಚಾರ್ಜ್‌ಶೀಟ್ ಸಲ್ಲಿಕೆ ಬಳಿಕ ಜೈಲಲ್ಲಿ ಇರಿಸಲಾಗಲ್ಲ

ಬೆಂಗಳೂರು: ಕ್ರಿಮಿನಲ್ ಪ್ರಕರಣಗಳಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ಬಳಿಕವೂ ಆರೋಪಿಯನ್ನು ಬಂಧನದಲ್ಲಿ ಇರಿಸಿ ವಿಚಾರಣೆ ಮುಂದುವರಿಸಿದರೆ ಅದು ವಿಚಾರಣಾ ಪೂರ್ವ ಶಿಕ್ಷೆಯಾಗಲಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಜೋಡಿ ಕೊಲೆ ಮಾಡಿದ್ದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ಎಂ.ಬಿ.ಸಂತೋಷ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ಪಟ್ಟಿದೆ.

ಅಲ್ಲದೇ, ಜಾಮೀನು ಮಂಜೂರು ಮಾಡಿ ಆದೇಶಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿ, ಪ್ರಕರಣದ ಸಂಬಂಧ ದೂರು ದಾಖ ಲಿಸಿಕೊಂಡಿದ್ದ ಪೊಲೀಸರು ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ. ಆದರೂ, ಅರ್ಜಿದಾರರನ್ನು ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ.

ಹೀಗಾಗಿ ಜಾಮೀನು ಮಂಜೂರು ಮಾಡಬೇಕು ಎಂದು ಮನವಿ ಮಾಡಿದರು. ಈ ಅಂಶವನ್ನು ಪರಿಗಣಿಸಿದ ನ್ಯಾಯಪೀಠ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಪ್ರಕರಣದ ಹಿನ್ನೆಲೆ ಏನು?

ಸಂತೋಷ್ ಅವರಿಗೆ ಸಂಬಂಧಿಸಿದ ಮೂಡಿಗೆರೆ ತಾಲೂಕು ಬಣಕಲ್ ಗ್ರಾಮದಲ್ಲಿದ್ದ ಕೃಷಿ ಜಮೀನನ್ನು ಕಾರ್ತಿಕ್ ಮಧ್ಯವರ್ತಿಯಾಗಿ ಮಾರಾಟ ಮಾಡಿಸಿದ್ದರು. ಮಾರಾಟದ ನಂತರ ತನಗೆ ಬರಬೇಕಾದ ಲಾಭದ ಹಣಕ್ಕೆ ಕಾರ್ತಿಕ್ ಮೋಸ ಮಾಡಿದ್ದಾರೆ ಎಂದು ಸಂತೋಷ್ ತಗಾದೆ ತೆಗೆದಿದ್ದರು. ಈ ಸಂಬಂಧ 2023ರ ಆಗಸ್ಟ್ 13ರಂದು ತಮ್ಮ ಮನೆಯಲ್ಲಿ ಕಾರ್ತಿಕ್ ಜತೆ ಮಾತುಕತೆ ನಡೆಸುತ್ತಿದ್ದ ಸಮಯದಲ್ಲಿ ಆತನ ಮೇಲೆ ಹಲ್ಲೆ ಸಹ ಮಾಡಿದ್ದ. ಸ್ಥಳದಲ್ಲಿಯೇ ಇದ್ದ ಸಂತೋಷ್ ಅವರ ತಂದೆ ಭಾಸ್ಕರಗೌಡ ಇದನ್ನು ತಡೆಯಲು ಮುಂದಾದಾಗ ಅವರ ಮೇಲೂ ಹಾಗೂ ಅವರ ತಾಯಿ ಪ್ರೇಮಾ ಅವರ ಮೇಲೂ ಹಲ್ಲೆ ನಡೆಸಿದ್ದನು. ಕಾರ್ತಿಕ್ ಸ್ಥಳದಲ್ಲೇ ಮೃತಪಟ್ಟರೆ ಭಾಸ್ಕರಗೌಡ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ನಂತರ ಅವರೂ ಮೃತಪಟ್ಟಿದ್ದರು. ಈ ಸಂಬಂಧ ಕಾರ್ತಿಕ್ ಪತ್ನಿ ಶಾಂಭವಿ ಬಾಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದು ದೋಷಾರೋಪಣ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ನಂದನ ಪ್ಯಾಲೇಸ್ 25ನೇ ಶಾಖೆ ಆರಂಭ

ಬೆಂಗಳೂರು: ದೇವನಹಳ್ಳಿಯಲ್ಲಿ ಇರುವ ನಂದನ ಪ್ಯಾಲೇಸ್ ತನ್ನ 25ನೇ ಶಾಖೆಯನ್ನು ನಟ ರಮೇಶ್ ಅರವಿಂದ್ ನೆರವೇರಿಸಿದರು.

ಈ ವೇಳೆ ನಂದನ ಪ್ಯಾಲೇಸ್ ನ ಚೇರ್ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕ, ಡಾ. ಆರ್. ರವಿಚಂದರ್ ಮಾತನಾಡಿ, ಗ್ರಾಹಕರು ನಮ್ಮ ಹೋಟೆಲ್ ಮೇಲಿಟ್ಟಿರುವ ವಿಶ್ವಾಸ ಮತ್ತು ನಂಬಿಕೆಯಿಂದಾಗಿ ನಾವು ಹೊಸ ಶಾಖೆಯನ್ನು ತೆರೆಯಲು ಸ್ಫೂರ್ತಿಯಾಗಿದೆ. ಇದು ನಮ್ಮ 25ನೇ ಶಾಖೆಯಾಗಿದ್ದು. 1989 ರಿಂದ ಆಹಾರೋದ್ಯಮ ಕ್ಷೇತ್ರದಲ್ಲಿದ್ದೇನೆ. ನಮ್ಮಲ್ಲಿ ಹಲವಾರು ಖಾದ್ಯಗಳು ಹೆಚ್ಚು ಜನಪ್ರಿಯವಾಗಿವೆ. ಗ್ರಾಹಕರಿಗೆ ಗುಣಮಟ್ಟದ, ರುಚಿಕರವಾದ ಖಾದ್ಯಗಳನ್ನು ನೀಡುವುದು ನಮ್ಮ ಧ್ಯೇಯ ಎಂಬ ಘೋಷವಾಕ್ಯ ದೊಂದಿಗೆ, ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಶಾಖೆಗಳ ವಿಸ್ತರಣೆ ಮಾಡುತ್ತಿದ್ದೇವೆ ಎಂದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಯಾವತ್ತೂ ಉತ್ತಮ ಕೇಳುಗರಾಗುವುದು ಬಹಳ ಮುಖ್ಯ. ನಿಮ್ಮ ಕಿವಿ ನಿಮ್ಮನ್ನು ಎಂದೂ ಅಪಾಯಕ್ಕೆ ಸಿಲುಕಿಸಲಾರದು. ತನ್ನ ಕೆಲಸ ಮಾಡಿಯೂ, ಯಾರಿಗೂ ಗೊತ್ತಾಗದಂತೆ, ತನ್ನ ಪಾಡಿಗೆ ಇರುವ ಅಂಗಗಳಲ್ಲಿ ಒಂದೂ ಒಂದು. ಕಿವಿಯ ಮೇಲೆ ಹೆಚ್ಚು ಅವಲಂಬಿತರಾಗಬಹುದು.

ವಕ್ರತುಂಡೋಕ್ತಿ

ನಗುವಿನಂಥ ಔಷಧ ಮತ್ತೊಂದಿಲ್ಲ. ಆದರೆ ಡಯಾರಿಯಾ ರೋಗಿಗಳನ್ನು ಟ್ರೀಟ್ ಮಾಡುವಾಗ ಈ ಮಾತು ಅನ್ವಯಿಸುವುದಿಲ್ಲ.

ನಟಿ, ನಿರೂಪಕಿ ಅಪರ್ಣಾ ಇನ್ನಿಲ್ಲ

ತಮ್ಮ ಸೊಗಸಾದ ನಿರೂಪಣೆಯಿಂದ ರಾಜ್ಯದಲ್ಲಿ ಮನೆಮಾತಾಗಿದ್ದ ನಟಿ ಅಪರ್ಣಾ (57) ಅನಾರೋಗ್ಯದಿಂದ ಗುರುವಾರ ಕೊನೆಯುಸಿರೆಳೆದಿದ್ದಾರೆ. ಮಸಣದ ಹೂವು ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದ್ದ ಅವರು ಇನ್ಸ್‌ಪೆಕ್ಟರ್ ವಿಕ್ರಮ್ ಸೇರಿದಂತೆ ಹಲವು ಚಿತ್ರಗಳಲ್ಲಿ, ಧಾರಾವಾಹಿಗಳಲ್ಲಿ ನಟಿಸಿದ್ದರು.

ನಾಗೇಂದ್ರ ಆಪ್ತ ಸಹಾಯಕ ಹರೀಶ್, ದದ್ದಲ್ ಪಿಎ ಪಂಪಣ್ಣಗೆ ಪ್ರಶ್ನೆಗಳ ಸುರಿಮಳೆ

ಕೋಟ್ಯಂತರ ವರ್ಗಾವಣೆ ಮಾಡಿರುವುದನ್ನು ಬಾಯಿಬಿಟ್ಟ ನಾಗೇಂದ್ರ, ದದ್ದಲ್ ಆಪ್ತರು

ಮುಂದುವರಿದ ಇಡಿ ರೇಡ್

ಬೆಂಗಳೂರು: ವಾಲ್ಮೀಕಿ ನಿಗಮದ ಅಕ್ರಮ ಪ್ರಕರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ, ಶಾಸಕ ಬಸನಗೌಡ ದದ್ದಲ್ ಜಾರಿ ನಿರ್ದೇಶನಾಲಯ (ಇ.ಡಿ) ಇಕ್ಕಳಕ್ಕೆ ಸಿಲುಕಿದ್ದು, ಯಾವುದೇ ಕ್ಷಣದಲ್ಲೂ ಬಂಧನವಾಗುವ ಸಾಧ್ಯತೆ ಇದೆ.

ಬಹುಕೋಟಿ ರುಪಾಯಿಗಳ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಅಧಿ ಕಾರಿಗಳ ದಾಳಿಯು ಎರಡನೇ ದಿನವೂ ಮುಂದುವರಿದಿದ್ದು, ವಿಚಾರಣೆ ವೇಳೆ ಮಾಜಿ ಸಚಿವ ನಾಗೇಂದ್ರ ಹಾಗೂ ಶಾಸಕ ಬಸನಗೌಡ ದದ್ದಲ್ ಆಪ್ತರು ಕೋಟ್ಯಂತರ ಹಣದ ವರ್ಗಾವಣೆ ಮಾಡಿರುವುದನ್ನು ಬಾಯ್ಬಿಟ್ಟಿದ್ದಾರೆ. ದಾಳಿಯಲ್ಲಿ ದೊರೆತ ಅಕ್ರಮ ವ್ಯವಹಾರದ ದಾಖಲೆಪತ್ರಗಳು ಹಾಗೂ ಆಪ್ತರು ವಿಚಾ ರಣೆ ಯಾವುದೇ ಕ್ಷಣದಲ್ಲಿ ಶಾಸಕರಿಬ್ಬರನ್ನು ವಶಕ್ಕೆ ಪಡೆಯಬ ಹುದು ಎನ್ನುವುದು ಇ.ಡಿ ಮೂಲಗಳಿಂದ ತಿಳಿದುಬಂದಿದೆ.

ನಾಗೇಂದ್ರ ಆಪ್ತ ಸಹಾಯಕ ಹರೀಶ್‌ನನ್ನೂ ವಶಕ್ಕೆ ಪಡೆದು ಇ.ಡಿ ಅಧಿಕಾರಿಗಳು ಪ್ರಶ್ನೆಗಳ ಸುರಿಮಳೆಗೈದಿದ್ದಾರೆ. ಮೊದಲಿಗೆ ನಾಗೇಂದ್ರ ಮನೆಯಲ್ಲಿ ಅವರ ಮುಂದೆಯೇ ಕೂರಿಸಿ ಇ.ಡಿ ತಂಡ ಹರೀಶ್‌ಗೆ ಡ್ರಿಲ್ ಮಾಡಿತ್ತು. ಆದರೆ ನಾಗೇಂದ್ರ ಮುಖ ನೋಡಿ ಹೆದರಿಕೊಳ್ಳುತ್ತಿದ್ದ ಹರೀಶ್ ಯಾವುದೇ ಮಾಹಿತಿ ನೀಡುತ್ತಿರಲಿಲ್ಲ. ಹೀಗಾಗಿ ಆತನನ್ನು ಶಾಂತಿನಗರ ಕಚೇರಿಗೆ ಕರೆತಂದು ವಿಚಾರಣೆ ಮಾಡಲಾಯಿತು. ಹಲವು ಪ್ರಶ್ನೆಗಳನ್ನು ಕೇಳಿದ್ದು, ಹರೀಶ್ ಹೇಳಿಕೆ ಮೇಲೆಯೇ ಬಿ.ನಾಗೇಂದ್ರ ಭವಿಷ್ಯ ನಿಂತಿದೆ.

→ 4

ದಿಗ್ಬಂಧನ

ಎರಡು ದಿನಗಳ ಬಳಿಕವೂ ವಿಚಾರಣೆ ಮುಂದುವರಿಸಿರುವ ಇ.ಡಿ ಅಧಿಕಾರಿಗಳು, ಶಾಸಕರಾದ ಬಿ. ನಾಗೇಂದ್ರ ಮತ್ತು ಬಸನಗೌಡ ದದ್ದಲ್ ಅವರನ್ನು ಅವರ ಮನೆಗಳಲ್ಲೇ ದಿಗ್ಬಂಧನದಲ್ಲಿರಿಸಿದೆ.

ಬ್ಯಾಂಕ್ ಸಿಬ್ಬಂದಿಗೆ ಲಕ್ಷ ಲಕ್ಷ ಕಮಿಷನ್

ಅಕ್ರಮವಾಗಿ ಹಣ ವರ್ಗಾವಣೆ ಮಾಡಲು ಬ್ಯಾಂಕ್ ಸಿಬ್ಬಂದಿಗೂ ಲಕ್ಷ ಲಕ್ಷ ರು. ಕಮಿಷನ್ ನೀಡಲಾಗಿತ್ತು. ಸಚಿವರ ಹಾಗೂ ಅಧ್ಯಕ್ಷರ ಪಿಎಗಳು ಬ್ಯಾಂಕ್‌ಗೆ ಸತತವಾಗಿ ಭೇಟಿ ನೀಡಿದ್ದರು. ಈಗಾಗಲೇ ಬ್ಯಾಂಕಿನ ಸಿಸಿ ಕ್ಯಾಮರಾ ರೆಕಾರ್ಡ್‌ಗಳನ್ನು ಎಸ್‌ಐಟಿ ಪರಿಶೀಲನೆ ಮಾಡಿದ್ದು, ಅದನ್ನು ಇ.ಡಿ ಸಂಗ್ರಹಿಸಿದೆ. ಸಚಿವರ ಹಾಗೂ ಶಾಸಕರ ಮೇಲೆ ದಾಳಿಗೂ ಮುನ್ನ ಬ್ಯಾಂಕ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದೆ.

ಹಣ ವರ್ಗಾವಣೆ

ವಾಲ್ಮೀಕಿ ನಿಗಮದ ದುಡ್ಡಿನಿಂದ ಆಸ್ತಿ ಖರೀದಿಸಿರುವ ಶಂಕೆ ಇದ್ದು, ಆಸ್ತಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ವಾಲ್ಮೀಕಿ ನಿಗಮದ ಖಾತೆಯಿಂದ, ನಕಲಿ ಖಾತೆ ಮೂಲಕ ಯಾರ್‍ಯಾರ ಖಾತೆಗೆ ದುಡ್ಡು ಹೋಗಿದೆ ಎನ್ನುವ ಬಗ್ಗೆ ತನಿಖೆ ನಡೆಸಲು ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಇ.ಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಇದಕ್ಕಾಗಿ ಮನೆ, ಕಚೇರಿಯಲ್ಲಿದ್ದ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳನ್ನು ಶೋಧಿಸಿದ್ದಾರೆ. ಹೈದರಾಬಾದ್‌ನಿಂದ ಬಳ್ಳಾರಿ ಬ್ಯಾಂಕ್ ಖಾತೆಗಳಿಗೂ ಹಣ ವರ್ಗಾವಣೆಯಾಗಿರುವ ಶಂಕೆ ವ್ಯಕ್ತವಾಗಿದೆ.

ನಕಲಿ ಖಾತೆ

ಬೆಂಗಳೂರಿನ ಉದ್ಯಮಿಗಳ ಹೆಸರಲ್ಲಿ ಆರೋಪಿಗಳು ನಕಲಿ ಖಾತೆಗಳನ್ನು ತೆರೆದಿದ್ದರು. ಆ ನಕಲಿ ಖಾತೆಗಳ ಮೂಲಕ ಖದೀಮರು ಕೋಟ್ಯಂತರ ರು. ಹಣ ವರ್ಗಾಯಿಸಿ ಕೊಂಡಿದ್ದಾರೆ. ಬೆಂಗಳೂರಿನ ರಾಮ್ ಎಂಟರ್‌ಪ್ರೈಸೆಸ್ (5.7 ಕೋಟಿ), ಜಿ.ಎನ್.ಇಂಡಸ್ಟ್ರೀಸ್ (4.42 ಕೋಟಿ), ಸುಜಲಾ ಎಂಟರ್‌ಪ್ರೈಸೆಸ್ (5.63 ಕೋಟಿ), ನೊವೆಲ್ ಸೆಕ್ಯುರಿಟಿ ಸರ್ವಿಸ್ (4 ಕೋಟಿ ರು.) ಸೇರಿ 18 ಉದ್ಯಮಿಗಳ ಹೆಸರಲ್ಲಿ ನಕಲಿ ಖಾತೆಗಳು ತೆರೆಯಲಾಗಿದೆ.

ರಾಷ್ಟ್ರೀಯ ಆಯೋಗದ ನೋಟಿಸ್‌ಗೆ ಆಕ್ಷೇಪ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ, ಪಂಗಡದ ಅನುಸೂಚಿತ ಅನುದಾನವನ್ನು ಹಂಚಿಕೆ ಮಾಡಿರುವುದನ್ನು ಪ್ರಶ್ನಿಸಿ, ರಾಷ್ಟ್ರೀಯ ಎಸ್‌ಸಿ-ಎಸ್‌ಟಿ ಆಯೋಗ ನೀಡಿರುವ ನೋಟಿಸ್ ಇದೀಗ ವಿವಾದಕ್ಕೆ ಕಾರಣವಾಗಿದೆ.

ರಾಜ್ಯ ಸರಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿ-ಎಸ್‌ಟಿಗೆ ಮೀಸಲಿಟ್ಟ ಅನುದಾನವನ್ನು ಬಳಸಲಾಗುತ್ತಿದೆ ಎನ್ನುವ ಆರೋಪದ ಬೆನ್ನಲ್ಲೇ ರಾಷ್ಟ್ರೀಯ ಆಯೋಗ ಈ ನೋಟಿಸ್ ನೀಡಿತ್ತು. ಆರಂಭದಲ್ಲಿ ಗ್ಯಾರಂಟಿ ಯೋಜನೆಯಲ್ಲಿ ಫಲಾನುಭವಿಗಳಾಗಿರುವ ಪರಿಶಿಷ್ಟ ಮಹಿಳೆಯರಿಗೆ ಈ ಅನುದಾನವನ್ನು ಬಳಸಲಾಗುತ್ತಿದೆ ಎಂದು ಸಮರ್ಥಿಸಿಕೊಂಡಿತ್ತು. ಆದರೀಗ ತಜ್ಞರ ಪ್ರಕಾರ, ರಾಜ್ಯ ಸರಕಾರದ ಅಧೀನದಲ್ಲಿರುವ ಅನುದಾನಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಆಯೋಗ ಪ್ರಶ್ನಿಸಲು ಸಾಧ್ಯವೇ ಎಂದು ವಾದಿಸಿದ್ದಾರೆ.

ಇದರೊಂದಿಗೆ ಗ್ಯಾರಂಟಿ ಯೋಜನೆ ಅಥವಾ ಎಸ್‌ಸಿಪಿ-ಟಿಎಸ್‌ಪಿ ಅನುದಾನ ಎರಡರಲ್ಲಿ ಯಾವುದಾದರೂ ಒಂದರಲ್ಲಿ ಕೇಂದ್ರ ಸರಕಾರದ ಪಾಲಿದ್ದರೆ, ಕೇಂದ್ರ ಸರಕಾರ ಈ ವಿಷಯವನ್ನು ಕೇಳಬಹುದಾಗಿತ್ತು. ಆದರೆ ಈ ಎರಡೂ ಯೋಜನೆಗಳಲ್ಲಿ ರಾಜ್ಯ ಸರಕಾರ ಶೇ.100ರಷ್ಟು ಅನುದಾನ ಮೀಸಲಿಟ್ಟಿದೆ. ಹೀಗಿರುವಾಗ ಕೇಂದ್ರ ಸರಕಾರದ ಅಧೀನ ಸಂಸ್ಥೆ ರಾಜ್ಯ ಸರಕಾರವನ್ನು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಎನ್ನುವುದು ಬಹುತೇಕ ವಾದವಾಗಿದೆ.

→ 4

ಜು.12-31ರವರೆಗೆ ನಿತ್ಯ ಒಂದು ಟಿಎಂಸಿ ನೀರು ಬಿಡಲು ರಾಜ್ಯಕ್ಕೆ ಸಿಡಬ್ಲ್ಯೂಆರ್‌ಸಿ ಆದೇಶ

ಮತ್ತೆ ಕಾವೇರಿ ನೀರಿಗೆ ತಮಿಳುನಾಡು ಕ್ಯಾತೆ

ಬೆಂಗಳೂರು: ಕೃಷ್ಣರಾಜ ಸಾಗರ ಜಲಾಶಯ ಇನ್ನು ಅರ್ಧ ತುಂಬಿರುವಾಗಲೇ ತಮಿಳುನಾಡು ತನ್ನ ಪಾಲಿನ ನೀರಿಗೆ ಅಹವಾಲು ಮಂಡಿಸಿದ್ದು, ಜುಲೈ 12ರಿಂದ 31ರ ತನಕ ನಿತ್ಯ ಒಂದು ಟಿಎಂಸಿ (11574 ಕ್ಯೂಸೆಕ್) ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣಾ ಸಮಿತಿ ರಾಜ್ಯಕ್ಕೆ ಸೂಚನೆ ನೀಡಿದೆ. ಸದ್ಯ ಕೆಆರ್‌ಎಸ್ ಶೇ.53ರಷ್ಟು ಮಾತ್ರ ಭರ್ತಿಯಾಗಿದ್ದು ಈಗಾಗಲೇ ಮಂಡ್ಯ ಜಿಲ್ಲೆಯ ರೈತರಿಗೆ ವಿ.ಸಿ ನಾಲೆಯ ಮೂಲಕ 15 ದಿನಗಳ ಕಾಲ ನೀರು ಹರಿಸಲು ನಿರ್ಧರಿಸಲಾಗಿದೆ. ಇದೀಗ ತ.ನಾಡಿನ ಬೇಡಿಕೆ ಮತ್ತು ರೈತರ ನೀರಿನ ಬೇಡಿಕೆ ಏಕಕಾಲ ದಲ್ಲಿ ಪೂರೈಸ ಬೇಕಾಗಿದೆ. ಮುಂಗಾರು ಅಬ್ಬರ ಜುಲೈ ತಿಂಗಳಿಗೆ ಕೊನೆಯಾಗಲಿದೆ ಎಂಬ ಹವಾಮಾನ ಇಲಾಖೆ ವರದಿ ನಡುವೆ ಅಣೆಕಟ್ಟೆ ಈ ವರ್ಷವೂ ಭರ್ತಿಯಾಗುವ ಬಗ್ಗೆ ಸಂದೇಹ ವ್ಯಕ್ತವಾಗಿದೆ.

ಗುರುವಾರ ಸಿಡಬ್ಲ್ಯೂಆರ್‌ಸಿಯ 99ನೇ ಸಭೆಯಲ್ಲಿ ಜುಲೈ 9ರ ತನಕ ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ ಸೇರಿದಂತೆ ನಾಲ್ಕು ಜಲಾಶಯಗಳಲ್ಲಿ ಶೇ. 28.71% ಸಂಚಿತ ಒಳಹರಿವಿನ ಕೊರತೆ ಇರುವ ಬಗ್ಗೆ ರಾಜ್ಯ ಗಮನ ಸೆಳೆಯಿತು. ರಾಜ್ಯದ ನಾಲ್ಕು ಜಲಾಶಯಗಳ ನೀರಿನ ಸಂಗ್ರಹ 58.668 ಟಿಎಂಸಿ ಮಾತ್ರ ಇದೆ. ಇದೇ ವೇಳೆ ಮೆಟ್ಟೂರು ಸೇರಿದಂತೆ, ತಮಿಳುನಾಡಿನ 3 ಜಲಾಶಯಗಳಲ್ಲಿ 24.705 ಟಿಎಂಸಿ ಇರುವ ಬಗ್ಗೆ ಸಮಿತಿಯ ಗಮನ ಸೆಳೆದು ಜುಲೈ 25ರ ಬಳಿಕವೇ ನೀರು ಬಿಡುಗಡೆ ಸಂಬಂಧ ಆದೇಶ ನೀಡಲು ವಿನಂತಿಸಿತು. ಆದರೆ ಫೆಬ್ರವರಿಯಿಂದ ಮೇ ಅವಧಿ ಯಲ್ಲಿ ಕರ್ನಾಟಕ ನೀರು ಬಿಡುಗಡೆ ಮಾಡಿಲ್ಲ ಎಂದು ದೂರಿದ ತ.ನಾಡು ಪರ ಅಧಿಕಾರಿಗಳು ಪ್ರಸಕ್ತ ವರ್ಷದಲ್ಲಿ ಕರ್ನಾಟಕದಲ್ಲಿನ ಒಳಹರಿವು ಸಾಮಾನ್ಯವಾಗಿದೆ. ಆದ್ದರಿಂದ ಕಾವೇರಿ ನ್ಯಾಯಾಧೀಕರಣದ ಆದೇಶದಂತೆ ನಿಗದಿತ ಹರಿವನ್ನು ಖಚಿತಪಡಿಸುವಂತೆ ವಿನಂತಿಸಿತು. ಅಂತಿಮವಾಗಿ ಪ್ರಾಧಿಕಾರ ಜುಲೈ 12 ರಿಂದ ಜುಲೈ 31 ಅವಧಿಯಲ್ಲಿ ಬಿಳಿಗುಂಡ್ಲುವಿನಲ್ಲಿ ಸಂಚಿತ ನೀರಿನ ಹರಿವನ್ನು ದಿನಕ್ಕೆ 1 ಟಿಎಂಸಿ ಇರುವಂತೆ ನೋಡಿಕೊಳ್ಳಲು ಕರ್ನಾಟಕಕ್ಕೆ ಸೂಚಿಸಿತು.

ಜಲಾಶಯದ ನೀರಿನ ಪ್ರಮಾಣ (ಜುಲೈ 11)

ಹಾರಂಗಿ	72 % ಭರ್ತಿ
ಹೇಮಾವತಿ	53 % ಭರ್ತಿ
ಕೆಆರ್‌ಎಸ್	53 % ಭರ್ತಿ
ಕಬಿನಿ	96 % ಭರ್ತಿ

ಉತ್ತರ ಪ್ರದೇಶ: ಸಿಡಿಲಿಗೆ 38 ಬಲಿ

ಲಖನೌ: ಉತ್ತರ ಪ್ರದೇಶದಾದ್ಯಂತ ಬುಧವಾರ ಸಿಡಿಲು ಬಡಿದು 38 ಜನರು ಮೃತಪಟ್ಟಿದ್ದಾರೆ. ಹತ್ತಕ್ಕೂ ಅಧಿಕ ಜನರು ಗಾಯಗೊಂಡಿದ್ದಾರೆ. ಸಿಡಿಲಿಗೆ ಬಲಿಯಾದವರು-ಗಾಯಗೊಂಡವರಲ್ಲಿ ಹೆಚ್ಚಿನವರು ಗ್ರಾಮೀಣ ಭಾಗದವರು. ಮಳೆ ಬಂತೆಂದು ಮರದಡಿ ಆಶ್ರಯ ಪಡೆದವರೇ ಹೆಚ್ಚು ಸಿಡಿಲಿನ ಆಘಾತಕ್ಕೆ ಒಳಗಾಗಿದ್ದಾರೆ. ಪ್ರತಾಪ್‌ಗಢ ದಲ್ಲಿ ಅತಿಹೆಚ್ಚು (11) ಮಂದಿ ಬಲಿಯಾಗಿದ್ದಾರೆ.

ನೀಟ್ ಅಕ್ರಮ; ಕಿಂಗ್‌ಪಿನ್ ಸೆರೆ

ದೆಹಲಿ: 'ನೀಟ್ ಯುಜಿ-2024' ಪ್ರವೇಶ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದ ಸಂಚಿನ ಮುಖ್ಯ ಆರೋಪಿ ರಾಕೇಶ್ ರಂಜನ್‌ನನ್ನು (ರಾಕಿ) ಕೇಂದ್ರ ತನಿಖಾ ದಳ (ಸಿಬಿಐ) ಗುರುವಾರ ಬಂಧಿಸಿದೆ. ಆರೋಪಿಯನ್ನು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಆರೋಪಿಯನ್ನು 10 ದಿನ ಸಿಬಿಐ ಕಸ್ಟಡಿಗೆ ಒಪ್ಪಿಸಲಾಗಿದೆ.

ಗಬ್ಬೆದ್ದ ಮೂಡಾ ಸ್ವಚ್ಛಗೊಳಿಸುವೆ

ಮೈಸೂರು: ಮುಡಾ ಮೊದಲಿನಿಂದಲೂ ಗಬ್ಬೆದ್ದು ಹೋಗಿದ್ದು, ಸ್ವಚ್ಛಗೊಳಿಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ನನ್ನ ಪತ್ನಿಗೆ ಬದಲಿ ನಿವೇಶನ ಕೊಟ್ಟ ವಿಷಯದಲ್ಲಿ ಬಿಜೆಪಿಯವರು ರಾಜಕೀಯವನ್ನು ಮುಂದುವರಿಸಿದರೆ ನಾವೂ ರಾಜಕೀಯವಾಗಿಯೇ ಮುಂದುವರಿಯಬೇಕಾಗುತ್ತದೆ. ಅವರಿಗೆ ಹೇಗೆ ಎದಿರೇಟು ಕೊಡಬೇಕು ಎನ್ನುವುದು ಗೊತ್ತಿದೆ ಎಂದರು.

ಪಾಕ್‌ನಲ್ಲಿ ಆಡಲು ಭಾರತ ನಿರಾಕರಣೆ

ಬೆಂಗಳೂರು: ಪಾಕಿಸ್ತಾನದ ಆತಿಥ್ಯದಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ 2025ರ ಟೂರ್ನಿ ಆಯೋಜನೆಯಾಗಲಿದೆ. ಆದರೆ ಭಾರತೀಯ ಕ್ರಿಕೆಟ್ ತಂಡ ಪಾಕಿಸ್ತಾನಕ್ಕೆ ತೆರಳಿ ಆಡುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ಭಾರತದ ಎಲ್ಲ ಪಂದ್ಯಗಳನ್ನು ಲಾಹೋರ್‌ನಲ್ಲಿ ಆಯೋಜಿಸುವ ಕುರಿತಾಗಿ ಪಾಕಿಸ್ತಾನ ಪ್ರಸ್ತಾವನೆ ಸಲ್ಲಿಸಿತ್ತು. ಆದರೆ ಪಾಕಿಸ್ತಾನದ ಪ್ರಸ್ತಾವನೆಯನ್ನು ಬಿಸಿಸಿಐ ನಿರಾಕರಿಸಿದೆ.

ಅತ್ಯಾಚಾರ ಐವರ ಬಂಧನ

ಮಡಿಕೇರಿ: ಕೇರಳ ಗಡಿಭಾಗ ಕುಟ್ಟ ಗ್ರಾಮದ ನಾಥಂಗಾಲದ ಸಮೀಪ ಇಬ್ಬರು ಬಾಲಕಿಯರನ್ನು ಬಲವಂತವಾಗಿ ಕಾರಿನಲ್ಲಿ ಹತ್ತಿಸಿಕೊಂಡ ಐವರು ಯುವಕರು ಒಬ್ಬ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಮತ್ತೊಬ್ಬ ಬಾಲಕಿ ತಪ್ಪಿಸಿಕೊಂಡು, ಪೊಲೀಸರಿಗೆ ದೂರು ನೀಡಿದ್ದಾಳೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಎಲ್ಲ ಆರೋಪಿಗಳನ್ನು ಬಂಧಿಸಿದ್ದಾರೆ.

ಒಂದೇ ದಿನ ಏಳು ಜನರ ಸಾವು

ದಾವಣಗೆರೆ: ತಾಲೂಕಿನ ಹೊಸಕುಂದವಾಡದಲ್ಲಿ ಗುರುವಾರ ಒಂದೇ ದಿನ ಏಳು ಜನರು ಪ್ರತ್ಯೇಕವಾಗಿ ಮೃತಪಟ್ಟಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಇಬ್ಬರು ವಯೋಸಹಜ, ಇಬ್ಬರು ವಾಂತಿಬೇಧಿ ಹಾಗೂ ಮೂವರು ಇತರ ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ. ಮೃತರ ಅಂತ್ಯಕ್ರಿಯೆಗೂ ಸ್ಥಳಾವಕಾಶದ ಕೊರತೆ ಎದುರಾಗಿದ್ದು, ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದಾರೆ.

ಪೆಗಾಸಸ್ ಮಾದರಿ ಸ್ಪೈವೇರ್ ದಾಳಿ ಭೀತಿ

ದೆಹಲಿ: ಭಾರತ ಸೇರಿದಂತೆ 98 ದೇಶಗಳಲ್ಲಿ ಐಫೋನ್‌ಗಳ ಮೇಲೆ 'ಪೆಗಾಸಸ್' ರೀತಿಯಲ್ಲೇ ಹೊಸ ಸ್ಪೈವೇರ್‌ಗಳು ದಾಳಿ ಮಾಡುವ ಸಾಧ್ಯತೆ ಇದೆ ಎಂದು 'ಆಪಲ್' ಕಂಪನಿ ಮುನ್ನೆಚ್ಚರಿಕೆ ನೀಡಿದೆ. ಐಫೋನ್ ಬಳಕೆದಾರರು ಯಾರು? ಏನೇನು ಮಾಡುತ್ತಾರೆ? ಮೊದಲಾದ ಮಾಹಿತಿಗಳನ್ನು ಕದಿಯಲು ಈ ದಾಳಿ ನಡೆಸುತ್ತಿರಬಹುದು ಎಂದು ಕಂಪನಿ ಹೇಳಿದೆ.

10 ಎಚ್.ಪಿ.ವರೆಗಿನ ಅಕ್ರಮ ಪಂಪ್‌ಸೆಟ್‌ಗೆ ವಿದ್ಯುತ್ ಕಡಿತ ಇಲ್ಲ: ಕೆ.ಜೆ.ಜಾರ್ಜ್

ಐಪಿ ಸೆಟ್ ಆರ್‌ಆರ್‌ಗೆ ಆಧಾರ್ ಜೋಡಣೆ

ಬಳ್ಳಾರಿ: ರಾಜ್ಯದಲ್ಲಿ ಐಪಿ ಸೆಟ್ ಆರ್.ಆರ್. ನಂಬರ್‌ಗೆ ಆಧಾರ್ ಸಂಖ್ಯೆ ಲಿಂಕ್ ಮಾಡುತ್ತಿರುವುದು ದಾಖಲಾತಿಗಾಗಿ ಮಾತ್ರವೇ ಹೊರತು ಬೇರೆ ಉದ್ದೇಶವಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಐಪಿ ಸೆಟ್ ಗಳ ಸಂಖ್ಯೆ ತಿಳಿದುಕೊಂಡು ಸಮರ್ಪಕ ವಿದ್ಯುತ್ ಪೂರೈಕೆಗೆ ಅನುಕೂಲವಾಗುವಂತೆ ಐಪಿ ಸೆಟ್‌ಗಳ ಆರ್.ಆರ್.ನಂಬರ್‌ಗೆ ಆಧಾರ್ ಸಂಖ್ಯೆ ಜೋಡಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಬರಗಾಲದ ಸಂದರ್ಭದಲ್ಲೂ ರಾಜ್ಯದ ರೈತರಿಗೆ ದಿನದ ಏಳು ಗಂಟೆ ವಿದ್ಯುತ್ ಪೂರೈಸಲಾಗಿದೆ. ಲೋಡ್ ಶೆಡ್ಡಿಂಗ್ ಮಾಡಿಲ್ಲ. ಭವಿಷ್ಯದಲ್ಲಿ ಬೇಡಿಕೆಗೆ ತಕ್ಕಂತೆ ವಿದ್ಯುತ್ ಲಭ್ಯವಿರುತ್ತದೆ. ಆದರೂ ಬೇರೆ ಬೇರೆ ಕಾರಣಗಳಿಂದ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳುತ್ತಿದೆ. ಈ ಸಮಸ್ಯೆ ಬಗೆಹರಿಸಿ ಸಮರ್ಪಕ ವಿದ್ಯುತ್ ಪೂರೈಕೆ ಉದ್ದೇಶದಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಲು ನಿರ್ಧರಿಸಲಾಗಿದೆ ಎಂದರು. ವಿದ್ಯುತ್ ಟ್ರಾನ್ಸ್‌ಫಾಮರ್‌ಗಳಿಂದ 500 ಮೀಟರ್ ವ್ಯಾಪ್ತಿಯಲ್ಲಿ ಬರುವ ಅಕ್ರಮ ಐಪಿ ಸೆಟ್‌ಗಳನ್ನು ಸಕ್ರಮಗೊಳಿಸಲಾಗುವುದು. ಅದಕ್ಕಿಂತ ಹೆಚ್ಚು ಅಂತರವಿರುವ ಕಡೆಗಳಲ್ಲಿ ಕುಸುಮ್ ಬಿ ಯೋಜನೆಯಡಿ ಸೋಲಾರ್ ಪಂಪ್ ಸೆಟ್ ಗಳನ್ನು ಒದಗಿಸಲಾಗುವುದು. ಇದಕ್ಕೆ ಕೇಂದ್ರ ಸರಕಾರದಿಂದ ಶೇ. 30 ಮತ್ತು ರಾಜ್ಯ ಸರಕಾರದಿಂದ ಶೇ. 50 ಸಬ್ಸಿಡಿ ನೀಡಲಾಗುತ್ತದೆ. ರೈತರು ಶೇ. 20ರಷ್ಟು ಮೊತ್ತ ಭರಿಸಿ ಪಂಪ್‌ಸೆಟ್ ಹಾಕಿಸಿಕೊಳ್ಳಬಹುದು ಎಂದು ತಿಳಿಸಿದರು.

10 ಎಚ್‌ಪಿವರೆಗಿನ ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಡಿತ ಇಲ್ಲ: ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಕ್ರಮ ಪಂಪ್‌ಸೆಟ್‌ಗಳಿವೆ. ಕೆಲವರು ಇಂತಹ ಅಕ್ರಮ ಪಂಪ್‌ಸೆಟ್‌ಗಳ ಮೂಲಕ ನದಿ ಮತ್ತು ಕಾಲುವೆಗಳಿಂದ ಅನುಮತಿ ಇಲ್ಲದೆ ನೀರು ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ 10 ಅಶ್ವಶಕ್ತಿಗಿಂತ ಹೆಚ್ಚು ಸಾಮರ್ಥ್ಯದ ಅಕ್ರಮ ಪಂಪ್‌ಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು. ಆದರೆ 10 ಅಶ್ವಶಕ್ತಿ ವರೆಗಿನ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವವರೆಗೆ ವಿದ್ಯುತ್ ಪೂರೈಕೆ ಮುಂದುವರಿಯಲಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ವರ್ಗಾವಣೆ ತಡೆಗೆ ಲೈನ್ ಮೆನ್‌ಗಳ ನೇಮಕ

ರಾಜ್ಯದಲ್ಲಿ 2000 ಲೈನ್‌ಮೆನ್‌ಗಳ ನೇಮಕಕ್ಕೆ ಇನ್ನು 15 ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುತ್ತದೆ. ಸಾಮಾನ್ಯವಾಗಿ ಲೈನ್‌ಮೆನ್ ಗಳ ನೇಮಕ ವೇಳೆ ಒಂದು ಜಿಲ್ಲೆಯವರು ಇನ್ನೊಂದು ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿ ನೇಮಕಗೊಳ್ಳುತ್ತಾರೆ. ಬಳಿಕ ತಮ್ಮ ಜಿಲ್ಲೆಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ಇದರಿಂದ ಕೆಲವು ಜಿಲ್ಲೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಲೈನ್‌ಮೆನ್‌ಗಳ ಕೊರತೆಯಾಗುತ್ತದೆ. ಈ ಹಿನ್ನೆಲೆಯಲ್ಲಿ 2000 ಲೈನ್‌ಮೆನ್‌ಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಆಯಾ ಜಿಲ್ಲೆಯವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ರಾಜ್ಯಾದ್ಯಂತ ಏಕಕಾಲದಲ್ಲಿ ನೇಮಕ ಪ್ರಕ್ರಿಯೆ ನಡೆಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ರಾಷ್ಟ್ರೀಯ ಆಯೋಗದ ನೋಟಿಸ್‌ಗೆ ಆಕ್ಷೇಪ

← ಮೊದಲಪುಟದಿಂದ

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ, ರಾಷ್ಟ್ರೀಯ ಪರಿಶಿಷ್ಟ ಜಾತಿ-ಪಂಗಡದ ಆಯೋಗದಿಂದ ರಾಜ್ಯ ಸರಕಾರದ ಮುಖ್ಯಕಾರ್ಯದರ್ಶಿಗೆ ನೋಟಿಸ್ ನೀಡಲು ಅವಕಾಶವೇ ಇಲ್ಲ. ಇದಲ್ಲದೇ, ಒಕ್ಕೂಟ ವ್ಯವಸ್ಥೆಯಲ್ಲಿ ಈ ರೀತಿ ಸವಾರಿ ಮಾಡಲು ನಾವೇನು ಕೇಂದ್ರದ ಸಾಮಂತರಲ್ಲ. ರಾಜ್ಯ ಸರಕಾರಗಳಿಗೆ ಅದರದ್ದೇ ಆದ ಅಧಿಕಾರಗಳಿವೆ. ಅದರಲ್ಲಿ ಮೂಗು ತೋರಿಸಲು ಯಾರಿಗೂ ಅವಕಾಶವಿಲ್ಲ. ಒಂದು ವೇಳೆ ಕಾನೂನು ಜಾರಿಯಲ್ಲಿ ಏನಾದರೂ ತಪ್ಪಾಗಿದ್ದರೆ ನ್ಯಾಯಾಂಗಕ್ಕೆ ಮಾತ್ರ ಪ್ರಶ್ನಿಸುವ ಅಧಿಕಾರವಿದೆ. ಆದರೆ ಕೇವಲ ರಾಜಕೀಯ ಕಾರಣಕ್ಕೆ ಆಯೋಗ ಈ ರೀತಿ ನೋಟಿಸ್ ನೀಡಿದೆ ಎಂದು ಕಿಡಿಕಾರಿದ್ದಾರೆ.

ಒಕ್ಕೂಟ ವ್ಯವಸ್ಥೆಗೆ ಮಾರಕ: ಹಣಕಾಸು ನಿರ್ವಹಣೆ ಸೇರಿದಂತೆ ರಾಜ್ಯಗಳಿಗೆ ಸಂಬಂಧಿಸಿದ ನೀತಿ-ನಿಯಮವನ್ನು ರೂಪಿಸುವುದು ಆಯಾ ರಾಜ್ಯಗಳ ಹೊಣೆಯಾಗಿರುತ್ತದೆ.

> **ಕೇಂದ್ರ ಸರಕಾರದ ಸ್ವಾಯತ್ತ ಸಂಸ್ಥೆ ಕರ್ನಾಟಕ ಸರಕಾರದ ನೀತಿ-ನಿರೂಪಣೆ ಬಗ್ಗೆ ಪ್ರಶ್ನಿಸಲು ಯಾವ ಕಾನೂನಿನಲ್ಲಿ ಅವಕಾಶವಿದೆ? ರಾಜ್ಯದ ಕಾರ್ಯಾಂಗ, ಶಾಸಕಾಂಗ ಹಾಗೂ ಆರ್ಥಿಕ ಬಳಕೆಯ ಸಂಪೂರ್ಣ ಅಧಿಕಾರ ಸರಕಾರಗಳಿಗೆ ಇರುತ್ತದೆ. ಒಂದು ವೇಳೆ ಲೋಪವಾಗಿದ್ದರೆ ನ್ಯಾಯಾಂಗ ಮಾತ್ರ ಪ್ರಶ್ನಿಸಬಹುದು.**
>
> **- ಪೊನ್ನಣ್ಣ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ**

ಆದ್ದರಿಂದ ಈ ವಿಷಯದಲ್ಲಿ ಕೇಂದ್ರ ಸರಕಾರದಿಂದ ನೇಮಿಸಿರುವ ಸ್ವಾಯತ್ತ ಸಂಸ್ಥೆ ಮೂಗು ತೂರಿಸಿದರೆ ಅದು ಒಕ್ಕೂಟ ವ್ಯವಸ್ಥೆ ಮಾಡಿದ ಅಪಮಾನವಾಗುತ್ತದೆ. ರಾಜ್ಯಗಳೆಲ್ಲ ಸೇರಿದರೆ ದೇಶವಾಗುತ್ತದೆ. ರಾಜಕೀಯ ಕಾರಣಗಳಿಗಾಗಿಯೇ, ಈ ರೀತಿ ನೋಟಿಸ್ ನೀಡುವುದರಿಂದ ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆಯಾಗುತ್ತದೆ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ನೋಟಿಸ್‌ಗೆ ಸಿಎಸ್ ಉತ್ತರಿಸದೇ ಇರಬಹುದು

ರಾಷ್ಟ್ರೀಯ ಎಸ್‌ಸಿ-ಎಸ್‌ಟಿ ಆಯೋಗದಿಂದ ಮುಖ್ಯ ಕಾರ್ಯದರ್ಶಿಗೆ ನೀಡಿರುವ ಈ ನೋಟಿಸ್‌ಗೆ ಏಳು ದಿನದೊಳಗೆ ಉತ್ತರಿಸುವಂತೆ ಸೂಚನೆ ನೀಡಲಾಗಿದೆ. ಆದರೆ ಕಾನೂನಾತ್ಮಕವಾಗಿ ಈ ವಿಷಯದಲ್ಲಿ ಅವರು ಮಧ್ಯಪ್ರವೇಶಿಸಲು ಅವಕಾಶವಿಲ್ಲ. ದಲಿತರ ಮೇಲೆ ಹಲ್ಲೆ, ಮೋಸ, ವಂಚನೆಗಳಾದ ಸಮಯದಲ್ಲಿ ವೈಯಕ್ತಿಕ ನೆಲೆಗಟ್ಟಿನಲ್ಲಿ ನೋಟಿಸ್ ನೀಡಲು ಅವಕಾಶವಿದೆ ಹೊರತು, ಕಾರ್ಯಾಂಗದ ಮುಖ್ಯಸ್ಥರಿಗೆ ನೋಟಿಸ್ ನೀಡಲು ಅವಕಾಶವಿಲ್ಲ. ಆದ್ದರಿಂದ ರಾಷ್ಟ್ರೀಯ ಎಸ್‌ಸಿ-ಎಸ್‌ಟಿ ಆಯೋಗದ ಅಧ್ಯಕ್ಷರಿಗೆ ಮುಖ್ಯಕಾರ್ಯದರ್ಶಿ ಉತ್ತರಿಸದೇ, 'ಈ ನೋಟಿಸ್ ನೀಡಲು ನಿಮಗೆ ಅಧಿಕಾರವಿಲ್ಲ' ಎನ್ನುವ ಸ್ಪಷ್ಟ ಮಾತುಗಳನ್ನು ಹೇಳಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ವಾಲ್ಮೀಕಿ ನಿಗಮ ಹಗರಣ; ಮುಂದುವರಿದ ಶೋಧ

← ಮೊದಲಪುಟದಿಂದ

ಪಂಪಣ್ಣ ಮನೆ ಮೇಲೆ ದಾಳಿ

ಬಸನಗೌಡ ದದ್ದಲ್ ಅವರ ಮಾಜಿ ಪಿಎ ಪಂಪಣ್ಣ ಮನೆ ಮೇಲೆ ಇ.ಡಿ ದಾಳಿ ನಡೆಸಿದ್ದು, ದದ್ದಲ್ ಆಪ್ತನ ಇನ್ನೊಂದು ಮುಖ ವಾಡ ಬಯಲಾಗುತ್ತಿದೆ. ಬಿಚ್ಚಾಲಿ ಗ್ರಾಪಂ ಪಿಡಿಓ ಆಗಿ ನಿಯೋಜನೆಗೊಂಡಿದ್ದ ಪಂಪಣ್ಣ, ಪಿಡಿಓ ಚಾರ್ಜ್ ತೆಗೆದುಕೊಳ್ಳದೇ ರಾಯಚೂರು ತಾಲೂಕು ಪಂಚಾಯಿತಿ ಯಲ್ಲಿ ವ್ಯಾಜ್ಯ ಇತ್ಯರ್ಥಕನಾಗಿ ಮುಂದುವರಿದಿದ್ದ. ನೂತನ ಶಾಸಕರೊಬ್ಬರ ಪಿಎ ಆಗಲು, ಪಿಡಿಓ ಕೆಲಸಕ್ಕೆ ಹಾಜರಾಗಿರಲಿಲ್ಲ. ರಾಯಚೂರಿನ ಆಜಾದ್ ನಗರದಲ್ಲಿ ಐಷಾರಾಮಿ ಫ್ಲಾಟ್ ಖರೀದಿಸಿ ವಾಸ ಮಾಡುತ್ತಿದ್ದ. ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರೂ ಬಸನಗೌಡ ದದ್ದಲ್‌ನ ಖಾಸಗಿ ವ್ಯವಹಾರ ನೋಡಿಕೊಳ್ಳುತ್ತಿದ್ದ. ಹಗರಣದಲ್ಲಿ ಪಂಪಣ್ಣ 50 ಲಕ್ಷ ರುಪಾಯಿ ಕಮಿಷನ್ ಪಡೆದಿರುವ ಆರೋಪವಿದೆ. ಆರೋಪದ ಹಿನ್ನೆಲೆ ಯಲ್ಲಿ ಜುಲೈ 5ರಂದು ಈತ ಎಸ್‌ಐಟಿ ವಿಚಾರಣೆ ಒಳಗಾಗಿದ್ದ. ಪಂಪಣ್ಣ ಮನೆಯಲ್ಲಿ ಸಿಕ್ಕ ದಾಖಲೆಗಳನ್ನು ಇಡಿ ಅಧಿಕಾರಿಗಳು ಪರಿಶೀಲಿಸಿ, ಹಿರಿಯ ಅಧಿಕಾರಿಗಳಿಗೆ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ. ಈ ಮಧ್ಯೆ, ವಾಲ್ಮೀಕಿ ನಿಗಮದ ಎಲ್ಲ ಅಧಿಕಾರಿಗಳ 19 ಮೊಬೈಲ್ ಜಪ್ತಿ ಮಾಡಿರುವ ಇ.ಡಿ ಅಧಿಕಾರಿಗಳು, ಆಸ್ತಿ ದಾಖಲೆ ಪತ್ರಗಳನ್ನೂ ವಶಕ್ಕೆ ಪಡೆದಿದ್ದಾರೆ. ನಿಗ ಮದ ಸಿಸಿ ಕ್ಯಾಮೆರಾದ ಡಿವಿಆರ್, ನಕಲಿ ಸೀಲ್, ನಿಗ ಮದ ಲೆಡ್ಜರ್ ಪುಸ್ತಕ, ಬ್ಯಾಂಕ್ ಖಾತೆಯ ಲೆಕ್ಕ ಪತ್ರ, ಪದ್ಮನಾಭ್, ಪರಶುರಾಮ್ ಸಹಿ ಇರುವ ಲೆಕ್ಕ ಪತ್ರ, ದದ್ದಲ್ ನಿವಾಸದಲ್ಲಿ ಹಗರಣ ಸಂಬಂಧ ದಾಖಲೆಗಳು ಹಾಗೂ ಈಗಾಗಲೇ ತನಿಖೆ ನಡೆಸುತ್ತಿರುವ ಎಸ್‌ಐಟಿ ಸಂಗ್ರಹಿಸಿದ್ದ ಸಾಕ್ಷ್ಯವನ್ನು ಜಪ್ತಿ ಮಾಡಲಾಗಿದೆ.

ಹಣ ವರ್ಗಾವಣೆಯ ಮಾಹಿತಿ

ಮಾರ್ಚ್ 5 -	ಜೈಲೆಂಟ್ ಟ್ರೈನಿಂಗ್ ಅಂಡ್ ಕನ್ಸಲ್‌ಟಿಂಗ್ ಸರ್ವಿಸ್ -	4.97 ಕೋಟಿ ರು.
ಮಾರ್ಚ್ 5 -	ಫೀಫ್ಯುಮ್ಸ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. -	5.35 ಕೋಟಿ ರು.
ಮಾರ್ಚ್ 7 -	ಅಕಾರ್ಡ್ ಬಿಸಿನೆಸ್ ಸರ್ವಿಸ್ -	5.46 ಕೋಟಿ ರು.
ಮಾರ್ಚ್ 7 -	ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಪ್ರೈ.-	4.53 ಕೋಟಿ ರು.
ಮಾರ್ಚ್ 7 -	ಮನು ಎಂಟರ್‌ಪ್ರೈಸಸ್ -	5.01 ಕೋಟಿ ರು.
ಮಾರ್ಚ್ 7 -	ವೈಎಂ ಎಂಟರ್‌ಪ್ರೈಸಸ್ -	4.98 ಕೋಟಿ ರು.
ಮಾರ್ಚ್ 11 -	ವೋಲ್ಟಾ ಟೆಕ್ನಾಲಜಿಸ್ ಸರ್ವೀಸಸ್ -	5.12 ಕೋಟಿ ರು.
ಮಾರ್ಚ್ 11 -	ನಿತ್ಯಾ ಸೆಕ್ಯುರಿಟಿ ಸರ್ವಿಸ್ -	4.47 ಕೋಟಿ ರು.
ಮೇ 6 -	ಎಂಕ್ಯೂ ಟಾಲೆಂಕ್ಯೂ ಸಾಫ್ಟ್‌ವೇರ್ ಇಂಡಿಯಾ ಪ್ರೈ.ಲಿ. -	5.10 ಕೋಟಿ ರು.
ಮಾರ್ಚ್ 30 -	ಸಿಸ್ಟಮ್ ಅಂಡ್ ಸರ್ವಿಸಸ್ ಕಂಪನಿ -	4.55 ಕೋಟಿ ರು.
ಮಾರ್ಚ್ 30 -	ರಾಮ್ ಎಂಟರ್‌ಪ್ರೈಸಸ್ -	5.07 ಕೋಟಿ ರು.
ಮಾರ್ಚ್ 30 -	ಸ್ಕಿಲ್ ಮ್ಯಾಪ್ ಟ್ರೈನಿಂಗ್ ಅಂಡ್ ಸರ್ವಿಸಸ್ ಪ್ರೈ.ಲಿ. -	4.84 ಕೋಟಿ ರು.
ಮಾರ್ಚ್ 30 -	ಸ್ವಾಪ್ ಡಿಸೈನ್ ಪ್ರೈ.ಲಿ. -	5.15 ಕೋಟಿ ರು.
ಮಾರ್ಚ್ 30 -	ಜಿಎನ್ ಇಂಡಸ್ಟ್ರೀಸ್ -	4.42 ಕೋಟಿ ರು.
ಮಾರ್ಚ್ 30 -	ನಾವೆಲ್ ಸೆಕ್ಯುರಿಟಿ ಸರ್ವಿಸಸ್ ಪ್ರೈ.ಲಿ. -	4.56 ಕೋಟಿ ರು.
ಮಾರ್ಚ್ 30 -	ಸುಜಲ್ ಎಂಟರ್‌ಪ್ರೈಸಸ್ -	5.63 ಕೋಟಿ ರು.
ಮಾರ್ಚ್ 30 -	ಗ್ರಾಬ್ ಎ ಗ್ರಬ್ ಸರ್ವಿಸಸ್ ಪ್ರೈ.ಲಿ. -	5.88 ಕೋಟಿ ರು.
ಏಪ್ರಿಲ್ 23 -	ವಿ6 ಬ್ಯುಸಿನೆಸ್ ಸರ್ವಿಸಸ್ -	4.50 ಕೋಟಿ ರು.

11 ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾ ದಾಳಿ

← ಮೊದಲಪುಟದಿಂದ

ಹೀಗಾಗಿ ಅವರಿಗೆ ಸೇರಿದ ಹಲವು ಕಡೆ ದಾಳಿ ನಡೆಸಿ ದಾಖಲೆ ಪರಿಶೀಲನೆ ಮಾಡಲಾಗಿದೆ. ಸರಕಾರಿ ಸೇವೆಗೆ ಸೇರಿದ ಕೆಲವೇ ವರ್ಷಗಳಲ್ಲಿ ಕೋಟ್ಯಂತರ ಆಸ್ತಿ ಸಂಗ್ರಹ ಮಾಡಿದ್ದಾರೆ. ನಕಲಿ ದಾಖಲಾತಿ ಸೃಷ್ಟಿ ಆರೋಪದಲ್ಲಿ ಹಿಂದೆ ಬಿಬಿಎಂಪಿಯಿಂದ ಅಮಾನತು ಮಾಡಲಾಗಿತ್ತು. ತಾಯಿ ಹೆಸರಲ್ಲಿ ಸುಮಾರು 50 ಎಕರೆಯ ಕೋಟಿ ಕೋಟಿ ಬೆಲೆ ಬಾಳುವ ಜಮೀನು ಖರೀದಿ ಮಾಡಿದ್ದರು. ಕಲಬುರಗಿಯಲ್ಲಿ ಕೋಟಿ ಮೌಲ್ಯದ 4 ಅಂತಸ್ತಿನ ಮನೆ ಅಲ್ಲದೇ ಇನ್ನೂ ಹಲವು ಕಡೆ ಆಸ್ತಿ ಹೊಂದಿದ್ದಾರೆ.

9)ಮಹೇಶ್. ಕೆ,
ಅಧೀಕ್ಷಕ ಅಭಿಯಂತರರು,
ಕಬಿನಿ ಮತ್ತು ವರುಣ ನಾಲಾ ವೃತ್ತ, ಮೈಸೂರು.
- 3 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 3.93 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 50 ಲಕ್ಷ ರು. ಮೌಲ್ಯದ ಚರಾಸ್ತಿ.
- ಒಟ್ಟು 3.79 ಲಕ್ಷ ರು. ಮೌಲ್ಯದ ಆಸ್ತಿ ಪತ್ತೆ.

10) ಎನ್. ಎಂ. ಜಗದೀಶ್,
ಗ್ರೇಡ್-1 ಕಾರ್ಯದರ್ಶಿ, ದಾಸನಪುರ ಗ್ರಾಮ ಪಂಚಾಯಿತಿ, ಬೆಂಗಳೂರು.
- 3 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 2.4 ಕೋಟಿ ರು. ಮೌಲ್ಯದ ಸ್ಥಿರಾಸ್ತಿ.
- 1.18 ಲಕ್ಷ ರು. ಮೌಲ್ಯದ ಚರಾಸ್ತಿ.
- ಒಟ್ಟು 3.22 ಕೋಟಿ ರು. ಮೌಲ್ಯದ ಆಸ್ತಿ ಬೆಳಕಿಗೆ.

11)ಬಸವರಾಜ ಮಗಿ,
ಕಂದಾಯಾಧಿಕಾರಿಗಳು,
ಮಹದೇವಪುರ ವಿಭಾಗ,
ಬಿಬಿಎಂಪಿ, ಬೆಂಗಳೂರು.
- 11 ಸ್ಥಳಗಳಲ್ಲಿ ಶೋಧನಾ ಕಾರ್ಯ.
- 3.8 ಕೋಟಿರು ರು. ಮೌಲ್ಯದ ಸ್ಥಿರಾಸ್ತಿ.
- 61.73 ಲಕ್ಷ ರು. ಮೌಲ್ಯದ ಚರಾಸ್ತಿ.
- ಒಟ್ಟು 3.31 ಕೋಟಿರು. ಮೌಲ್ಯದ ಆಸ್ತಿ ಪತ್ತೆ.

ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) **ಶ್ರೀ ಹನುಮಂತ್ ಪಟೇಲ್** ಬಿನ್ ಶ್ರೀ ಅಣ್ಣಪ್ಪ, (2) **ಶ್ರೀಮತಿ ಸುನಂದಾ ಪಾಟೀಲ್** ಕೋಂ ಶ್ರೀ ಹನುಮಂತ್ ಪಟೇಲ್, **ಇವರಿಬ್ಬರ ವಿಳಾಸ:** ಮನೆ ನಂ.00, 8ನೇ ಕ್ರಾಸ್, ವಿನಾಯಕ ನಗರ, ಗಟ್ಟಿಗನಬ್ಬೆ ರಸ್ತೆ, ಸರ್ಕಾರಿ ಹತ್ತಿರ ಕೊಲಾಜ್ ರಸ್ತೆ, ಹೊಸಕೋಟೆ ಪಟ್ಟಣ, ಕರ್ನಾಟಕ, ಭಾರತ-562114, **ಮತ್ತೊಂದು ವಿಳಾಸ:** ಶ್ರೀ.ಹನುಮಂತ್ ಪಟೇಲ್ **ಬಿನ್ ಶ್ರೀ ಅಣ್ಣಪ್ಪ, ಶ್ರೀಮತಿ ಸುನಂದಾ ಪಾಟೀಲ್** ಕೋಂ ಶ್ರೀ. ಶ್ರೀ ಹನುಮಂತ್ ಪಟೇಲ್, ಸೈಟ್ ನಂ.24, ಕೆಹೆಚ್ ನಂ.5354, ಸಿಎಸ್‌ಐ ಆಸ್ಪತ್ರೆ ಮತ್ತು ಸರ್ಕಾರಿ ಕಾಲೇಜ್, ವಿಶ್ವೇಶ್ವರಯ್ಯ ವಿಸ್ತರಣೆ, ಸರ್ ಎಂವಿ ಲೇಔಟ್, ಬೆಂಗಳೂರು ಗ್ರಾಮಾಂತರ ಹೊಸಕೋಟೆ–562114.	**ಈ ಆಸ್ತಿಯು ಶ್ರೀ ಹನುಮಂತ್ ಪಟೇಲ್ ಬಿನ್ ಶ್ರೀ ಅಣ್ಣಪ್ಪರವರ ಹೆಸರಿನಲ್ಲಿದೆ** **ಷೆಡ್ಯೂಲ್:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ನಿವೇಶನ ನಂ.24, ಹೊಸ ಖಾತಾ ನಂ.5354, ಹಳೆ ಖಾತಾ ನಂ.4018/1390/2780, ಈ ಆಸ್ತಿಯು ಸಿ.ಎಸ್.ಐ ಆಸ್ಪತ್ರೆ ಮತ್ತು ಸರ್ಕಾರಿ ಕಾಲೇಜು, ವಿಶ್ವೇಶ್ವರಯ್ಯ ಎಕ್ಸ್‌ಟೆನ್ಷನ್, ಹೊಸಕೋಟೆ ಟೌನ್–562114, ಬೆಂಗಳೂರು ನಗರ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: (ತಾಂತ್ರಿಕ ವರದಿಯ ಪ್ರಕಾರ) ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಸಗಿ ಆಸ್ತಿ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: (37+45)/2 ಅಡಿ, ಒಟ್ಟು ವಿಸ್ತೀರ್ಣ 1230 ಚದರ ಅಡಿ. **ಯಾವುದೇ ಮಾಹಿತಿಗಾಗಿ ಶ್ರೀ ಸುಂದರೇಶನ್ : + 91 9620703099 ರವರನ್ನು ಸಂಪರ್ಕಿಸಿ.**	24.06.2024 ಎನ್‌ಪಿಎ ದಿನಾಂಕ 09.03.2024	Loan No. PHR022708732168 POWER HOME BRE Rs.34,12,925/- ಒಟ್ಟು ಮೊತ್ತ ರೂ.17,57,996/– ದಿನಾಂಕ: 24.06.2024 ರಂದು ಇದ್ದಂತೆ
2	(1) **ಶ್ರೀ ಮೊಹಮ್ಮದ್ ಅಥೌರ್ ರೆಹಮಾನ್** ಬಿನ್ ಶ್ರೀ ಮೊಹಮ್ಮದ್ ಝುಲೌರ್ ರೆಹಮಾನ್, (2) **ಶ್ರೀಮತಿ ಸಮೀನಾ ಫಾತಿಮಾ** ಕೋಂ ಶ್ರೀ ಮೊಹಮದ್ ಅಥೌರ್ ರೆಹಮಾನ್, **ಇವರಿಬ್ಬರ ವಿಳಾಸ:** ಫ್ಲಾಟ್ ನಂ. ಇ4, ಅಪೂರ್ವ ಮಲ್ಫೆಸ್ 5ನೇ ಬ್ಲಾಕ್, 1ನೇ ಮುಖ್ಯ, ಹೆಚ್‌ಬಿಆರ್ ಲೇಔಟ್, ಬೆಂಗಳೂರು–560043, **ಆಸ್ತಿ ವಿಳಾಸ:** (3) **ಶ್ರೀ ಮೊಹಮ್ಮದ್ ಅಥೌರ್ ರೆಹಮಾನ್** ಬಿನ್ ಶ್ರೀ ಮೊಹಮ್ಮದ್ ಝುಲೌರ್ ರೆಹಮಾನ್, (4) **ಶ್ರೀಮತಿ ಸಮೀನಾ ಫಾತಿಮಾ** ಕೋಂ ಶ್ರೀ ಮೊಹಮದ್ ಅಥಾರ್ ರೆಹಮಾನ್, ಫ್ಲಾಟ್ ನಂ. ಇ–4, 3ನೇ ಮಹಡಿ ಅಪೂರ್ವ ಮಲ್ಫೆಸ್ 1ನೇ ಮೇನ್, 5ನೇ ಬ್ಲಾಕ್, ಎಚ್‌ಬಿಆರ್ ಲೇಔಟ್, ಹೆಣ್ಣೂರು ಗ್ರಾಮ, ಕಸಬಾ ಹೋಬಳಿ, ಬೆಂಗಳೂರು 560043.	**ಷೆಡ್ಯೂಲ್ ಎ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ವಾಸಯೋಗ್ಯ ಆಸ್ತಿಯ ಸರ್ವೆ ನಂ.108/6, ಇದು ಹೆಣ್ಣೂರು ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ 19.5 ಗುಂಟೆಗಳು ಅಥವಾ 21,235 ಚ.ಅಡಿ, ನೋಂದಾಯಿತ ಮಾರಾಟದ ದಾಖಲೆ ನಂ.34944, ದಿನಾಂಕ 1.09.2006 ರ 06–07ರ ಮೂಲಕ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದೆ. ಮತ್ತು ಸಿಎಂಸಿ ಖಾತಾ ನಂ.310 ಬ್ಯಾಟರಾಯನಪುರದವರು ಹೊರಡಿಸಿರುತ್ತಾರೆ, ಮತ್ತು ಡಿಸಿ ಪರಿವರ್ತಿತ ಆದೇಶ ಸಂಖ್ಯೆ ALNSR(NK) CR-02/05- 06, ದಿನಾಂಕ: 10.07.2006, ಬಿಬಿಎಂಪಿ ಸಂಖ್ಯೆ. 310/108/06, ದಿನಾಂಕ: 05.08.2008, ಬೆಂಗಳೂರು, ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿದಂತೆ ಹೊರಡಿಸಲಾಗಿದೆ. ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಬಾವಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ. **ಷೆಡ್ಯೂಲ್ ಬಿ:** (ಅವಿಭಾಜಿತ ಪಾಲುಗಳ ವಿವರಣೆಯನ್ನು ಈ ಮೂಲಕ ತಿಳಿಸಲಾಗಿದೆ) ಷೆಡ್ಯೂಲ್ ಎ ಆಸ್ತಿಯಲ್ಲಿ ಒಳಗೊಂಡಿರುವ ಭೂಮಿಯಲ್ಲಿ 1050 ಚದರ ಅಡಿಗಳ ಅವಿಭಾಜಿತ ಪಾಲು. **ಷೆಡ್ಯೂಲ್ ಸಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳ ಗೊಂಡಿರುವ ವಾಸಯೋಗ್ಯ ಫ್ಲಾಟ್ ನಂ.4ಇ, ಮೂರನೇ ಮಹಡಿ, ಬಿಬಿಎಂಪಿ ಖಾತಾ ನಂ. 861/310/ 108/6–20ಟಿಎಫ್–ಇ–4, ರಲ್ಲಿರುವ ಅಪಾರ್ಟ್‌ಮೆಂಟ್‌ನ್ನು ಅಪೂರ್ವ ಮಲ್ಫೆಸ್" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ ಮತ್ತು ಒಂದು ಹಾಲ್ ಅಡುಗೆಮನೆ, ಉಪಯುಕ್ತತೆ, ಐದು ಮಲಗುವ ಕೋಣೆಗಳು, 3 ಶೌಚಾಲಯಗಳು, ಡೈನಿಂಗ್–ಕಮ್–ಹಾಲ್, ಮೊಸಾಯಿಕ್ ನೆಲಹಾಸು, ಹೊನ್ನೆ ಮರದ ಬಾಗಿಲುಗಳು ಮತ್ತು ಅಲ್ಯೂಮಿನಿಯಂ ಕಿಟಕಿಗಳನ್ನು ಒಳಗೊಂಡಿದೆ, ಒಟ್ಟು ವಿಸ್ತೀರ್ಣ 3000 ಚ.ಅಡಿ ಸೂಪರ್ ನಿರ್ಮಿತ ಪ್ರದೇಶವನ್ನು ಹೊಂದಿದೆ ಮತ್ತು ಎರಡು ಕಾರ್ ಪಾರ್ಕಿಂಗ್ ಸ್ಲಾಟ್‌ಗಳಲ್ಲಿ ಒಂದು ಸ್ಪಿಲ್ಟ್ ಫ್ಲೋರ್, ಜೊತೆಗೆ ಸಾಮಾನ್ಯ ಪ್ರದೇಶದ ಅಂಗೀಕಾರ, ಲಾಬಿಗಳು, ಮೆಟ್ಟಿಲುಗಳು, ಓವರ್‌ಹೆಡ್/ಭೂಗತ ಟ್ಯಾಂಕ್‌ಗಳು ಮತ್ತು ಟೆರೇಸ್ ಪ್ರದೇಶವನ್ನು ಹೊರತುಪಡಿಸಿ ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಅನುಪಾತದ ಪಾಲು ಹೊಂದಿದೆ. **ಯಾವುದೇ ಮಾಹಿತಿಗಾಗಿ ಶ್ರೀ ತ್ರಿಮೂರ್ತಿ : 9036773553 ರವರನ್ನು ಸಂಪರ್ಕಿಸಿ**	24.06.2024 ಎನ್‌ಪಿಎ ದಿನಾಂಕ 08.06.2024	Loan No. LPR05140495147 ASSET POWER BRE Rs. 1,30,92,375/- ಒಟ್ಟು ಮೊತ್ತ ರೂ. 1,24,64,136/– ದಿನಾಂಕ: 15.06.2024 ರಂದು ಇದ್ದಂತೆ
3	(1) **ಶ್ರೀ ನಾಯಕ್ ಮಂದಾರ** ಬಿನ್ ಶ್ರೀ ನಾರಾಯಣ ನಾಯಕ್, ನಂ.ಜೆ34, 3ನೇ ಕ್ರಾಸ್, ಗಣೇಶ್ ಬ್ಲಾಕ್, ಪೈಪ್ ಲೈನ್, ಮಲ್ಲೇಶ್ವರಂ, ಬೆಂಗಳೂರು 560003. **ಆಸ್ತಿ ವಿಳಾಸ: ಶ್ರೀ ನಾಯಕ್ ಮಂದಾರ,** ಬಿನ್ ಶ್ರೀ ನಾರಾಯಣ ನಾಯಕ್, ಫ್ಲಾಟ್ ನಂ. ಎ1–1126ಎಂ, 12ನೇ ಮಹಡಿ, ಸರ್ವೆ ನಂ. 8/1, ಉತ್ತರಹಳ್ಳಿ, ಮನ್ನವರತೆ ಕಾವಲ್ ಗ್ರಾಮ, ಹೋಬಳಿ, ಬೆಂಗಳೂರು – 560068.	**ಷೆಡ್ಯೂಲ್–ಎ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸಂಯೋಜಿತ ವಾಸಯೋಗ್ಯ ಪರಿವರ್ತಿತ ಭೂಮಿ ಸರ್ವೆ ನಂ.8/1, ಈ ಆಸ್ತಿಯು ಉತ್ತರಹಳ್ಳಿ, ಮನವರತಕಾವಲ್ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ 3,78,367.13 ಚದರ ಅಡಿ ಭೂಮಿ, ಕ್ಲಬ್ ಹೌಸ್ ಮತ್ತು ಈಜುಕೊಳ ನಿರ್ಮಾಣಕ್ಕಾಗಿ ಮಾರಾಟಗಾರರು ಉಳಿಸಿಕೊಂಡಿರುವ 13672.75 ಚದರ ಅಡಿ ಪ್ರದೇಶವನ್ನು ಹೊರತುಪಡಿಸಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಬಿಡಿಎ ರಸ್ತೆ, ಉತ್ತರಕ್ಕೆ: ಹರಾ ಫ್ರೆಶ್ ಫೀಲ್ಡ್ ಲೇಔಟ್ ಮತ್ತು ರಸ್ತೆ, ದಕ್ಷಿಣಕ್ಕೆ: ಆಸ್ತಿ ಸರ್ವೆ ನಂ.8/2 ಮನವರತಕಾವಲ್. **ಷೆಡ್ಯೂಲ್–ಬಿ:** (ಈ ಮೂಲಕ ಆಸ್ತಿಯನ್ನು ಖರೀದಿಗೆ ತಿಳಿಸಲಾಗಿದೆ) ಅವಿಭಜಿತ 0.14% ಪಾಲು, ಹಕ್ಕು, ಶೀರ್ಷಿಕೆ ಮತ್ತು ಶೆಡ್ಯೂಲ್ 'ಎ' ಆಸ್ತಿಯಲ್ಲಿನ ಹಿತಾಸಕ್ತಿ ಲೆ., 547.63 ಚದರ ಅಡಿಗಳನ್ನೊಳಗೊಂಡಿದೆ (ಆಸ್ತಿಯ ಮಾರ್ಕೆಟ್ ಬೆಲೆ ರೂ.9,57,255/– ರೂಪಾಯಿ ಒಂಭತ್ತು ಲಕ್ಷದ ಐವತ್ತೇಳು ಸಾವಿರದ ಎರಡುನೂರ ಐವತ್ತೈದು ಮಾತ್ರ) **ಷೆಡ್ಯೂಲ್–ಸಿ:** (ಪ್ರತ್ಯೇಕ ನಿರ್ಮಾಣ ಒಪ್ಪಂದದ ಅಡಿಯಲ್ಲಿ ಶೆಡ್ಯೂಲ್ 'ಬಿ' ಆಸ್ತಿಯ ಸ್ವಾಧೀನಕ್ಕೆ ಅನುಗುಣವಾಗಿ ಮಾರಾಟಗಾರರ ಪಕ್ಷದ ಮೂಲಕ ಖರೀದಿದಾರರು ನಿರ್ಮಿಸಿದ ಅಪಾರ್ಟ್‌ಮೆಂಟ್‌ನ ವಿವರಣೆ) ಅಪಾರ್ಟ್‌ಮೆಂಟ್ ಕಟ್ಟಡದ ಬ್ಲಾಕ್‌ನ ಹನ್ನೆರಡನೇ ಮಹಡಿಯ ನಂ.ಎ1–1126ರಲ್ಲಿ ಎರಡು ಬೆಡ್‌ರೂಮ್‌ನ್ನು ಒಳಗೊಂಡಿದ್ದು ಈ ಅಪಾರ್ಟ್‌ಮೆಂಟ್‌ನ್ನು ಶೋಭಾ ಹಿಲ್‌ವ್ಯೂ ಎಂದು ಕರೆಯಲಾಗುವ ಕಾಂಪೋಸಿಟ್ ಕಾಂಪ್ಲೆಕ್ಸ್‌ನಲ್ಲಿ ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದ್ದು, 1107.72 ಚದರ ಅಡಿ ಬಿಲ್ಟ್‌ಅಪ್ ಪ್ರದೇಶ ಮತ್ತು ಸಾಮಾನ್ಯ ಪ್ರದೇಶಗಳಲ್ಲಿ 168.62 ಚದರ ಅಡಿ ಪ್ರಮಾಣಾನುಗುಣವಾದ ಪಾಲು ಮತ್ತು ಮ್ಯೂಟಿ ಲೆವೆಲ್ ಕಾರ್ ಪಾರ್ಕ್‌ನಲ್ಲಿ (ಎಂಎಲ್‌ಸಿಪಿ) ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ತ್ರಿಮೂರ್ತಿ : 9036773553 ರವರನ್ನು ಸಂಪರ್ಕಿಸಿ**	14.06.2024 ಎನ್‌ಪಿಎ ದಿನಾಂಕ 30.08.2023	Loan No. PH0090100185291 POWER HOME Rs.34,00,000/- ಒಟ್ಟು ಮೊತ್ತ ರೂ.26,47,685/– ದಿನಾಂಕ: 10.06.2024 ರಂದು ಇದ್ದಂತೆ
4	(1) **ಶ್ರೀ. ಶಶಿ ಕುಮಾರಿ. ಎಂ** ಬಿನ್ ಶ್ರೀ ಮುನಿರಾಜ್, (2) **ಶ್ರೀ ಮುನಿರಾಜು** ಬಿನ್ ಶ್ರೀ ಮುನಿಯಪ್ಪ, **ಇವರಿಬ್ಬರ ವಿಳಾಸ:** ನಂ.7, ಪಾರಿಜಾತ ಕಟ್ಟಡ, ಸೂರ್ಯೋದಯ ಲೇಔಟ್, ಶಿವರಾಮ ಕಾರಂತ ನಗರ, ಹೆಗಡೆ ನಗರ, ಬೆಂಗಳೂರು ಉತ್ತರ, ಬೆಂಗಳೂರು 560077, **ಮತ್ತೊಂದು ವಿಳಾಸ:** (3) **ಶ್ರೀ ಶಶಿಕುಮಾರಿ. ಎಂ** ಬಿನ್ ಶ್ರೀ ಮುನಿರಾಜ್, ನಂ.400, ಥಣಿಸಂದ್ರ, ಬೆಂಗಳೂರು ನಗರ, ಬೆಂಗಳೂರು – 560045, **ಮತ್ತೊಂದು ವಿಳಾಸ:** (4) **ಶ್ರೀ ಮುನಿರಾಜು** ಬಿನ್ ಶ್ರೀ ಮುನಿಯಪ್ಪ ನಂ.32 ಜಿ, ಥಣಿಸಂದ್ರ, ಬೆಂಗಳೂರು ನಗರ, ಬೆಂಗಳೂರು 560045. **ಆಸ್ತಿ ವಿಳಾಸ:** (5) **ಶ್ರೀ ಶಶಿ ಕುಮಾರಿ. ಎಂ** ಬಿನ್. ಶ್ರೀ ಮುನಿರಾಜ್, (6) **ಶ್ರೀ ಮುನಿರಾಜು** ಬಿನ್ ಶ್ರೀ ಮುನಿಯಪ್ಪ, **ಇವರಿಬ್ಬರ ವಿಳಾಸ:** ನಿವೇಶನ ಸಂಖ್ಯೆ 29, ಖಾತಾ ನಂ. 477/32/3ಎ/29, ಸಂಪಿಗೇನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು – 560064.	**ಈ ಆಸ್ತಿಯು ಶ್ರೀ ಶಶಿ ಕುಮಾರ್ ಬಿನ್ ಮುನಿರಾಜುರವರ ಹೆಸರಿನಲ್ಲಿದೆ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ಸ್ವತ್ತಿನ ನಿವೇಶನ ನಂ.29, (ಉತ್ತರ ಭಾಗ), ಬಿಬಿಎಂಪಿ ಖಾತಾ ನಂ.477/32/3ಎ/29, ಈ ಆಸ್ತಿಯು ಸಂಪಿಗೆಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿದೆ ಮತ್ತು ಎಲ್ಲಾ ನಾಗರೀಕ ಸವಲತ್ತುಗಳನ್ನು ಒಳಗೊಂಡಿರುವ ಆಸ್ತಿಯಾಗಿರುತ್ತ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40–0" (ನಲವತ್ತು), ಉತ್ತರದಿಂದ ದಕ್ಷಿಣಕ್ಕೆ: 40–0" (ನಲವತ್ತು) ಅಡಿ, ಒಟ್ಟು ವಿಸ್ತೀರ್ಣ 1600 ಚದರ ಅಡಿ, ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.10, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.28, ದಕ್ಷಿಣಕ್ಕೆ: ನಿವೇಶನ ನಂ.29ರ ಉಳಿಕೆ ಭಾಗ. **ಯಾವುದೇ ಮಾಹಿತಿಗಾಗಿ ಶ್ರೀ.ತ್ರಿಮೂರ್ತಿ : 9036773553 ರವರನ್ನು ಸಂಪರ್ಕಿಸಿ.**	14.06.2024 ಎನ್‌ಪಿಎ ದಿನಾಂಕ 03.06.2024	Loan No. PHR051401616355 POWER HOME Rs.51,60,708/- ಒಟ್ಟು ಮೊತ್ತ ರೂ. 33,71,175/– ದಿನಾಂಕ: 12.06.2024 ರಂದು ಇದ್ದಂತೆ
5	(1) **ಶ್ರೀ ಜಿ.ಟಿ.ಬಸವರಾಜ,** ಬಿನ್ ಶ್ರೀ ಲೇಟ್ ಗೋರಿಯಾತ್ ತಿಮ್ಮಣ್ಣ, (2) **ಶ್ರೀಮತಿ ವಿಜಯಲಕ್ಷ್ಮೀ** ಕೋಂ. ಶ್ರೀ ಜಿ.ಟಿ.ಬಸವರಾಜ, **ಇವರಿಬ್ಬರ ವಿಳಾಸ:** ತಿರುಮಲ ನಿಲಯ ಚಾನಲ್ ರಸ್ತೆ, 16ನೇ ವಾರ್ಡ್, ಬಸವೇಶ್ವರ ನಗರ, ಹಿರಿಯೂರು, ಚಿತ್ರದುರ್ಗ – 577598. **ಆಸ್ತಿಯ ವಿಳಾಸ:–** (3) **ಶ್ರೀ ಜಿ.ಟಿ.ಬಸವರಾಜ** ಬಿನ್ ಶ್ರೀ ಲೇಟ್ ಗೋರಿಯತ್ ತಿಮ್ಮಣ್ಣ, (4) **ಶ್ರೀಮತಿ ವಿಜಯಲಕ್ಷ್ಮೀ** ಕೋಂ. ಶ್ರೀ ಜಿ.ಟಿ.ಬಸವರಾಜ, ಪ್ಲಾಟ್ ನಂ. 94, ಸರ್ವೆ ನಂ. 268, ಹಿರಿಯೂರು ಗ್ರಾಮ, ಖಾತಾ ನಂ. 094, ಅಸೆಸ್‌ಮೆಂಟ್ ನಂ. 94, ಬಸವೇಶ್ವರ ಲೇಔಟ್, ಹಿರಿಯೂರು ಟೌನ್, ಚಾನೆಲ್ ರಸ್ತೆ ಚಿತ್ರದುರ್ಗ – 577598.	ಆರ್‌ಸಿಸಿ ವಾಸಯೋಗ್ಯ ಆಸ್ತಿಯನ್ನು ಹೊಂದಿರುವ ನಿವೇಶನ ಸಂಖ್ಯೆ. 94, ಖಾತಾ ನಂ.94, ಅಸೆಸ್‌ಮೆಂಟ್ ನಂ.94, ಸಿಟಿ ಮುನಿಸಿಪಲ್ ಆಸ್ತಿ ಸಂಖ್ಯೆ. 27–22–77, ಅಸೆಸ್‌ಮೆಂಟ್ ನಂ.94/94/94, ವಿಸ್ತೀರ್ಣ 09X12 ಮೀಟರ್, ಇದು ಹರಿಪುರ ಗ್ರಾಮ, ಮರು ಸರ್ವೆ ನಂ. 268, ಹರಿಪುರ ಈಗ ಇದನ್ನು ಬಸವೇಶ್ವರ ಬಡಾವಣೆ ಎಂದು ಕರೆಯಲಾಗುವುದು, ಹರಿಪುರ, ಹರಿಪುರ ತಾಲ್ಲೂಕು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.95, ಪಶ್ಚಿಮಕ್ಕೆ: ನಿವೇಶನ ನಂ.93, ಉತ್ತರಕ್ಕೆ : ನಿವೇಶನ ನಂ.99, ದಕ್ಷಿಣಕ್ಕೆ : 12 ಮೀಟರ್ ಅಗಲ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ಸಂಜಯಪ್ರಸಾದ್ : ಮೊ: 9916566630 ರವರನ್ನು ಸಂಪರ್ಕಿಸಿ.**	24.06.2024 ಎನ್‌ಪಿಎ ದಿನಾಂಕ 08.06.2024	Loan No. LPR022507958025 ASSET POWER BRE Rs.21,24,609/- ಒಟ್ಟು ಮೊತ್ತ ರೂ.21,40,903/– ದಿನಾಂಕ : 15.06.2024 ರಂದು ಇದ್ದಂತೆ
6	(1) **ಶ್ರೀ ಎಂ. ವಿಶ್ವನಾಥ ಪೈ,** ಬಿನ್ ಶ್ರೀ ಮಾಧವ ಮಲ್ಪೆ ಪೈ, (2) **ಶ್ರೀಮತಿ ಅಕ್ಷತಾ. ಆರ್,** ಕೋಂ. ಶ್ರೀ ಎಂ. ವಿಶ್ವನಾಥ ಪೈ, **ಇವರಿಬ್ಬರ ವಿಳಾಸ:** ನಂ.16/40/1, ತೀರಂಚಿನ್ನಮಲ್ಲೆ ನಾಗ, ಕರುಮತ್ತಂಪಟ್ಟಿ, ಕೊಯಮತ್ತೂರು–641159, **ಮತ್ತೊಂದು ವಿಳಾಸ:** (3) **ಶ್ರೀ ಎಂ. ವಿಶ್ವನಾಥ ಪೈ,** ಬಿನ್ ಶ್ರೀ ಮಾಧವ ಮಲ್ಪೆ ಪೈ, ನಂ. 6–33/3, ಶ್ರೀನಿವಾಸ ಕೋಡಿಕಲ್ ಮುಖ್ಯ ರಸ್ತೆ, ಅಶೋಕ್ ನಗರ, ಮಂಗಳೂರು ದಕ್ಷಿಣ ಕನ್ನಡ, ಮಂಗಳೂರು 575006. (4) **ಶ್ರೀಮತಿ ಅಕ್ಷತಾ. ಆರ್** ಕೋಂ. ಶ್ರೀ ಎಂ.ವಿಶ್ವನಾಥ ಪೈ ಐಶ್ವರ್ಯ ನಿಲಯ, ಕೋಟೆಬಾಗಿಲು, ಮರಪಾಡಿ ಗ್ರಾಮ, ಮೂಡುಬಿದಿರೆ, ಮಂಗಳೂರು – 575001. **ಆಸ್ತಿಯ ವಿಳಾಸ:– (5) ಶ್ರೀ ಎಂ. ವಿಶ್ವನಾಥ ಪೈ,** ಬಿನ್ ಶ್ರೀ ಮಾಧವ ಮಲ್ಪೆ ಪೈ, (6) **ಶ್ರೀಮತಿ ಅಕ್ಷತಾ. ಆರ್,** ಕೋಂ. ಶ್ರೀ ಎಂ.ವಿಶ್ವನಾಥ ಪೈ, ಎಫ್ ನಂ. 218, ರೆಡ್‌ಬ್ರಿಕ್ಸ್ ಗ್ರಾಮ, 1ನೇ ಹಂತ, 2ನೇ ಮಹಡಿ, ಡೋರ್ ನಂ. 21–78/38, ಕೋಟಿಮುರ ಸರಿಪಳ್ಳ ರಸ್ತೆ, ಎನ್‌ಆರ್ ಕೆಎಂಎಫ್ ಡೈರಿ, ಕುಲಶೇಖರ ಕಡವು ಗ್ರಾಮ, ಮಂಗಳೂರು–575005.	**ಷೆಡ್ಯೂಲ್–ಎ:** ಕೃಷಿಯೇತರ ಸ್ಥಿರಾಸ್ತಿಯು ಮಂಗಳೂರು ತಾಲ್ಲೂಕಿನ ಪಡವು ಗ್ರಾಮದಲ್ಲಿದೆ, ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದೆ ಮತ್ತು ಮಂಗಳೂರು ನಗರ, ದ.ಕ.ಜಿಲ್ಲೆಯ ನೋಂದಣಿ ಉಪಜಿಲ್ಲೆಯಲ್ಲಿ ಒಳಗೊಂಡಿದೆ. **ಐಟಂ ನಂ.1:** ಸರ್ವೆ ನಂ.246/5(ಭಾಗ), **ಕಿಸ್ಸಮ್:** ಪರಿವರ್ತಿತ, **ವಿಸ್ತೀರ್ಣ:** ಎ–ಸಿ: 0–49.90, **ಭಾಗ:** ಮಧ್ಯ, **ಐಟಂ ಸಂಖ್ಯೆ.2:** ಸರ್ವೆ ನಂ. 246/4 (ಭಾಗ), **ಕಿಸ್ಸಮ್:** ಪರಿವರ್ತಿತ, **ವಿಸ್ತೀರ್ಣ : ಎ–ಸಿ:** 0–04.40, ಭಾಗ: ನೈರುತ್ಯ, **ಒಟ್ಟು:** 0–54.30 ಎಲ್ಲಾ ಮೌಲ್ ಮತ್ತು ಮೂಲಭೂತ ಹಕ್ಕುಗಳ ಜೊತೆಗೆ ಮತ್ತು ಕೆಳಗಿನ ಸಾಮಾನ್ಯ ಚಕ್ಕುಬಂದಿ: ಉತ್ತರಕ್ಕೆ: 22–ಮೀಟರ್–ಅಗಲದ ರಸ್ತೆ, ದಕ್ಷಿಣಕ್ಕೆ: ಅದೇ ಸರ್ವೆ ನಂ. ಭಾಗ ಪೂರ್ವಕ್ಕೆ: ಅದೇ ಸರ್ವೆ ನಂ. ಭಾಗ, ಪಶ್ಚಿಮಕ್ಕೆ: 22 ಮೀಟರ್ ಅಗಲದ ರಸ್ತೆ. **ಷೆಡ್ಯೂಲ್–ಬಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ 2 ಬಿಹೆಚ್‌ಕೆ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.218. ಡೋರ್ ನಂ.21–78/38, ವಿಸ್ತೀರ್ಣ 710 ಚ.ಅಡಿ, ಸೂಪರ್ ನಿರ್ಮಿತ ಪ್ರದೇಶವನ್ನು ಹೊಂದಿದ್ದು, 2ನೇ ಮಹಡಿಯಲ್ಲಿ ಬಹುಮಹಡಿ ವಸತಿ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನ್ನು ಸಮುಚ್ಚಯದ ರೆಡ್‌ಬ್ರಿಕ್ಸ್ ವಿಲೇಜ್ ಪೇಸ್–ಇ ಎಂದು ಕರೆಯಲಾಗುವುದು, ಜೊತೆಗೆ 1.52% ಅವಿಭಾಜಿತ ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಹೊಂದಿದ್ದು ಮತ್ತು ಸಾಮಾನ್ಯಪ್ರದೇಶದಲ್ಲಿ ಇದೇ ರೀತಿಯ ಅವಿಭಾಜಿತ ಹಕ್ಕು ಅಪಾರ್ಟ್‌ಮೆಂಟ್ ಕಟ್ಟಡದ ನೆಲ ಮಹಡಿಯಲ್ಲಿ ಕಾರ್ ಪಾರ್ಕಿಂಗ್ ಸ್ಲಾಟ್ ನಂ.31 ಮತ್ತು ಸೌಲಭ್ಯಗಳನ್ನು ಒಳಗೊಂಡಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.**	24.06.2024 ಎನ್‌ಪಿಎ ದಿನಾಂಕ 08.06.2024	Loan No. PHR007702703451 POWER HOME VANILLA BRE Rs.23,00,697/- ಒಟ್ಟು ಮೊತ್ತ ರೂ. 18,75,335/– ದಿನಾಂಕ: 15.06.2024 ರಂದು ಇದ್ದಂತೆ
7	1. **ಶ್ರೀ.ಶ್ರೀಹರಿ ಲಕ್ಷ್ಮಯ್ಯ ದಾಸರಿ** ಬಿನ್ ಶ್ರೀ ದಾಸರಿ, 2. **ಶ್ರೀಮತಿ ಸರಿತಾಸ್ವಪ್ನ** ಕೋಂ ಶ್ರೀ ಶ್ರೀಹರಿ ಲಕ್ಷ್ಮಯ್ಯ ದಾಸರಿ, **ಇವರಿಬ್ಬರ ವಿಳಾಸ:** 14, ದೀನಬಂಧು ಕಾಲೋನಿ ಕಾರವಾರ ರಸ್ತೆ ಹುಬ್ಬಳ್ಳಿ, ಹುಬ್ಬಳ್ಳಿ ಟ್ರಾಫಿಕ್ ಐಲ್ಯಾಂಡ್ ಧಾರವಾಡ, ಹುಬ್ಬಳ್ಳಿ–580029. (ಪೊಲೀಸ್ ಕ್ವಾರ್ಟರ್ಸ್ ಎದುರು), **ಮತ್ತೊಂದು ವಿಳಾಸ:** ಸಿಟಿಎಸ್ ನಂ.3ಬಿ/58 ಬೃಂದಾವನ ಕಾಲೋನಿ, ಕೇಶ್ವಾಪುರ ಗ್ರಾಮ, ಹುಬ್ಬಳ್ಳಿ–580020. **ಮತ್ತೊಂದು ವಿಳಾಸ:** ಅನರೆವ್ಯಾರ್ ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ್ ಶ್ರೀ. ಶ್ರೀಹರಿ ಲಕ್ಷ್ಮಯ್ಯ ದಾಸರಿ (ಮಾಲೀಕರು) ಸಿಟಿಎಸ್ ನಂ.209ಬಿ ವಾರ್ಡ್ ನಂ.111 ಪ್ಲಾಟ್ ನಂ.19, ಡಾ. ಕವಿ ಆಸ್ಪತ್ರೆ, ದೀನಬಂಧು ಕಾಲೋನಿ ಹುಬ್ಬಳ್ಳಿ–580029.	**ಆಸ್ತಿಯ ವಿವರ:** ಆಸ್ತಿಯು ಶ್ರೀ. ಶ್ರೀಹರಿ ಲಕ್ಷ್ಮಯ್ಯ ದಾಸರಿ ಬಿನ್ ಶ್ರೀ ದಾಸರಿ, ಅವರಿಗೆ ಸೇರಿದೆ. ಆಸ್ತಿಯ ಕೃಷಿಯೇತರ ವಾಸಯೋಗ್ಯ ಓಪನ್ ಪ್ಲಾಟ್ ವಾರ್ಡ್ ಎಕ್ಸ್‌ಟೆನ್ಷನ್ ಸಿ.ಟಿ.ಎಸ್. ನಂ.3ಬಿ/58, ವಿಸ್ತೀರ್ಣ 133.3/9 Sq Yds ಅದರ ಮುನಿಸಿಪಲ್ ವಾರ್ಡ್ ನಂ.47, ಮುನಿಸಿಪಲ್ ಸಂಖ್ಯೆ.3ಬಿ/58, ಪಿಐಡಿ ನಂ.47/7758, "ಬೃಂದಾವನ ಕಾಲೋನಿ" ಕೇಶ್ವಾಪುರ ಗ್ರಾಮ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ, ಹೆಚ್‌ಡಿಎಂಸಿ ಯ ಪರಿಮಿತಿಯಲ್ಲಿದೆ, ಮತ್ತು ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸಿಟಿಎಸ್ ನಂ.3ಬಿ/51., ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸಿಟಿಎಸ್ ನಂ. 3ಬಿ/59. **ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಂಪರ್ಕಿಸಿ ಶ್ರೀ ಸಂಜಯಪ್ರಸಾದ್ 9916566630**	14.06.2024 ಎನ್‌ಪಿಎ ದಿನಾಂಕ 09.04.2024	Loan No. PHR012903794361 POWER HOME VANILLA BRE Rs.18,86,039/- ರೂ. 16,84,133/– ದಿನಾಂಕ: 12.06.2024 ರಂದು ಇದ್ದಂತೆ
8	1. **ಶ್ರೀ. ನವಾಜ್,** ಬಿನ್ ಶ್ರೀ ಶೇಕ್ಷಾವಲಿ, 2. **ಶ್ರೀಮತಿ ಖಾಜಾ ಬಾನು,** ಕೋಂ ಶ್ರೀ ಶೇಕ್ಷಾವಲಿ, **ಇವರಿಬ್ಬರ ವಿಳಾಸ:** ವಾರ್ಡ್ ನಂ.15, ವೆಂಕಟ ರಮಣ ಕಾಲೋನಿ, ಬಳ್ಳಾರಿ – 583101. ಆಸ್ತಿ ವಿಳಾಸ:– **ಶ್ರೀ. ನವಾಜ್,** ಬಿನ್ ಶ್ರೀ ಶೇಕ್ಷಾವಲಿ, **ಶ್ರೀಮತಿ ಖಾಜಾ ಬಾನು,** ಕೋಂ ಶ್ರೀ ಶೇಕ್ಷಾವಲಿ, ಪ್ಲಾಟ್ ನಂ.66, ಟಿಎಸ್ ಸಂಖ್ಯೆ. 641, ಅಸೆಸ್‌ಮೆಂಟ್ ನಂ. 10235/66, 22–2–540–340, ಆರ್‌ಇಜಿ ನಂ. 1890641, ಎಂಎನ್‌ಪಿ ವಾರ್ಡ್ ಸಂಖ್ಯೆ.09, ಟಿಎಸ್. 09, ಬ್ಲಾಕ್ 06, ಆಂಜನೇಯ ದೇವಸ್ಥಾನದ ಹತ್ತಿರ, ಬಳ್ಳಾರಿ–560085.	**ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಆಸ್ತಿಯ ಕಾರ್ಪೊರೇಷನ್ ವಾರ್ಡ್ ನಂ.9, ಸಿಟಿಎಸ್ ವಾರ್ಡ್ ನಂ.9, ಬ್ಲಾಕ್ ನಂ. 6, ಟಿಎಸ್ ಸಂಖ್ಯೆ. 641, ಪ್ಲಾಟ್ ಸಂಖ್ಯೆ.66 ಮತ್ತು ನಮೂನೆ ಸಂಖ್ಯೆ. 2, ಕಾರ್ಪೊರೇಷನ್ ವಾರ್ಡ್ ನಂ.22, ಆಸ್ತಿ ಸಂಖ್ಯೆ. 22–2–540–340, ಅಸೆಸ್‌ಮೆಂಟ್ ಸಂಖ್ಯೆ.10235/66, ಡಾಕ್ಯುಮೆಂಟ್ ಸಂಖ್ಯೆ.1890641, ವಿಸ್ತೀರ್ಣ ಪೂರ್ವ–ಪಶ್ಚಿಮ 6 ಮೀಟರ್, ಉತ್ತರ–ದಕ್ಷಿಣ: 9 ಮೀಟರ್, ಒಟ್ಟು 54 ಚದರ ಮೀಟರ್, ಇದರಲ್ಲಿ ನಿರ್ಮಿಸಲಾದ ಪ್ರದೇಶದ ವಿಸ್ತೀರ್ಣ 54 ಚದರ ಮೀಟರ್, ಈ ಆಸ್ತಿಯು ವೆಂಕಟರಮಣ ನಗರ, ಬಳ್ಳಾರಿಯಲ್ಲಿದ್ದು, ಬಳ್ಳಾರಿ ಜಿಲ್ಲೆ ಉಪ–ರಿಜಿಸ್ಟ್ರಾರ್‌ನಲ್ಲಿ ನೋಂದಣಿಯಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಪ್ಲಾಟ್ ನಂ.65, ಪಶ್ಚಿಮಕ್ಕೆ: ಪ್ಲಾಟ್ ನಂ.67, ಉತ್ತರಕ್ಕೆ: ರಸ್ತೆ. ದಕ್ಷಿಣಕ್ಕೆ: ಖಾಸಗಿ ಸ್ಥಳ. **ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಂಪರ್ಕಿಸಿ ಶ್ರೀ ಸಂಜಯಪ್ರಸಾದ್ 9916566630**	24.06.2024 ಎನ್‌ಪಿಎ ದಿನಾಂಕ 08.06.2024	Loan No. LPR012907759988 ASSET POWER BRE Rs.11,44,000/- ರೂ. 8,54,994/– ದಿನಾಂಕ: 15.06.2024 ರಂದು ಇದ್ದಂತೆ
9	1. **ಶ್ರೀ ನವೀನ್ ಮನ್ಮಥ ರಾಯ್ಕರ್,** ಬಿನ್ ಶ್ರೀ ಮನ್ಮಥ್ ವಿಶ್ವನಾಥ್ ರಾಯ್ಕರ್, ಹೆಚ್ ನಂ. 265, ಫಸ್ಟ್ ಅರ್ವಾಲೆ ಕೊರ್ಟಾಲಿಮ್, ಗೋವಾ, ಕಾರ್ಲಿಮ್ 403110. **ಮತ್ತೊಂದು ವಿಳಾಸ:** ಶ್ರೀ ನವೀನ್ ಮನ್ಮಥ ರಾಯ್ಕರ್, ಬಿನ್ ಶ್ರೀ ಮನ್ಮಥ ವಿಶ್ವನಾಥ ರಾಯ್ಕರ್, **ಶ್ರೀಮತಿ ಶಾಂತಾ ಎಂ ರಾಯ್ಕರ್,** ಕೋಂ ಶ್ರೀ ಮನ್ಮಥ ವಿಶ್ವನಾಥ ರಾಯ್ಕರ್, **ಇವರಿಬ್ಬರ ವಿಳಾಸ:** ಪ್ಲಾಟ್ ನಂ.8, ಸರ್ವೆ ನಂ.545, 551 ಬಿ, 552 & 561, ಮಿತ್ರ ವಿಶಾಲ ಪಾರ್ಕ್, ವಿದ್ಯಾನಗರ, ಉಣಕಲ್ ಚೇತನಾ ಕಾಲೇಜು ಎದುರು, ಹುಬ್ಬಳ್ಳಿ – 580021.	**ಆಸ್ತಿಯ ವಿವರ:** ಪ್ಲಾಟ್ ನಂ.8 ಆರ್‌ಎಸ್ ನಂ.ನಂ.545+551B+552+561 ರನ್ನು ಒಳಗೊಂಡಿರುವ ಭೂಮಿ ಮತ್ತು ಕಟ್ಟಡದ ವಿಸ್ತೀರ್ಣ 1 ಗುಂಟೆ 15 ಅನ್ನಾಸ್, ಅಂದರೆ 2109 ಚದರ ಅಡಿ ನೆಲಮಹಡಿ 109.50 ಚ.ಮೀ., ಮೊದಲ ಮಹಡಿ 258. 40 ಚ.ಮೀ., ವಿಸ್ತೀರ್ಣ ಹೊಂದಿದೆ, ಈ ಆಸ್ತಿಯು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೆಲೆಗೊಂಡಿದೆ, ಉಣಕಲ್, ಹುಬ್ಬಳ್ಳಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡದಲ್ಲಿದೆ. ಮತ್ತು ಚಕ್ಕುಬಂದಿ:ಪೂರ್ವಕ್ಕೆ : ಪ್ಲಾಟ್ ನಂ.9, ಪಶ್ಚಿಮಕ್ಕೆ: ಪ್ಲಾಟ್ ನಂ.7, ಉತ್ತರಕ್ಕೆ: ಆರ್‌ಎಸ್ ನಂ.30, ದಕ್ಷಿಣಕ್ಕೆ: ರಸ್ತೆ. **ಯಾವುದೇ ಸ್ಪಷ್ಟೀಕರಣಕ್ಕಾಗಿ ದಯವಿಟ್ಟು ಸಂಪರ್ಕಿಸಿ ಶ್ರೀ ಸಂಜಯಪ್ರಸಾದ್ 9916566630**	24.06.2024 ಎನ್‌ಪಿಎ ದಿನಾಂಕ 08.06.2024	Loan No. LPR012901815584 ASSET POWER Rs.16,46,465/- ರೂ. 13,27,355/– ದಿನಾಂಕ: 15.06.2024 ರಂದು ಇದ್ದಂತೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 11.07.2024

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ, ಕೊಡಗು ಜಿಲ್ಲೆ
(ಕರ್ನಾಟಕ ಸರ್ಕಾರದ ನೊಂದಾಯಿತ ಸ್ವಾಯತ್ತ ಸಂಸ್ಥೆ)
ದೂರವಾಣಿ: 08272 220606 ವೆಬ್‌ಸೈಟ್: www.kimskodagu.kar.nic.in
ಇ–ಮೇಲ್–: directormckodagu@gmail.com

ಇ–ಟೆಂಡರ್ ಪ್ರಕಟಣೆ

ಸಂಖ್ಯೆ: ME/2024–25/IND: ದಿನಾಂಕ:– 10.07.2024

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ವೈದ್ಯಕೀಯ ನಿಯತಕಾಲಿಕೆಗಳ (Medical Journals) ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ [https://kppp.karnataka.gov.in ನಲ್ಲಿ ಎರಡು ಟೆಂಡರ್ ಅರ್ಜಿ ಪದ್ಧತಿಯಲ್ಲಿ, ಇ.ಎಂ.ಡಿ.ಯೊಂದಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 10.07.2024 ಸಮಯ 10.00 AM. ಟೆಂಡರ್ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 26.07.2024 ಸಮಯ 5.00 PM. ಹೆಚ್ಚಿನ ವಿವರಗಳನ್ನು ಇ–ಸಂಗ್ರಹಣ ವೇದಿಕೆಯಿಂದ https://kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು,
ಕೊವೈವಿಸಂ, ಮಡಿಕೇರಿ,

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್.ಎಸ್.ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ, ಎನ್.ಸಿ.ಸಿ ಕಛೇರಿ ಪಕ್ಕ ದಾವಣಗೆರೆ–577005 ದೂರವಾಣಿ : 08192 237833 ಫ್ಯಾಕ್ಸ್ : 08192 230919 e mail : dhodavangere@gmail.com

ಸಂಖ್ಯೆ:ಜಿಆದಾ/ಟೆಂಡರ್/221/2023–24 ದಿನಾಂಕ:04/07/2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ ಹಾಗೂ ಅಧೀನ ಕಛೇರಿಗಳಿಗೆ ಅವಶ್ಯಕವಾಗಿ ಬೇಕಾಗಿರುವ ನಾಲ್ಕು ಚಕ್ರದ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಸೇವೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ ಪ್ರಕಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ.

Tender reference No: DH&FWO/Tender/VEHICLE/221/2023-24 Dt:04/07/2024, Total Vehicles required:- 09 Vehicle(4Wheeler) with AC. Family Welfare Office. (Preferably 1000cc With Yellow Board Passing Model 2017 onwards, Amount put to tender Rs. 5097600.00 (Rupees Fifty Lakh NintySix Thousand Six hundred only), EMD Amount Rs. 102000.00 (Rupees One Lakh Two Thousand only), Availability of tender document 06-07-2024 To 05-08-2024 before 05:00 PM, IST upload all documents is compulsory else will be disqualified. Last date and time for receipt bid document 05-08-2024 before 05:15 PM, IST all documents must be attested by the agency, Time, date and place of opening of tender (Technical Bid): 06-08-2024 at 05:30 PM, IST District Health & Family Welfare Officer, Davanagere Time, date and place of opening of tender (Financial Bid): After Completion of technical bid praocess, Address for communication: District Health and Family Welfare Office, Sriramanaga road, Near NCC Camp, Davanagere-577005.

ವಾಸಾಇ/ಡಿವಿಜಿ/136/ ಕೆಎಸ್‌ಎಂಸಿಎ/2024–25

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ)
ಕೊಠಡಿ ಸಂಖ್ಯೆ. 123, ಜಿಲ್ಲಾಡಳಿತ ಭವನ, ಗದಗ–582101
Ph & Fax : 08372-231877, Email : dudc_gdg@yahoo.co.in
ನಂ.ಜಿನಕೋ/ಅಭಿವೃದ್ಧಿ/ಸ್ವಚ್ಛ ಭಾರತ್ ಮಿಷನ್ 2.0/ವಹಿ–34/2023–24
ದಿನಾಂಕ : 05–07–2024

ಟೆಂಡರ್ ಪ್ರಕಟಣೆ

ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ಧತಿಯಲ್ಲಿ KW–3 ನ ದಸ್ತಾವೇಜಿನಲ್ಲಿ ಸ್ವಚ್ಛಭಾರತ ಅಭಿಯಾನದ 2.0 ಯೋಜನೆಯ ಅನುದಾನದಲ್ಲಿ ಅರ್ಹ ಗುತ್ತಿಗೆದಾರರಿಂದ ಘನತ್ಯಾಜ್ಯ ವಸ್ತು ವಿಲೇವಾರಿ ಕುರಿತು ಪುರಸಭೆ ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಪಿ.ಇ.ಬಿ ಸ್ಟ್ರಕ್ಚರ್ 5 & 3 ಟಿ.ಪಿ.ಡಿ ಎಂ.ಆರ್.ಎಫ್ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ ಸಿವ್ಹಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೆಟಿಪಿಪಿ ಅಧಿನಿಯಮ 1999 ನಿಯಮ ಟೆಂಡರ್ ಆಹ್ವಾನಿಸಿದ್ದು ಸದರ ವಿವರ ಈ ರೀತಿ ಇರುತ್ತದೆ.

1) (DMA/2024-25/BD/WORK_INDENT20892) ರೂ. 67.32 ಲಕ್ಷ
2) (DMA/2024-25/BD/WORK_INDENT20889) ರೂ. 50.58 ಲಕ್ಷ
3) (DMA/2024-25/BD/WORK_INDENT20854) ರೂ. 50.58 ಲಕ್ಷ
4) (DMA/2024-25/BD/WORK_INDENT20849) ರೂ. 58.95 ಲಕ್ಷ.

ಬಿಡ್ಡದಾರರು ಟೆಂಡರ್ ವಿವರಗಳನ್ನು KPP Portal ರಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳನ್ನು ಟೆಂಡರ್ **www.kppp.karnataka.gov.in**. ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : **22–07–2024** ಸಂಜೆ 5.30 ಗಂಟೆ. ಟೆಂಡರ್ ತೆರೆಯುವ (ತಾಂತ್ರಿಕ ಬಿಡ್ಡ) ದಿನಾಂಕ : **24–07–2024** ಬೆಳಗ್ಗೆ 11.00 ಗಂಟೆ ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ **www.kppp.karnataka.gov.in** ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ.

ವಾಸಾಸಂಇ/ಗದಗ/ಕೆಎಸ್‌ಎಂಸಿಎ/84/2024–25

ಟ್ವೀಟೂ-ಖಾರಾ

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ತಾವೊಬ್ಬ ದಲಿತೋದ್ಧಾರಕ ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಸಿಎಂ ಸಿದ್ದರಾಮಯ್ಯನವರು, ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ 24 ಸಾವಿರ ಕೋಟಿಗೂ ಅಧಿಕ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಶೋಷಿತ ಸಮುದಾಯಕ್ಕೆ ದ್ರೋಹ ಬಗೆದಿದ್ದಾರೆ. ದಲಿತರಿಗೆ ಅನ್ಯಾಯ ಮಾಡಿದ ಸರಕಾರದ ವಿರುದ್ಧ ಅಧಿವೇಶನದಲ್ಲಿ ಹೋರಾಟ ನಡೆಸಲಿದ್ದೇವೆ.

ರಾಜು.ಪಿ,
ಬುದ್ಧ,ಬಸವ ಅಂಬೇಡ್ಕರ್ ಪರಿವಾರ

ದಲಿತರ ಮೇಲೆ ಬಿಜೆಪಿಯದ್ದು ಬಾಯಿ ಅಚ್ಛೇದಿನ್ ಎಂಬ ಅರಿವು ದಲಿತರಿಗಿದೆ. ದಲಿತರ ಮೇಲಿನ ದೌರ್ಜನ್ಯ, ದಬ್ಬಾಳಿಕೆಯ ಸಂದರ್ಭ ಮೌನವಹಿಸುವ ನಿಮಗೆ ದಲಿತರ ಹಿತದೃಷ್ಟಿಯ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲ. ದಲಿತರು ಅವಿದ್ಯಾವಂತರ ಸ್ಥಾನದಿಂದ ಹೊರಗೆ ಬಂದು ಹಲವು ವರ್ಷಗಳೇ ಕಳೆದಿದೆ.

ಕಾನೂನಿಗೆ ವಿರುದ್ಧವಾಗಿ ನಡೆದಿದ್ದೆಲ್ಲಿ ಎಂಬುದನ್ನು ಬಿಜೆಪಿ ತೋರಿಸಲಿ: ಸಿಎಂ ಸವಾಲು | ಸಮಿತಿಯಿಂದ ವರದಿ ಬಂದ ನಂತರ ಕಠಿಣ ಕ್ರಮ

ಮುಡಾ ಗಬ್ಬೆದ್ದು ಹೋಗಿದ್ದು, ಸ್ವಚ್ಛಗೊಳಿಸುವೆ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮೊದಲಿನಿಂದಲೂ ಗೆಬ್ಬೆದ್ದು ಹೋಗಿದ್ದು, ಅದನ್ನು ಸ್ವಚ್ಛಗೊಳಿಸುವ ಕೆಲಸ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಪತ್ನಿಗೆ ಬದಲಿ ನಿವೇಶನ ಕೊಟ್ಟ ವಿಷಯದಲ್ಲಿ ಬಿಜೆಪಿಯವರು ರಾಜಕೀಯವನ್ನು ಮುಂದುವರಿಸಿದರೆ ನಾವೂ ರಾಜಕೀಯವಾಗಿಯೇ ಮುಂದುವರಿಯಬೇಕಾಗುತ್ತದೆ. ಅವರಿಗೆ ಹೇಗೆ ಎದಿರೇಟು ಕೊಡಬೇಕು ಎನ್ನುವುದು ಗೊತ್ತಿದೆ. ನಾವು ಕಾನೂನಾತ್ಮಕವಾಗಿದ್ದೇವೆ. ಕಾನೂನಿಗೆ ವಿರುದ್ಧವಾಗಿ ಆಗಿರುವುದೆಲ್ಲಿ ಎನ್ನುವುದನ್ನು ಬಿಜೆಪಿಯವರು ತೋರಿಸಲಿ ಎಂದು ಸವಾಲು ಹಾಕಿದರು.

ಮುಡಾ ಹಗರಣದ ಬಗ್ಗೆ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದ ಸಮಿತಿಯಿಂದ ತನಿಖೆ ನಡೆಯುತ್ತಿದೆ. ವರದಿ ಬಂದ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತೇನೆ. ನಮ್ಮ ಕಾಲದಲ್ಲೂ ತಪ್ಪುಗಳು ಆಗಿವೆ. ಬಿಜೆಪಿ ಕಾಲದಲ್ಲೇ ಹೆಚ್ಚು ತಪ್ಪುಗಳಾಗಿವೆ. ಶೇ.50:50 ಅನುಪಾತದಲ್ಲಿ ನಿವೇಶನ ಹಂಚಿಕೆ ವಿಷಯವನ್ನು ಆಯುಕ್ತರಾದಿಯಾಗಿ ಯಾರೂ ದುರುಪಯೋಗ ಮಾಡಿಕೊಳ್ಳದಂತೆ ಸರಿಪಡಿಸುತ್ತೇವೆ ಎಂದು ತಿಳಿಸಿದರು.

2021ರಲ್ಲಿ ಬಿಜೆಪಿ ಸರಕಾರವೇ ಇತ್ತಲ್ಲ. ಆ ಕಾಲದಲ್ಲಿ ಕೊಟ್ಟರೆ, ಮುಡಾದವರು ಆಗ ತಪ್ಪು ಮಾಡಿದ್ದರೆ ಜವಾಬ್ದಾರರು ಯಾರು?ಒಂದು ವೇಳೆ ನಿವೇಶನ ವಾಪಸ್ ಪಡೆದುಕೊಳ್ಳುವುದೇ ಆದಲ್ಲಿ ಭೂಸ್ವಾಧೀನ ಕಾಯಿದೆ ಪ್ರಕಾರ ನಮಗೆ ಪರಿಹಾರ ಕೊಡಬೇಕಲ್ಲವೇ? ಜಮೀನಿನ ಮೌಲ್ಯದ ಮೂರು ಪಟ್ಟು ಪರಿಹಾರ ನೀಡಬೇಕಲ್ಲವೇ? ಅದರ ಪ್ರಕಾರ ₹ 57 ಕೋಟಿ ಆಗುತ್ತದೆ. ಬಡ್ಡಿ ಸೇರಿದರೆ ₹ 62 ಕೋಟಿ ಆಗುತ್ತದೆ. ಬೇಕಿದ್ದರೆ ನಿವೇಶನ ವಾಪಸ್ ಪಡೆದುಕೊಳ್ಳಲಿ. ನಮಗೆ ಹಣ ಕೊಡಲಿ ಎಂದು ಹೇಳಿದರು. ನನ್ನ ಪತ್ನಿಗೆ ನಿವೇಶನ ನೀಡಿದಾಗ ನಾನು ಪ್ರತಿಪಕ್ಷದ ನಾಯಕನಾಗಿದ್ದೆ. ಬಿಜೆಪಿಯವರು ನನ್ನನ್ನು ಕೇಳಿಕೊಂಡು ಕೆಲಸ ಮಾಡುತ್ತಿದ್ರಾ? ನಾನೀಗ ಪ್ರತಿಪಕ್ಷದ ನಾಯಕನನ್ನು ಕೇಳಿಕೊಂಡು ಕೆಲಸ ಮಾಡುತ್ತೇನೆಯೇ? ಎಂದು ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ.

- 2021ರಲ್ಲಿ ಬಿಜೆಪಿ ಸರಕಾರವೇ ಇತ್ತಲ್ಲ. ಆ ಕಾಲದಲ್ಲಿ ಕೊಟ್ಟರೆ, ಮುಡಾದವರು ಆಗ ತಪ್ಪು ಮಾಡಿದ್ದರೆ ಜವಾಬ್ದಾರರು ಯಾರು?
- ಒಂದು ವೇಳೆ ನಿವೇಶನ ವಾಪಸ್ ಪಡೆದುಕೊಳ್ಳುವುದೇ ಆದಲ್ಲಿ ಕಾಯಿದೆ ಪ್ರಕಾರ ನಮಗೆ ಪರಿಹಾರ ಕೊಡಬೇಕಲ್ಲವೇ?
- ನನ್ನ ಪತ್ನಿಗೆ ನಿವೇಶನ ನೀಡಿದಾಗ ನಾನು ಪ್ರತಿಪಕ್ಷದ ನಾಯಕ. ಬಿಜೆಪಿಯವರು ನನ್ನನ್ನು ಕೇಳಿಕೊಂಡು ಕೆಲಸ ಮಾಡುತ್ತಿದ್ರಾ?

2ನೇ ಬಾರಿ ಸಿಎಂ ಆಗಿರುವುದು ಸಹಿಸುತ್ತಿಲ್ಲ

ನಾನೊಬ್ಬ ಹಿಂದುಳಿದ ವರ್ಗದ ನಾಯಕ, ಎರಡನೇ ಬಾರಿ ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲು ಕೆಲವರಿಗೆ ಆಗುತ್ತಿಲ್ಲ. ಹೊಟ್ಟೆಕಿಚ್ಚಿನಿಂದ ಕೆಲವರು ಷಡ್ಯಂತ್ರ ಮಾಡುತ್ತಿದ್ದಾರೆ. ನನ್ನ ವಿರುದ್ಧ ದೂರಲು ಬೇರೇನೂ ಇಲ್ಲವಲ್ಲ, ಅದಕ್ಕಾಗಿ ಈ ನಿವೇಶನದ ವಿಷಯ ಹಿಡಿದುಕೊಂಡಿದ್ದಾರೆ. ಕಾನೂನಾತ್ಮಕವಾಗಿ ನಡೆದಿರುವ ವಿಚಾರವನ್ನು ಅಕ್ರಮ ಎಂದು ಬಿಂಬಿಸುತ್ತಿದ್ದಾರೆ. ಇದಕ್ಕೆಲ್ಲಾ ನಾನು ಹೆದರುತ್ತೀನಾ? ಎಂದು ಸಿಎಂ ಸಿದ್ದರಾಮಯ್ಯ ಗುಡುಗಿದರು.

ಸರಕಾರಿ ಖಜಾನೆಯಿಂದಲೇ ₹187 ಕೋಟಿ ಹಣ ವರ್ಗಾವಣೆ ಆಗಿರುವ ಬಗ್ಗೆ ಅಧಿಕೃತವಾದ ಯಾವ ವರದಿಯೂ ಬಂದಿಲ್ಲ. ಎಲ್ಲವೂ ತನಿಖಾ ಹಂತದಲ್ಲೇ ಇವೆ. ಖಜಾನೆಯಿಂದ ವರ್ಗಾವಣೆ ಆಗುವ ಹಣದ ಎಲ್ಲ ವಿಚಾರವೂ ನನ್ನ ಗಮನಕ್ಕೆ ಬರುವುದಿಲ್ಲ.
-ಸಿದ್ದರಾಮಯ್ಯ ಸಿಎಂ

ಪ್ರಧಾನಿ, ವಿತ್ತಸಚಿವೆ ರಾಜೀನಾಮೆ ಕೊಟ್ಟಿದ್ದಾರಾ?

'ವಾಲ್ಮೀಕಿ ನಿಗಮದಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ವಿಚಾರದಲ್ಲಿ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು' ಎಂದು ಶಾಸಕ ಜಿ.ಟಿ. ದೇವೇಗೌಡರ ಒತ್ತಾಯಕ್ಕೆ ಕೆಂಡಾಮಂಡಲವಾದ ಮುಖ್ಯಮಂತ್ರಿ, ಬ್ಯಾಂಕ್‌ನಲ್ಲೂ ಅವ್ಯವಹಾರ ಆಗಿದೆ. ಅದಕ್ಕೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪ್ರಧಾನಿ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕಲ್ಲವೇ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರಿನಲ್ಲಿ 2ನೇ ವಿಮಾನ ನಿಲ್ದಾಣ ಖಚಿತ – ಸಚಿವ
ಸುದ್ದಿ

ಕರ್ನಾಟಕ ಮಾಧ್ಯಮ ಅಕಾಡೆಮಿ ನೂತನ ಅಧ್ಯಕ್ಷೆಯಾಗಿ ನೇಮಕಗೊಂಡ ಹಿರಿಯ ಪತ್ರಕರ್ತೆ ಆಯೇಷಾ ಖಾನಂ, ಛಾಯಾಗ್ರಾಹಕ ವೆಂಕಟೇಶ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ ಧನ್ಯವಾದ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಇದ್ದರು.

ಶಂಕಿತ ಡೆಂಘೀಗೆ ಬಾಲಕಿ ಬಲಿ

ರೋಣ: ಶಂಕಿತ ಡೆಂಘೀಗೆ ಬಾಲಕಿಯೊಬ್ಬಳು ಬಲಿಯಾಗಿರುವ ಘಟನೆ ರೋಣ ಪಟ್ಟಣದಲ್ಲಿ ನಡೆದಿದೆ. ಸಾವನ್ನಪ್ಪಿದ ಬಾಲಕಿಯನ್ನು ರೋಣ ಪಟ್ಟಣದ ಆಶ್ರಯ ಕಾಲೋನಿಯ ನಿವಾಸಿ ಪ್ರಾರ್ಥನಾ ಸಾಂತಪ್ಪ ಗಂಟಿನವರ (11) ಎಂದು ಗುರುತಿಸಲಾಗಿದೆ. ಬಾಲಕಿಯು ಕಳೆದ ಒಂದು ವಾರದಿಂದ ತೀವ್ರ ಜ್ವರದಿಂದ ಬಳಲುತ್ತಿದ್ದಳು. ನಾಲ್ಕು ದಿನಗಳ ಹಿಂದೆ ರೋಣ ಪಟ್ಟಣದ ಸರಕಾರಿ ಆಸ್ಪತ್ರೆಗೆ ,ನಂತರ ಗದಗ ಜಿಲ್ಲಾಸ್ಪತ್ರೆಗೆ ಬಾಲಕಿಯನ್ನು ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಬಾಲಕಿ ಸಾವನ್ನಪ್ಪಿದ್ದಾಳೆ.

ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಇಲ್ಲ: ಗುಂಡೂರಾವ್

ಡೆಂಘೀ: ಹೈಕೋರ್ಟ್‌ಗೆ ಸಮಗ್ರ ಮಾಹಿತಿ ಸಲ್ಲಿಕೆ

ದಾವಣಗೆರೆ: ರಾಜ್ಯದಲ್ಲಿ ಡೆಂಘೀ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ಸ್ವಪ್ರೇರಿತ ಪಿಐಎಲ್ ದಾಖಲು ಮಾಡಿಕೊಂಡಿದ್ದು, ಡೆಂಘೀ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಸಮಗ್ರ ಮಾಹಿತಿಯನ್ನು ಸರಕಾರ ಸಲ್ಲಿಸಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಡೆಂಘೀ ನಿಯಂತ್ರಣದಲ್ಲಿದೆ. ಶೇ.1ರಷ್ಟು ಗಂಭೀರ ಪ್ರಕರಣಗಳಿವೆ. ಡೆಂಘೀ ನಿಯಂತ್ರಣಕ್ಕೆ ಕಾರ್ಯಪಡೆ ರಚಿಸಲಾಗಿದೆ. ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಇಲ್ಲ. ಡೆಂಘೀ ನಿಯಂತ್ರಣದ ನಿಟ್ಟಿನಲ್ಲಿ ಸೊಳ್ಳೆಗಳ ನಿರ್ಮೂಲನೆಗೆ ಲಾರ್ವಾ ಪರೀಕ್ಷೆ ನಡೆಸಲಾಗುತ್ತಿದೆ. ಡೆಂಘೀ ನಿಯಂತ್ರಣ, ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರತಿ ಶುಕ್ರವಾರ ಆರೋಗ್ಯ ಇಲಾಖೆ ಮಾತ್ರವಲ್ಲ ಎಲ್ಲ ಇಲಾಖೆಗಳು ಸಮನ್ವಯತೆಯೊಂದಿಗೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಡೆಂಘೀ ಹೆಚ್ಚಳಕ್ಕಿಂತ ಬಿಜೆಪಿ ಆರೋಪವೇ ಹೆಚ್ಚು: ರಾಜ್ಯದಲ್ಲಿ ಈವರೆಗೆ ಡೆಂಘೀಯಿಂದ ಏಳು ಜನರು ಮೃತಪಟ್ಟಿದ್ದಾರೆ. ಶೇ.1ರಷ್ಟು ಗಂಭೀರ ಪ್ರಕರಣಗಳಿವೆ ಎಂದು ತಿಳಿಸಿದರು. ರಾಜ್ಯ ಸರಕಾರ ಡೆಂಘೀ ಪ್ರಕರಣ ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ. ಬಿಜೆಪಿಯವರು ಡೆಂಘೀ ತರುವಂತಹ ಸೊಳ್ಳೆಗಳಿಗಿಂತಲೂ ಹೆಚ್ಚು ಆರೋಪಗಳನ್ನು ಹರಡುತ್ತಿದ್ದಾರೆ. ಇಂತಹ ವಿಷಯದಲ್ಲಿ ರಾಜಕೀಯ ಮಾಡುವುದು ಸರಿ ಅಲ್ಲ. ಅವರು ಸಹ ಡೆಂಘೀ ನಿಯಂತ್ರಣದ ವಿಷಯದಲ್ಲಿ ಸರಕಾರದೊಂದಿಗೆ ಕೈ ಜೋಡಿಸಬೇಕು ಎಂದರು.

ಕಾಗೋಡು ತಿಮ್ಮಪ್ಪಗೆ ಕಾಯಕ ರತ್ನ ಪ್ರಶಸ್ತಿ

ಶಿವಮೊಗ್ಗ: ಮಾಜಿ ಸಚಿವರು, ಹಿರಿಯ ರಾಜಕೀಯ ಮುತ್ಸದ್ದಿ ಕಾಗೋಡು ತಿಮ್ಮಪ್ಪನವರಿಗೆ ರಾಜ್ಯಮಟ್ಟದ ಕಾಯಕ ರತ್ನ ಪ್ರಶಸ್ತಿಯನ್ನು ಜು. 13ರಂದು ಶನಿವಾರ ಬೀದರ್‌ನ ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ನೀಡಿ ಗೌರವಿಸಲಾಗುವುದು ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ.ಡಿ.ರವಿಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಡಾ. ಹುಲಿಕಲ್ ನಟರಾಜ್‌ರವರ ನೇತೃತ್ವದಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಯಶಸ್ವಿ 4 ವರ್ಷ ಪೂರೈಸಿದ್ದು, ಸಂಸ್ಥೆಯನ್ನು ರಾಜ್ಯಾದ್ಯಂತ ಸಂಘಟಿಸಲಾಗಿದೆ. ಎಲ್ಲಾ ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿ ತನ್ನ ಶಾಖೆಗಳನ್ನು ಆರಂಭಿಸಿದ್ದು, 50 ಸಾವಿರಕ್ಕೂ ಹೆಚ್ಚಿನ ಸದಸ್ಯರನ್ನು ಹೊಂದಿದ ಹೆಗ್ಗಳಿಕೆ ಸಂಸ್ಥೆಗಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಜ್ಯಮಟ್ಟದ ಕಾರ್ಯಕ್ರಮವನ್ನು ಬೀದರ್‌ನ ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ್ದು, ಕಾರ್ಯಕ್ರಮದಲ್ಲಿ ಸಾಗರದ ಹಿರಿಯ ರಾಜಕಾರಣಿ ಕಾಗೋಡು ತಿಮ್ಮಪ್ಪನವರಿಗೆ ಕಾಯಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷರಾದ ನಾಡೋಜ ಡಾ.ಬಸವಲಿಂಗ ಪಟ್ಟದೇವರ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಕುವೆಂಪುನಗರದ ಸಚಿವರ ನಿವಾಸಕ್ಕೆ ಭೇಟಿ ನೀಡಿದ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರ ನೇತೃತ್ವದ ನಿಯೋಗ ಪಂಚಮಸಾಲಿ ಸಮಾಜದ 2ಎ ಮೀಸಲಿಗೆ ಮನವಿ ಸಲ್ಲಿಸಿದರು.

ಮೀಸಲು ಹೋರಾಟ ಅಂತಿಮಘಟ್ಟ ತಲುಪಿದೆ: ಸಚಿವೆ

ನಮ್ಮ ಬದ್ಧತೆ ಉಳಿಸಿಕೊಳ್ಳುತ್ತೇವೆ

ಬೆಳಗಾವಿ: ನಮ್ಮ ಇಡೀ ಕುಟುಂಬ ಪಂಚಮಸಾಲಿ ಸಮಾಜ ಮೀಸಲು ಹೋರಾಟದಲ್ಲಿ ಇರುತ್ತದೆ. ನಮ್ಮ ಬದ್ಧತೆಯನ್ನು ಉಳಿಸಿಕೊಳ್ಳುತ್ತೇವೆ. ಪಂಚಮಸಾಲಿ ಸಮಾಜದ 2ಎ ಮೀಸಲು ಹೋರಾಟ ಅಂತಿಮಘಟ್ಟ ತಲುಪಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಅವರು ಗುರುವಾರ ಕೂಡಲ ಸಂಗಮದ ಪಂಚಮಸಾಲಿ ಸಮಾಜದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರ ನೇತೃತ್ವದ ನಿಯೋಗಕ್ಕೆ ಭರವಸೆ ನೀಡಿದರು. ಕುವೆಂಪುನಗರದ ಸಚಿವರ ನಿವಾಸಕ್ಕೆ ಭೇಟಿ ನೀಡಿದ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರ ನೇತೃತ್ವದ ನಿಯೋಗದ ಮನವಿ ಸ್ವೀಕರಿಸಿ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶ್ರೀಗಳ ನೇತೃತ್ವದಲ್ಲಿ ಕಳೆದ ಮೂರು ವರ್ಷಗಳಿಂದ ಪಂಚಮಸಾಲಿ ಸಮಾಜದ ಮೀಸಲಿಗಾಗಿ ಹೋರಾಟ ನಡೆಯುತ್ತಿದೆ. ನಾವು ಬೇರೆ ಸಮಾಜಕ್ಕೆ ಅನ್ಯಾಯ ಮಾಡಿ ನಮ್ಮ ಸಮಾಜಕ್ಕೆ ಮೀಸಲು ಕೊಡಿ ಎಂದು ಕೇಳುತ್ತಿಲ್ಲ. ಈ ಮಾತನ್ನು ಶ್ರೀಗಳು ಹೋರಾಟದ ಮೊದಲ ದಿನವೇ ಹೇಳಿದ್ದಾರೆ. ವಿಧಾನಸಭೆಯ ಅಧಿವೇಶನದಲ್ಲಿ ಸಮಾಜದ ಎಲ್ಲ ಶಾಸಕ, ಸಚಿವರನ್ನು ಒಟ್ಟಿಗೆ ಸೇರಿಸಿ ಚರ್ಚೆ ಮಾಡುತ್ತೇವೆ ಎಂದು ಸಚಿವರು ತಿಳಿಸಿದರು.

ನಾನು ಕಿತ್ತೂರು ರಾಣಿ ಚೆನ್ನಮ್ಮನವರ ವಂಶಸ್ಥಳು. ಚೆನ್ನಮ್ಮ ಎದೆಗುಂದದೆ ಹೋರಾಟ ಮಾಡಿದ್ದಾಳೆ. ಗೆದ್ದಾಗ ಸೊಕ್ಕು ತೋರುವುದು, ಸೋತಾಗ ಸೊರಗುವುದು ನಮ್ಮ ಗುಣವಲ್ಲ. ರಾಜಕಾರಣ ನಿಂತ ನೀರಲ್ಲ. ಸಮಾಜದ ಎಲ್ಲಾ ಬಾಂಧವರು ನನ್ನ ಪರವಾಗಿ ನಿಂತಿರುವುದಕ್ಕೆ ನಾನು ಋಣಿಯಾಗಿದ್ದೇನೆ. ಸಮಾಜದ ಪರ ನಾನು ನನ್ನ ಬದ್ಧತೆ ಉಳಿಸಿಕೊಳ್ಳುವೆ.
-ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ನನ್ನ ಹೆಸರಲ್ಲಿ ಅಕ್ರಮ ಸೈಟ್ ಇದ್ದರೆ ತಗೊಳ್ಳಿ

ಮೈಸೂರು: ನನ್ನ ಹೆಸರಿನಲ್ಲಿ ಅಕ್ರಮವಾಗಿ ಒಂದು ಸೈಟು ಇದ್ದರೂ ಬರೆದು ಕೊಡ್ತೀನಿ. ನನ್ನ ಮೇಲೆ ಸುಮ್ಮನೆ ಆರೋಪ ಮಾಡುತ್ತಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಕುಟುಂಬದವರ ಹೆಸರಿನಲ್ಲಿ ಏನೂ ಇಲ್ಲ. ಇದ್ದರೆ ತೋರಿಸಲಿ ಎಲ್ಲವನ್ನೂ ಬರೆದು ಕೊಡ್ತೀನಿ. ಮುಡಾ ಬಡವರಿಗೆ ನಿವೇಶನ ಕೊಡುವ ಸಂಸ್ಥೆ. ಅದನ್ನು ಉಳಿಸಿ ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಕಾಂಗ್ರೆಸ್ ನಾಯಕರ ರೀತಿ ಪ್ರಚಾರ ಮಾಡುವ ಗುಣ ನನ್ನದಲ್ಲ. ನಾನು ಕಟ್ಟಾ ರೈತ ಎಂದರು. ಪ್ರಾಧಿಕಾರದವರು 100 ಎಕರೆ ಜಮೀನು ವಶಪಡಿಸಿಕೊಳ್ಳಬೇಕಿತ್ತು. ಆದರೆ 125 ಎಕರೆ ಜಾಗವನ್ನು ವಶಕ್ಕೆ ಪಡೆದು ಅಭಿವೃದ್ಧಿಪಡಿಸಿದ್ದಾರೆ. ಸುಂದರಮ್ಮ ಅವರ ಜಮೀನನ್ನು ಭೂಸ್ವಾಧೀನ ಪಡಿಸದೆ ಭೂಮಿ ಅಭಿವೃದ್ಧಿ ಪಡಿಸಿದ್ದಾರೆ. ಇದರ ವಿರುದ್ಧ ಹೈಕೋರ್ಟ್‌ಗೆ ಸುಂದರಮ್ಮ ಹೋಗಿದ್ದರು. ನಂತರ ಸುಪ್ರೀಂಕೋರ್ಟ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಆದೇಶ ಮಾಡಿದೆ. ಸುಪ್ರೀಂ ಕೋರ್ಟ್‌ನಲ್ಲಿ ಲ್ಯಾಂಡ್ ಟು ಲ್ಯಾಂಡ್ ಕೊಡಬೇಕು ಎಂದು ಆದೇಶ ಮಾಡಿದೆ. ಭೂಸ್ವಾಧೀನ ಪಡಿಸಿ ಕೊಳ್ಳದೆ ಅಭಿವೃದ್ಧಿ ಪಡಿಸಿದ್ರೆ ಅಂತಹವರ ಜಮೀನಿಗೆ 50:50 ಅನುಪಾತದಡಿ ನಿವೇಶನ ಕೊಡಬೇಕು ಎಂದು ಕೋರ್ಟ್ ಸೂಚನೆ ನೀಡಿದೆ ಎಂದರು. ನನ್ನ ವಿರುದ್ಧ ಆರೋಪ ಮಾಡಲಾಗುತ್ತಿದೆ. ಹೀಗೆ ಆರೋಪ ಮುಂದುವರೆದರೆ ಕಾನೂನಾತ್ಮಕ ಕ್ರಮ ಕೈಗೊಳ್ಳುವೆ ಎಂದರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/05/2024–25 ದಿನಾಂಕ: 10–07–2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ	'ಎ' ಖರಾಬು ಗುಂ	'ಬಿ' ಖರಾಬು ಗುಂ
1	ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ ಇವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಚೌದರಿ ಉಪ್ಪುತುರಿ ಮತ್ತು ಇತರರು	10/4	00–01	–	–
2	ಶ್ರೀ ಕೆ.ವಿ. ಶ್ರೀಧರ್ ಮತ್ತು ಶ್ರೀ ಕೆ.ವಿ. ರಾಘವೇಂದ್ರ ಇವರುಗಳ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/2	00–06 1/2	–	–
3	ಶ್ರೀ ಸಿ.ಪಿ. ರಾಧಾಕೃಷ್ಣ ಮತ್ತು ಶ್ರೀ ನಾರಾಯಣಸ್ವಾಮಿ ಟಿ.ಎಂ. ಇವರ ಪರವಾಗಿ ಜಿಪಿಎ ದಾರರಾದ ಶ್ರೀ ಮಮತೇಶ್ ಗೌಢ ಎಸ್.	11/4	00–04	–	–
4	ಶ್ರೀ ಮಾರುತಿ ಕುಮಾರ್ ಮಲ್ಲೆಪಲ್ಲಿ; ಶ್ರೀ ಸ್ವತಾಂಕ್ ವರ್ಮ; ಶ್ರೀ ವೀರವೆಂಕಟ ಕೊಟೇಶ್ವರ ರಾವ್ ಆತ್ಮಕುರಿ ಶ್ರೀಮತಿ ಕೆ. ವೀಣ ಸುಮನ್	11/5	00–04 3/4	–	–
5	ಶ್ರೀ ಮಮತೇಶ ಗೌಡ ಎಸ್ ಮತ್ತು ಶ್ರೀ ವೆಂಕಟೇಶ ಬಿ.ಎನ್. ಇವರುಗಳ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/6	00–04	–	–
6	ಶ್ರೀ ಮಮತೇಶ ಗೌಡ ಪರವಾಗಿ ಇವರ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/7	00–01 1/2	–	–
7	ಶ್ರೀ ಕೆ.ವಿ. ಶ್ರೀಧರ್; ಶ್ರೀ ಕೆ.ವಿ. ರಾಘವೇಂದ್ರ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/9	00–05	–	–
8	ಶ್ರೀ ಮಮತೇಶ ಗೌಡ ಎಸ್ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/10	00–01	–	–
9	ಶ್ರೀ ಬೋಧಾಪು ತೇಜಸ್ವಿ ಮಾಧವ್; ಶ್ರೀ ಗರ್ಗಿ ಸತೀಶ್ ಮುಂಗೇಕರ್ ಮತ್ತು ಶ್ರೀ ಶ್ರೀನಿವಾಸ್ ಅಕುಲ	11/11	00–06	–	–
10	ಶ್ರೀ ಕೆ.ವಿ. ಶ್ರೀಧರ್ ಮತ್ತು ಶ್ರೀ ಕೆ.ವಿ. ರಾಘವೇಂದ್ರ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	11/12	00–01 1/2	–	–
11		11/13	00–00 3/4	–	–
12	ಶ್ರೀ ಎಂ. ಮಂಜುನಾಥ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	12/3	00–27	–	03
13	ಶ್ರೀ ಚಿಕ್ಕನಾರಾಯಣಸ್ವಾಮಿ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	23/3ಎ	00–20	–	01
14	ಶ್ರೀ ಎಂ. ಯಲ್ಲಪ್ಪ ಮತ್ತು ಶ್ರೀಮತಿ ವಿ. ಪ್ರಸನ್ನಕುಮಾರಿ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/1	02–24 1/2	–	02
15	ಶ್ರೀ ವಿ. ಗೋಪಾಲ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/2	00–05	–	–
16	ಶ್ರೀಮತಿ ಪುಷ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/3	00–10	–	–
17		28/4	01–01 1/2	–	01 1/2
18	ಶ್ರೀ ಹೆಚ್.ಎನ್. ಮುನಿರಾಜು ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/5	00–10 1/2	–	–
19	ಶ್ರೀ ಗೊಂಡಿಪಲ್ಲಿ ಪ್ರದೀಪದ್ ಕುಮಾರ್; ಶ್ರೀ ವಿಜಯ ಸಾರದಿ ಅರವೆಟ್ಟಿ ಮತ್ತು ಇತರರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/6	00–05 3/4	–	–
20	ಶ್ರೀ ಕೆ. ಆಂಜನಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/7	00–13 1/4	–	00 1/2
21		28/8	00–02	–	–
22	ಶ್ರೀ ಸ್ವತಾಂಕ್ ವರ್ಮ; ಶ್ರೀ ವೀರವೆಂಕಟ ಕೊಟೇಶ್ವರ ರಾವ್ ಆತ್ಮಕುರಿ ಮತ್ತು ಶ್ರೀಮತಿ ಕೆ. ವೀಣ ಸುಮನ್	28/9	00–07 1/2	–	01
23	ಶ್ರೀ ನಾಗರಾಜ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	28/10	00–06	–	–
24	ಶ್ರೀ ಹೆಚ್.ಎನ್. ಆಂಜನಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	29/4	00–26	–	–
25	ಶ್ರೀ ಜಿ. ಕಿಶೋರ್ ಕುಮಾರ್ ರೆಡ್ಡಿ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	30/6	00–13	–	–
26	ಶ್ರೀಮತಿ ಮಂಜುಳ ಎಸ್. ಮುನಿರಾಜು ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	30/7	00–10	–	–
27	ಶ್ರೀ ಗೊಂಡಿಪಲ್ಲಿ ಪ್ರದೀಪ್ ಕುಮಾರ್; ಶ್ರೀ ವಿಜಯ ಸಾರದಿ ಅರವೆಟ್ಟಿ, ಮತ್ತು ಇತರರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	30/8	00–10	–	–
28		30/9	00–10	–	–
29	ಶ್ರೀ ಹೆಚ್.ಸಿ. ಕೃಷ್ಣಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	30/10	00–10	–	–
30	ಶ್ರೀ ವಿಜಯ ಕುಮಾರ್ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	32/1	00–34	–	01
31	ಶ್ರೀ ಕೃಷ್ಣಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	32/2 ರ ಪೈಕಿ	00–22	00 1/2	00 1/2
32	ಶ್ರೀ ವಿಜಯ ಕುಮಾರ್ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	32/3	00–05	–	00 1/4
33		32/4	00–20	–	00 1/2
34	ಶ್ರೀ ರಮೇಶ್ ನಾರಾಯಣಪ್ಪ ಇವರ ಪರವಾಗಿ ಜಿಪಿಎ ದಾರರಾದ ಶ್ರೀ ಮಮತೇಶ ಗೌಡ ಎಸ್.	32/5	00–30	–	01
35	ಶ್ರೀ ಕೃಷ್ಣಪ್ಪ	32/6	00–10	–	00 1/4
36	ಶ್ರೀ ವಿಜಯ ಕುಮಾರ್ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	32/7	00–05	–	–
37	ಶ್ರೀ ಎಂ. ಹೇಮರಾಜ್ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	31/1 ರ ಪೈಕಿ	00–33	01	–
38	ಶ್ರೀ ಮರಿಯಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	33/2	00–32	–	–
39	ಶ್ರೀ ರಾಮಕೃಷ್ಣಪ್ಪ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	33/3	00–34	–	–
40	ಶ್ರೀಮತಿ ಎ. ಲಾವಣ್ಯ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	33/4	00–34	01	–
41	ಶ್ರೀ ಎಂ. ಲಕ್ಷ್ಮಣ ಇವರ ಪರವಾಗಿ ಜಿಪಿಎ ದಾರರಾದ ಮೆ॥ ಯುಲ ಹೋಮ್ಸ್ ಎಲ್.ಎಲ್.ಪಿ	33/5	01–10	–	–

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/886/ಅಡ್ವರ್ಟೋರ್/2024–25

ಸಂಪಾದಕೀಯ

ಹೆಸರು ಬದಲಾದರೆ ಸ್ಥಿತಿಗತಿ ಬದಲಾಗುವುದೇ?

ರಾಜ್ಯದಲ್ಲಿ ಸಿಎಂ ಬದಲಾವಣೆ, ಹೊಸ ಡಿಸಿಎಂ ಹುದ್ದೆಯ ಸೃಷ್ಟಿ ಕುರಿತ ಕೂಗು ತಣ್ಣಗಾದ ಬೆನ್ನಿಗೇ ಗ್ರೇಟರ್ ಬೆಂಗಳೂರು ಬ್ರ್ಯಾಂಡ್ ನೇಮ್‌ಗೆ ಪೈಪೋಟಿ ಆರಂಭವಾಗಿದೆ. ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಹೆಸರು ಬದಲಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಸಿಎಂ ಮತ್ತು ಡಿಸಿಎಂ ಮನಸ್ಸು ಮಾಡಿದ ಮೇಲೆ ಈ ಪ್ರಸ್ತಾವನೆಗೆ ಅಂಗೀಕಾರ ದೊರೆಯುವುದು ಕಷ್ಟವೇನಲ್ಲ. ಇದೀಗ ಗೃಹಸಚಿವ ಪರಮೇಶ್ವರ್ ಅವರು ಕೂಡ ತಮ್ಮ ತವರು ಜಿಲ್ಲೆ ತುಮಕೂರು ಗ್ರೇಟರ್ ಬೆಂಗಳೂರಿಗೆ ಸೇರಬೇಕೆಂದು ಪ್ರತಿಪಾದಿಸಿದ್ದಾರೆ. ಡಿಕೆಶಿ ಪ್ರಸ್ತಾವನೆಗೆ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಕುಮಾರಸ್ವಾಮಿ, ರಾಜ್ಯದಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ. ಒಂದು ವೇಳೆ ಹೆಸರು ಬದಲಿಸಿದರೆ ರಾಮನಗರ ಜಿಲ್ಲೆ ಎಂದು ಮರು ನಾಮಕರಣ ಮಾಡುವುದಾಗಿ ಗುಡುಗಿದ್ದಾರೆ. ಇಷ್ಟಕ್ಕೂ ಈ ಹೆಸರು ಬದಲಾವಣೆಯ ಉದ್ದೇಶ ಏನೆನ್ನುವುದು ಆಯಾ ನಾಯಕರಿಗಷ್ಟೇ ತಿಳಿದ ವಿಚಾರ. ನಾಯಕರು ಹೇಳುವ ಪ್ರಕಾರ, ಬೆಂಗಳೂರು ಎಂಬ ಬ್ರ್ಯಾಂಡ್ ನೇಮ್‌ಗೆ ಅಂತಾರಾಷ್ಟ್ರೀಯ ಮನ್ನಣೆ ಇದೆ. ಹೆಸರು ಬದಲಾವಣೆಯಿಂದ ಈ ಭಾಗಕ್ಕೆ ಇನ್ನಷ್ಟು ಕೈಗಾರಿಕೆಗಳು ಬರಲಿವೆ. ಸ್ಥಳೀಯರಿಗೆ ಉದ್ಯೋಗ ದೊರಕಲಿವೆ. ಹಾಗಿದ್ದರೆ ರಾಮನಗರ, ತುಮಕೂರು ಜಿಲ್ಲೆಗಳನ್ನೇ ಬ್ರ್ಯಾಂಡ್ ನೇಮ್ ಆಗುವ ಮಟ್ಟಿಗೆ ಬೆಳೆಸಲು ಏಕೆ ಸಾಧ್ಯವಿಲ್ಲ ಎಂದು ಈ ನಾಯಕರು ತಿಳಿಸಬೇಕಾಗಿದೆ. ಮಣಿಪಾಲ ಎಂಬ ಪುಟ್ಟ ಗ್ರಾಮ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಮತ್ತು ಆರೋಗ್ಯದ ಬ್ರ್ಯಾಂಡ್ ನೇಮ್ ಆಗಿ ಬೆಳೆದಿರುವುದರ ಹಿಂದೆ ಟಿಎಂಎ ಪೈ ಎಂಬ ವ್ಯಕ್ತಿಯ ಸಾಹಸಗಾಥೆಯನ್ನು ಈ ನಾಯಕರು ನೆನಪಿಸಿಕೊಳ್ಳಬೇಕಾಗಿದೆ. ಹೆಸರು ಬದಲಾವಣೆ ಮಾಡಿದ ಕಾರಣಕ್ಕೆ ಜಿಲ್ಲೆಯ ಅಭಿವೃದ್ಧಿ ಆಗಲಿದೆ ಎನ್ನುವುದು ರಾಜಕೀಯ ಅನುಕೂಲದ ಹೇಳಿಕೆಯಾಗಬಹುದಷ್ಟೇ. ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ್ ಅಧ್ಯಕ್ಷತೆಯ ಬಿಬಿಎಂಪಿ ಸುಧಾರಣಾ ಸಮಿತಿಯು 400 ವಾರ್ಡ್‌ಗಳ 'ಗ್ರೇಟರ್ ಬೆಂಗಳೂರು ಆಡಳಿತದ ಕರಡು ವಿಧೇಯಕ' ವನ್ನು ಸಲ್ಲಿಸಿದೆ. ಇದರ ಹಿಂದಿನ ರಾಜಕೀಯ ಹಿತಾಸಕ್ತಿ ಏನೇ ಇರಲಿ ಇಲ್ಲಿನ ಜನತೆ ಮತ್ತು ಪರಿಸರಕ್ಕೆ ಈ ನಿರ್ಧಾರ ಬಾಧಕವಾಗಬಾರದು. ರಿಯಲ್ ಎಸ್ಟೇಟ್ ಆಸೆಯಿಂದ ಕೃಷಿ ಭೂಮಿ ಪಾಳು ಭೂಮಿಯಾಗಬಾರದು.

ಸೊಂಪಾದಕೀಯ

ಬಾಸಿಸ್ಟ್ ಬೆಳವಣಿಗೆ

ಚಿತ್ರರಂಗದಲ್ಲಿ ಮೊದಲೆಲ್ಲ ನಟರುಗಳಿಗೆ ಅವರು ಮಾಡುವ ಸಿನಿಮಾಗಳ ಆಧಾರದ ಮೇಲೆ ಅವರ ನಟನೆಯ ಆಧಾರದ ಮೇಲೆ ಅವರಿಗೆ ತಕ್ಕ ಬಿರುದುಗಳನ್ನು ಕೊಡಲಾಗುತ್ತಿತ್ತು. ಡಾ.ರಾಜ್ ಕುಮಾರ್ ಅವರಿಗೆ ಅಸಂಖ್ಯ ಬಿರುದುಗಳು ಇದ್ದರೂ ಉಳಿದ ನಟರಿಗೆ ಅವರವರ ಇಮೇಜ್ ತಕ್ಕಂತೆ ವಿಶೇಷಣಗಳು ಇರ್ತಾ ಇದ್ವು. ಆದರೆ, ಇತ್ತೀಚೆಗೆ ತಮ್ಮ ನೆಚ್ಚಿನ ನಟರಿಗೆ ಅವರವರ ಅಭಿಮಾನಿಗಳು ತಮಗೆ ಬೇಕಾದ ಹೆಸರುಗಳನ್ನು ಕೊಟ್ಟುಕೊಳ್ಳೋದು ಕಾಮನ್ ಆಗಿದೆ. ಹಾಗಾಗಿ ಆ ನಟನ ಅಭಿಮಾನಿಗಳು ಒಂದು ಬಿರುದು ಕೊಟ್ರೆ, ಅಂಥದ್ದೇ ಬಿರುದನ್ನು ನಮ್ಮ ನಟನಿಗೂ ಕೊಡಬೇಕು ಎಂದು ಇನ್ನೊಬ್ಬ ನಟನ ಅಭಿಮಾನಿಗಳು ಹಠಕ್ಕೆ ಬೀಳುತ್ತಾರೆ. ಇದೂ ಹೊಸೇನಲ್ಲ ಬಿಡಿ. ಸಾಹಸ ಸಿಂಹ, ಕೆರಳಿದ ಸಿಂಹದಂಥ ಸಿನಿಮಾ ಟೈಟಲ್‌ಗಳ ವಿಷಯದಲ್ಲೂ ಇದು ಆಗಿರುವಂಥದ್ದೇ. ಈಗೀಗ ಅದೇನೋ ಒಂಥರಾ ಬಾಸ್ ಕಲ್ಚರ್ ಶುರುವಾಗಿದೆ. ತಮ್ಮ ನೆಚ್ಚಿನ ನಟನನ್ನು ಬಾಸ್ ಅಂತ ಕರೆಯೋದು ರೂಡಿ ಆಗಿಬಿಟ್ಟಿದೆ. ಹಾಗಾಗಿ ದರ್ಶನ್ ಅಭಿಮಾನಿಗಳು ಅವರನ್ನು ಡಿ ಬಾಸ್ ಅಂತಾರೆ. ಆದರೆ ಈಗ ದರ್ಶನ್ ಜೈಲಿಗೆ ಹೋದ ಮೇಲೆ ಅವರ ಪೇಟೆಂಟ್ ಬಾಸ್ ಪದಕ್ಕೆ ಕೊಕ್ಕೆ ಬೀಳೋ ಲಕ್ಷಣಗಳಿವೆ. ಅದಕ್ಕೆ ಕಾರಣ ಈಗ ಧ್ರುವ ಸರ್ಜಾ ಡಿ ಬಾಸ್ ಅಂತ ಫೇಮಸ್ ಆಗ್ತಾ ಇರೋದು. ಅಲ್ಲದೆ ಧ್ರುವ ಮತ್ತು ದರ್ಶನ್ ನಡುವೆ ಎಲ್ಲವೂ ಸರಿ ಇಲ್ಲ ಅನ್ನೋದು ಇದಕ್ಕೆ ಇಂಬು ನೀಡುತ್ತಿದೆ. ಕೆಲವು ದಿನಗಳ ಹಿಂದೆ ಸ್ವತಃ ಧ್ರುವ ಅವರೇ ಮಾತನಾಡಿ ನನ್ನ ಮತ್ತು ದರ್ಶನ್ ನಡುವೆ ಸಮಸ್ಯೆ ಇದೆ. ಅದನ್ನು ಬಚ್ಚಿಟ್ಟು ನಗ್ತಾ ನಗ್ತಾ ನಾಟಕ ಮಾಡೋಕೆ ನನಗೆ ಬರಲ್ಲ, ನನ್ನ ಕೆಲವು ಪ್ರಶ್ನೆಗಳಿಗೆ ದರ್ಶನ್ ಉತ್ತರಿಸಬೇಕು. ಆಮೇಲೆ ಮಾತ್ರ ಎಲ್ಲ ಸರಿ ಹೋಗೋದು ಅಂತ ದರ್ಶನ್‌ಗಿಂತ ನೇರವಾಗಿ ಮಾತಾಡಿದ್ದಾರೆ ಧ್ರುವ. ಧ್ರುವ ಅವರ ಹುಟ್ಟುಹಬ್ಬದ ದಿನ ಅಂತೂ ಅವರ ಅಭಿಮಾನಿಗಳು ಅವರನ್ನು ಡಿ ಬಾಸ್ ಎಂದೇ ಹೊತ್ತು ಮೆರೆಸುತ್ತಾರೆ. ಡಿ ಬಾಸ್ ಅಂದ್ರೆ ದರ್ಶನ್ ಅನ್ನೋ ಮಾತನ್ನು ಮರೆಸುತ್ತಾರೆ. ಅಷ್ಟು ಹವಾ ಇರುತ್ತೆ. ಇದೆಲ್ಲವನ್ನೂ ನೋಡಿ, ಹಂಗಾದ್ರೆ ಈಗ ಸ್ಯಾಂಡಲ್‌ವುಡ್‌ನ ಡಿ ಬಾಸ್ ಅಲ್ಲದಿದ್ರೂ, 'ದಿ ಬಾಸ್' ಯಾರು ಅಂತ ಸ್ವಯಂಘೋಷಿತ ಆರ್ ಬಾಸ್ ರಕ್ಷಿತ್ ಬುಲೆಟ್ ತಲೆಕೆಡಿಸಿಕೊಂಡಿದ್ದಾರಂತೆ.

ಸಂಪಾದಕರ ಸದ್ಯಶೋಧನೆ

ಸೆಸಿಲ್ ಆ್ಯಡಮ್ಸ್ -ಕಾರಂತ

ನಾನು ಸೆಸಿಲ್ ಆ್ಯಡಮ್ಸ್ ಬಗ್ಗೆ ಯೋಚಿಸಿದಷ್ಟೂ, ಅವನ ಬಗ್ಗೆ ಅಭಿಮಾನ ಮೂಡುತ್ತದೆ. ಯಾವ ಪ್ರತಿಫಲಾಪೇಕ್ಷೆ ಇಲ್ಲದೇ, ಒಂದಷ್ಟು ಹುಚ್ಚು, ಶ್ರದ್ಧೆ ಮತ್ತು ಜೀವನಾಸಕ್ತಿಯಿಂದ ಈ ಕೆಲಸವನ್ನು ಮಾಡುತ್ತಾ ಬಂದಿದ್ದಾನೆ. ನಿಮ್ಮ ತಲೆಯಲ್ಲಿ ಹೊಕ್ಕ ಗುಂಗಿ ಹುಳುವನ್ನು ಅವನ ತಲೆಯೊಳಗೆ ಬಿಟ್ಟರೆ ಸಾಕು, ಆತ ಅದಕ್ಕೊಂದು ಗತಿ ಕಾಣಿಸುವವರೆಗೆ ಬಿಡುವುದಿಲ್ಲ. ಇದರಿಂದ ಅವನಿಗೆ ಏನು ಸಿಗುವುದೋ ಗೊತ್ತಿಲ್ಲ. ಆದರೆ ಪತ್ರಿಕೆ ತನಗೆ ವಹಿಸಿದ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದಾನೆ. ಸೆಸಿಲ್ ಆ್ಯಡಮ್ಸ್ ಬಗ್ಗೆ ಯೋಚಿಸಿದಷ್ಟೂ ಕನ್ನಡದಲ್ಲಿ ಇಂಥ ಅಂಕಣಗಳನ್ನು ಯಾರಾದರೂ ಬರೆದಿರಬಹುದಾ ಎಂದು ನನ್ನ ಮನಸ್ಸು ತಲೆ ಕೆಡಿಸಿಕೊಂಡಿತ್ತು. ಥೇಟು ಆ್ಯಡಮ್ಸ್ ಥರಾ ಅಲ್ಲದಿದ್ದರೂ, ಅಂಥ ಒಂದಷ್ಟು ಪ್ರಯತ್ನ ಕನ್ನಡಲ್ಲೂ ಆಗಿರಬಹುದು ಎಂದು ಭಾವಿಸಿದ್ದೆ. ಈ ಬಗ್ಗೆ ಸ್ವಲ್ಪ ಹುಡುಕಾಟ ನಡೆಸಿದಾಗ, ನನಗೆ ನಿರಾಸೆಯೇನೂ ಆಗಲಿಲ್ಲ. ಆ ನಿಟ್ಟಿನಲ್ಲಿ ಸ್ವಲ್ಪ ಕೆದಕಿದಾಗ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಶಿವರಾಮ ಕಾರಂತರು 'ತರಂಗ' ಪತ್ರಿಕೆಯಲ್ಲಿ ಬರೆಯುತ್ತಿದ್ದ, 'ಬಾಲವನದಲ್ಲಿ ಕಾರಂತಜ್ಜ' ಅಂಕಗಳು ನೆನಪಾಯಿತು. ಆ ಅಂಕಣಗಳಿಗಾಗಿ ನನ್ನ ಸಂಗ್ರಹದಲ್ಲಿರುವ ಹಳೆ 'ತರಂಗ' ಪತ್ರಿಕೆಗಳನ್ನು ನೋಡಿದೆ. ಸೆಸಿಲ್ ಆ್ಯಡಮ್ಸ್ ಎದುರಿಸಿದಂಥ ಪ್ರಶ್ನೆಗಳನ್ನೇ ಕಾರಂತರು ಎದುರಿಸಿದ್ದರು. ಆದರೆ ಅಡಮ್ಸ್‌ನ ಹಾಗೆ ಕಾರಂತರು ಸುದೀರ್ಘವಾಗಿ ಉತ್ತರ ಬರೆದಿಲ್ಲ. ಅದಕ್ಕಿಂತ ಮುಖ್ಯವಾಗಿ ಕಾರಂತರಿಗೆ ಪುಟಾಣಿ ಮಕ್ಕಳು ಪ್ರಶ್ನೆಗಳನ್ನು ಕೇಳುತ್ತಿದ್ದರು. ಮೂರ್ನಾಲ್ಕು ವರ್ಷದ ಮಕ್ಕಳಿಂದ ಹದಿನೈದು ವರ್ಷದವರು ಮಾತ್ರ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆದರೆ ಆಡಮ್ಸ್‌ಗೆ ಯಾರು ಬೇಕಾದರೂ ಪ್ರಶ್ನೆ ಕೇಳಬಹುದಾಗಿತ್ತು. 'ಬಾಲವನದಲ್ಲಿ ಕಾರಂತಜ್ಜ'ದ ಪ್ರಶ್ನೆಗಳನ್ನು ನೋಡಿದರೆ, ಅವುಗಳಿಗೆ ಉತ್ತರಿಸುವುದು ಅಷ್ಟು ಸುಲಭವಲ್ಲ ಎಂಬುದು ಗೊತ್ತಾಗುತ್ತದೆ. ಮಕ್ಕಳ ಪ್ರಶ್ನೆಗಳು ಸಹಜವಾಗಿರುತ್ತವೆ ಮತ್ತು ಉತ್ತರಿಸಲು ಸುಲಭವಾಗಿ ಇರುವುದಿಲ್ಲ. ಅವರಿಗೆ ತಿಳಿಯುವಂತೆ, ಅರ್ಥವಾಗುವಂತೆ, ಉತ್ತರಿಸುವುದೂ ಕಷ್ಟವೇ. ಈ ನಿಟ್ಟಿನಲ್ಲಿ ನೋಡಿದರೆ ಕಾರಂತರು ಅದ್ಭುತ ಕೆಲಸ ಮಾಡಿದ್ದಾರೆ ಎಂದು ಹೇಳಬಹುದು. ಮಕ್ಕಳ ಪ್ರಶ್ನೆಗಳಿಗೆ ಕಾರಂತರು ಸುದೀರ್ಘ ಉತ್ತರ ನೀಡುತ್ತಿರಲಿಲ್ಲ. ಕೆಲವು ಸಲ ಒಂದು ಸಾಲಿನ ಉತ್ತರ ಕೊಡುತ್ತಿದ್ದರು. ಅಗತ್ಯವಿದ್ದಾಗ ವಿವರಿಸುತ್ತಿದ್ದರು. ಆದರೆ ಅವರ ಉತ್ತರದಲ್ಲಿ ಅವರು ಅನೇಕ ಪುಸ್ತಕಗಳನ್ನು ಓದಿದ, ಸಂಶೋಧನೆ ಮಾಡಿದ, ಆಕರ ಗ್ರಂಥಗಳನ್ನು ಉದ್ಧರಿಸಿದ ಯಾವ ನಿದರ್ಶನವೂ ಸಿಗುವುದಿಲ್ಲ. ಕಾರಂತರು ತಮ್ಮ ಅನುಭವದ ಮೂಸೆಯಲ್ಲಿ ಮತ್ತು ವೈಜ್ಞಾನಿಕವಾಗಿ ಉತ್ತರ ನೀಡುತ್ತಿದ್ದರು. 'ಪ್ರಪಂಚದಲ್ಲಿ ಮೊಟ್ಟ ಮೊದಲು ಹುಟ್ಟಿದ ಕಣಕ್ಕೆ ಜೀವ ಹೇಗೆ ಬಂತು?' ಎಂಬ ಪ್ರಶ್ನೆಗೆ ಕಾರಂತರು ಹೀಗೆ ಉತ್ತರಿಸಿದ್ದರು – 'ಜೀವ ಎಂಬುದು ಒಂಟಿ ಕಣವಲ್ಲ. ಅದು ಹಲವು ಕಣಗಳ ಸಮೂಹ. ಚಾಲನೆ ಮುಂತಾದ ಗುಣಗಳನ್ನು ತೋರಿಸಬಲ್ಲ ಕಣಗಳ ಕೂಟ. ಅಂಥ ಕಣಕೂಟ ಎಂದು ಹುಟ್ಟಿತು, ಹೇಗೆ ಹುಟ್ಟಿತು ಎಂಬ ವಿಚಾರವನ್ನು ಕಂಡವರಿಲ್ಲ. ಊಹೆಯಿಂದ ಹಾಗೆ – ಹೀಗೆ ಎನ್ನುವ ಸಂಗತಿ ಇದು. ನನಗೇ ಹೇಗೆ ಜೀವ ಬಂತು ಎಂದು ನಾನೇ ಹೇಳಲಾರೆ. ನಿನಗೆ ಜೀವ ಇದ್ದರೂ ನೀನೂ ಅದನ್ನು ಹೇಳಲಾರೆ.' ಮತ್ತೊಂದು ಪ್ರಶ್ನೆ – 'ಮನುಷ್ಯ ಪಕ್ಷಿಪ್ರಿಯ. ಆದರೆ ಯಾರೂ ಕಾಗೆಯನ್ನು ಸಾಕುವುದಿಲ್ಲ, ಏಕೆ?' ಈ ಪ್ರಶ್ನೆಗೆ ಕಾರಂತರು ತುಸು ಹಾರಿಕೆಯ ಉತ್ತರ ನೀಡಿದ್ದರು – 'ಸಾಕದೆಯೇ ಅದು ಬಂದು ನಿನ್ನ ಭೇಟಿ ಮಾಡುವಾಗ, ಅದನ್ನೇಕೆ ಸಾಕಬೇಕು ಹೇಳು? ಅದರಿಂದ ನಿನಗೆ ಏನಾದರೂ ಕೆಲಸ ಆಗಬೇಕೆ?' ಇನ್ನೊಂದು ಪ್ರಶ್ನೆ – 'ಆಹಾರ ತಿನ್ನುವಾಗ ಹಸು ಬಾಲ ಅಲ್ಲಾಡಿಸುತ್ತದೆ, ಏಕೆ?' ಇದಕ್ಕೆ ಕಾರಂತರ ಉತ್ತರ – 'ಹಸು ಬಾಲ ಅಲ್ಲಾಡಿಸುವುದು ನೊಣ ಮೈಮೇಲೆ ಕುಳಿತಿರದಂತೆ ಮಾಡಲು. ಅದರ ಊಟಕ್ಕೂ, ಬಾಲಕ್ಕೂ ಸಂಬಂಧ ಇಲ್ಲ.' 'ಇರುವೆಗಳು ಸಾಲಾಗಿಯೇ ಹೋಗುವುದೇಕೆ?' ಎಂಬ ಪ್ರಶ್ನೆಗೆ ಕಾರಂತರು ಉತ್ತರಿಸಿದ್ದರು –'ಅವು ಒಂದನ್ನೊಂದು ಅನುಸರಿಸುವುದು, ಮುಂದಿರುವ ಇರುವೆಯ ವಾಸನೆ ಹಿಡಿದು. ಅವು ತಮ್ಮ ಪಂಗಡದ ದೂರ ಸರಿದ ಪ್ರಾಣಿಗಳನ್ನು ಕಾಣಲಾರವು. ಸಾವಿರಾರು ಇರುವೆಗಳು ಒಂದು ಕಡೆಯಿಂದ, ಇನ್ನೊಂದು ಕಡೆಗೆ ಹೋಗುವಾಗ, ಸಾಲು ಹಿಡಿದೇ ಹೋಗಬೇಕು. ಯುದ್ಧಕ್ಕೆ ಹೋಗುವ ಸೈನಿಕರೂ ಹಾಗೆ ಮಾಡುತ್ತಾರೆ. ' ಈ ಪ್ರಶ್ನೆಯನ್ನು ಓದಿದ ಬಾಲಕನೊಬ್ಬ ಕಾರಂತರಿಗೆ ಮರು ಪ್ರಶ್ನೆ ಹಾಕಿದ್ದ – 'ಕಾರಂತಜ್ಜ, ಇರುವೆಗಳು ಒಂದನ್ನೊಂದನ್ನು ಅನುಸರಿಸುವುದು ಮುಂದಿರುವ ಇರುವೆಯ ವಾಸನೆ ಹಿಡಿದು ಎಂದು ಹೇಳಿದ್ದೀರಲ್ಲ. ಹಾಗಾದರೆ ತಮ್ಮ ಸಾಲಿನ ಅತ್ಯಂತ ಮುಂದೆ ಇರುವ ಇರುವೆ ಯಾರ ವಾಸನೆಯನ್ನು ಹಿಡಿದು ಮುಂದೆ ಸಾಗುತ್ತದೆ?' ಇದಕ್ಕೆ ಕಾರಂತರು, 'ತಾಳು, ಆ ಇರುವೆಯನ್ನು ಕೇಳಿ ಹೇಳುತ್ತೇನೆ' ಎಂದು ಬರೆದಿದ್ದರು.

ಅಮೆರಿಕದ ಕಾಡಿನ ಕಾಲದಾರಿಗಳು

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ಹೊರಗಿನವರಿಗೆ ಅಮೆರಿಕ ಎಂದಾಕ್ಷಣ ಕಲ್ಪನೆಯಲ್ಲಿ ಎತ್ತೆತ್ತರದ ಕಟ್ಟಡಗಳು, ಕಾರುಗಳೇ ತುಂಬಿರುವ ಅತಿ ವೇಗದ ಹೈವೇಗಳು ಇತ್ಯಾದಿಗಳು ಮೂರ್ತ ರೂಪ ಪಡೆಯುತ್ತವೆ. ಸಾಮಾನ್ಯವಾಗಿ ಅಮೆರಿಕಗೆ ಪ್ರವಾಸ ಬಂದವರ ಫೋಟೋಗಳೆಂದರೆ ನ್ಯೂಯಾರ್ಕ್, ಕ್ಯಾಲಿಫೋರ್ನಿಯಾ ಮೊದಲಾದ ನಗರಗಳ ಭವ್ಯ, ಗಗನ ಚುಂಬಿ ಕಟ್ಟಡಗಳು, ಇನ್ನೊಂದಿಷ್ಟು ಪ್ರವಾಸೀ ತಾಣಗಳು, ಸ್ಟ್ಯಾಚ್ಯು ಒಫ್ ಲಿಬರ್ಟಿ ಇತ್ಯಾದಿ. ಇಲ್ಲಿಗೆ ಪ್ರವಾಸಕ್ಕೆಂದು ಬರುವ ಪ್ರತಿಯೊಬ್ಬರ ಪಟ್ಟಿಯಲ್ಲಿ ಇರುವ ಜಾಗಗಳೆಲ್ಲ ಬಹುತೇಕ ಒಂದೇ ಇರುತ್ತವೆ. ಭಾರತದಿಂದ ಪ್ರವಾಸಕ್ಕೆ ಬರುವ ಸಂಬಂಧಿಕರು, ಸ್ನೇಹಿತರು ನಯಾಗರ ಫಾಲ್ಸ್ ಒಂದನ್ನು ನೋಡಲೇಬೇಕು ಎಂದು ಹೇಳುವುದಿದೆ. ಭಾರತಕ್ಕೆ ಬರುವ ವಿದೇಶಿ ಪ್ರವಾಸಿಗರು ಹೇಗೆ ತಾಜ್ ಮಹಲ್‌ಗೆ ಹೋಗಬೇಕೆನ್ನುತ್ತಾರೆಯೋ ಹಾಗೆಯೇ ಇಲ್ಲಿಗೆ ಬಂದವರೆಲ್ಲ ನಯಾಗರಾ ಜಲಪಾತ ನೋಡಬೇಕು. ನೀವು ನಂಬುತ್ತೀರೋ ಇಲ್ಲವೋ, ಹೀಗೆ ಮನೆಗೆ ಬಂದ ನೆಂಟರನ್ನು ಕರೆದುಕೊಂಡೇ ಎಂಟು ಬಾರಿ ನಯಾಗರಾ ಫಾಲ್ಸ್‌ಗೆ ಹೋಗಿಬಂದಿದ್ದೇನೆ. ಅಂತಹ ಬಹುಜನಪ್ರಿಯ ಪ್ರವಾಸಿತಾಣಗಳನ್ನೆಲ್ಲ ಮೂರ್ನಾಲ್ಕು ಬಾರಿ ಬಂದ ಪ್ರವಾಸಿಗರ ಜೊತೆಯಲ್ಲಿಯೇ ಸುತ್ತಿದ್ದು ಇದೆ.

ಪ್ರವಾಸಿಯೊಬ್ಬ ಇನ್ನೊಂದು ದೇಶವನ್ನು ನೋಡುವ ಆಯಾಮವೇ ಬೇರೆ. ಪ್ರತೀ ದೇಶ-ಪ್ರದೇಶದಲ್ಲಿಯೂ ಹೊರಗಿನ ಪ್ರವಾಸಿಗರು ನೋಡುವ ಒಂದಿಷ್ಟು ಸ್ಟ್ಯಾಂಡರ್ಡ್ ಜಾಗಗಳಿರುತ್ತವೆ. ಇದರ ಹೊರತಾದ ದೇಶ, ವ್ಯವಸ್ಥೆ – ಅಲ್ಲಿಯೇ ನೆಲೆಸಿದಲ್ಲಿ, ಕಾಲ ಕಳೆದಂತೆ ನಮ್ಮೆದುರು ತೆರೆದುಕೊಳ್ಳುತ್ತದೆ. ಅಮೆರಿಕ ಎಂದರೆ ಸ್ಕೈಲೈನ್ ಬಿಲ್ಡಿಂಗುಗಳು, ಆಧುನಿಕ ನಗರಗಳು, ಸೂಪರ್ ಫಾಸ್ಟ್ ಹೈವೇಗಳಷ್ಟೇ ಅಲ್ಲ ಎಂಬುದೇ ಬಹುತೇಕ ಹೊರಗಿನವರಿಗೆ ಗೊತ್ತೇ ಆಗುವುದಿಲ್ಲ. ಇಲ್ಲಿ ವರ್ಷಕ್ಕೆ ಹಲವು ಫೂಟ್ ಹಿಮ ಬೀಳುವ ಪ್ರದೇಶಗಳಿವೆ, ಒಂದು ಹುಂಡು ಮಳೆಯಾಗದ ರಣ ಮರುಭೂಮಿಗಳಿವೆ, ದಟ್ಟ ಹರಿದ್ವರ್ಣ ಕಾಡುಗಳಿವೆ, ಕರಾವಳಿ, ಮಲೆನಾಡು, ಬಯಲು ಸೀಮೆಗಳಿವೆ. ಜಗತ್ತಿನಲ್ಲಿ ಎಂತೆಂತ ವಾತಾವರಣ, ಪರಿಸ್ಥಿತಿಗಳಿವೆಯೋ ಅವೆಲ್ಲವೂ ಅಮೆರಿಕದ ನೆಲದಲ್ಲಿ ಸಿಗುತ್ತವೆ. ಅಷ್ಟೇ ಅಲ್ಲ, ಇನ್ನುವರೆಗೂ ಮನುಷ್ಯ ಕಾಲೇ ಇಡದ ಅದೆಷ್ಟೋ ಜಾಗಗಳು ಅಮೆರಿಕದಲ್ಲಿವೆ. ವಿಸ್ತಾರದಲ್ಲಿ ಅಮೆರಿಕ ಭಾರತಕ್ಕಿಂತ ಮೂರು ಪಟ್ಟು ದೊಡ್ಡದು. ಆದರೆ ಜನಸಂಖ್ಯೆ ಭಾರತದ ಕಾಲು ಭಾಗದಷ್ಟು. ಈ ಲೆಕ್ಕದಿಂದಲೇ ಅಮೆರಿಕದಲ್ಲಿ ಮನುಷ್ಯವಾಸವಿರದ ಜಾಗ ಎಷ್ಟಿರಬಹುದೆಂಬುದನ್ನು ಅಂದಾಜಿಸಿಕೊಳ್ಳಬಹುದು.

ಅಮೆರಿಕದಲ್ಲಿ ಜನರು ರೈಲಿನಲ್ಲಿ ಪ್ರಯಾಣಿಸುವುದು ತೀರಾ ಕಡಿಮೆ. ಇಲ್ಲಿ ದೇಶದ ಉದ್ದಗಲಕ್ಕೂ ರೈಲ್ವೆ ಹಳಿಗಳಿದ್ದರೂ ಅವುಗಳಲ್ಲೆಲ್ಲ ಓಡಾಡುವುದು ಹೆಚ್ಚಾಗಿ ಗೂಡ್ಸ್ ಟ್ರೈನ್‌ಗಳು. ಅದೆಷ್ಟೋ ದೊಡ್ಡ ನಗರಗಳ ಮಧ್ಯೆ ಜನರ ಓಡಾಟಕ್ಕೆ ರೈಲುಗಳೇ ಇಲ್ಲ. ಒಂದು ವೇಳೆ ಇದ್ದರೂ ರೈಲು ಪ್ರಯಾಣ ವಿಮಾನಪ್ರಯಾಣಕ್ಕಿಂತ ತುಟ್ಟಿ. ಬಸ್ ವ್ಯವಸ್ಥೆಯೂ ಅಷ್ಟಕ್ಕಷ್ಟೇ. ಇಲ್ಲಿ ಪ್ರಯಾಣವೆಂದರೆ ಒಂದೋ ಕಾರ್ ಡ್ರೈವ್ ಮಾಡಬೇಕು, ಇಲ್ಲವೇ ವಿಮಾನವೇರಿ ಹಾರಿ ತಲುಪಬೇಕು. ಒಂದೆರಡು ಸಾವಿರ ಕಿಲೋಮೀಟರ್ ಕಾರು ಡ್ರೈವ್ ಮಾಡಿಕೊಂಡು ಹೋಗುವುದು ಇಲ್ಲಿ ತೀರಾ ಸಾಮಾನ್ಯ. ಅದಕ್ಕೆ ಬೇಕಾದ ಪ್ರಯಾಣದ ಪೂರ್ಣ ವ್ಯವಸ್ಥೆಯೇ ಇದೆ. ಇಡೀ ದೇಶವನ್ನು ಒಳ್ಳೆಯ ರಸ್ತೆಗಳು ಒಂದಾಗಿ ಜೋಡಿಸುತ್ತವೆ.

ಇದೆಲ್ಲದಕ್ಕೆ ವ್ಯತಿರಿಕ್ತವೆನಿಸುವ ಇನ್ನೊಂದು ಮಾರ್ಗ ವ್ಯವಸ್ಥೆ ಇಲ್ಲಿದೆ. ಅದೆಂದರೆ ಇಲ್ಲಿನ ಕಾಲುದಾರಿಗಳು. ಎಲ್ಲ ಸೇರಿಸಿದರೆ ಸುಮಾರು ಒಂದೂವರೆ ಲಕ್ಷ ಕಿಲೋಮೀಟರ್ ಉದ್ದವಾಗುವಷ್ಟು ಕಾಲುದಾರಿಗಳು ಅಮೆರಿಕದ ಉದ್ದಗಲಕ್ಕೆ ಚಾಚಿಕೊಂಡಿವೆ. ಇವುಗಳಲ್ಲಿ ಬಹುತೇಕ – ಬಹಳ ಹಿಂದೆ ಇಲ್ಲಿನ ಮೂಲ ನಿವಾಸಿಗಳು (ರೆಡ್ ಇಂಡಿಯನ್ಸ್) ವ್ಯಾಪಾರ ವ್ಯವಹಾರ, ಬೇಟೆ ಮೊದಲಾದ ಓಡಾಟದಕ್ಕೆ ಮಾಡಿಕೊಂಡ ಕಾಲುದಾರಿಗಳು. ಒಂದು ಕಾಲದಲ್ಲಿ ಅಂದಿನ ದೊಡ್ಡ, ಮುಖ್ಯ ಊರುಗಳನ್ನು ಜೋಡಿಸುವ ವ್ಯವಸ್ಥೆ ಇದಾಗಿತ್ತು. ಜನರು ನಡೆದು, ಪ್ರಾಣಿಯನ್ನು ಅವಲಂಬಿಸಿ ಒಂದು ಜಾಗದಿಂದ ಇನ್ನೊಂದಕ್ಕೆ ಈ ಮಾರ್ಗವನ್ನು ಅನುಸರಿಸಿ ಪ್ರಯಾಣಿಸುತ್ತಿದ್ದರು. ಕ್ರಮೇಣ ವಾಹನ, ರಸ್ತೆಯ ವ್ಯವಸ್ಥೆ ನಿರ್ಮಾಣಗೊಂಡ ನಂತರ ಜನರ ವ್ಯಾವಹಾರಿಕ, ದೈನಂದಿನ ಓಡಾಟಗಳು ರಸ್ತೆಗಿಳಿದವು. ಆದರೆ ಅಮೆರಿಕನ್ನರು ಈ ಕಾಲು ದಾರಿಯನ್ನು ಮರೆಯಲಿಲ್ಲ, ಕಡೆಗಣಿಸಲಿಲ್ಲ. ಬದಲಿಗೆ ನಡೆಯಲೆಂದೇ ಈ ದಾರಿಗಳನ್ನು ಹಾಗೆಯೇ ಇಟ್ಟುಕೊಂಡರು. ಅಲ್ಲಿ ನಡೆಯಲು ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಂಡರು. ಈಗ ಈ ಕಾಲುದಾರಿಗಳೆಂದರೆ ಅದು ಬಳಕೆಯಾಗುವುದು ನಡೆದು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ತಲುಪಲು ಅಲ್ಲ, ಬದಲಿಗೆ ನಡೆಯಬೇಕೆಂಬವರಿಗೆ ನಡೆಯಲು ಇರುವ ವ್ಯವಸ್ಥೆಯಾದೆ. ಇಲ್ಲಿ ನಡೆಯುವವರದ್ದು ನಡೆಯುವುದೇ ಉದ್ದೇಶ.

ಬಹಳ ಹಿಂದೆ ಆದಿ ಶಂಕರರು ಕಾಲ್ನಡಿಗೆಯಲ್ಲಿಯೇ ಭಾರತವನ್ನೆಲ್ಲ ಸುತ್ತಿದ್ದರು ಎಂದು ಕೇಳಿದ್ದೇವೆ. ಆದರೆ ಇಂದು ಕಾಲ್ನಡಿಗೆಯಲ್ಲಿಯೇ ಭಾರತವನ್ನು ಸಂಕ್ರಮಿಸುವುದು ಸುಲಭವಲ್ಲ. ನಮ್ಮಲ್ಲಿಯೂ ಕಾಲುದಾರಿಗಳಿದ್ದವು. ಆದರೆ ಅವು ಕ್ರಮೇಣ ರಸ್ತೆಗಳಾಗಿ, ಹೈವೇಗಳಾಗಿವೆ. ಈಗ ದಾರಿ ನಡೆಯದೇ ಮುಚ್ಚಿ ಹೋಗಿದೆ. ಆದರೆ ಅಮೆರಿಕದಲ್ಲಿ ಹಾಗಲ್ಲ, ಇಂದಿಗೂ ಅದೆಷ್ಟೋ ಕಾಲುದಾರಿಗಳನ್ನು ಇಲ್ಲಿ ಕಾಪಾಡಿಕೊಳ್ಳಲಾಗಿದೆ.

ಅಮೆರಿಕದ ಕಾಲುದಾರಿಗಳಲ್ಲಿಯೇ ಅತ್ಯಂತ ಉದ್ದವಾದದ್ದೆಂದರೆ ಅಪಾಲಚನ್ ಕಾಲುದಾರಿ (Appalachian Trail Conservancy). ಇದರ ಉದ್ದ ಬರೋಬ್ಬರಿ ಮೂರುವರೆ ಸಾವಿರ ಕಿಲೋಮೀಟರ್. ಯಾವುದೇ ಊರೊಳಗೆ ಹೊಕ್ಕದೆ ನೇರ ನಡೆಯುತ್ತಿದ್ದರೆ ತಿಂಗಳಾನುಗಟ್ಟಲೆ ಹೋಗಿಮುಟ್ಟದಷ್ಟು ದೂರದ ಕಾಲು ದಾರಿ. ಅಮೆರಿಕದ ದಕ್ಷಿಣಕ್ಕಿರುವ ಜಾರ್ಜಿಯಾ ರಾಜ್ಯದಿಂದ ಉತ್ತರದ ಮೇನ್ ರಾಜ್ಯದವರೆಗೆ ಚಾಚಿರುವ ಈ ಕಾಲುದಾರಿ ಹೈಕಿಂಗ್ ಮಾಡುವವರ ಮಟ್ಟಿಗೆ ಮೌಂಟ್ ಎವರೆಸ್ಟ್ ಇದ್ದಂತೆ. ಇಷ್ಟೊಂದು ದೂರ ಒಂದೇ ಹೊಡೆತಕ್ಕೆ ನಡೆಯುವುದೆಂದರೆ ಸಾಧಾರಣದಂತವರಿಗೆ ಸಾಧ್ಯವೇ ಇಲ್ಲ. ಈ ಕಾಡಿನ ಕಾಲುದಾರಿ ಹಲವು ಊರುಗಳ ಹತ್ತಿರದಿಂದ ಹಾದು ಹೋಗುತ್ತದೆ. ಸಾಮಾನ್ಯವಾಗಿ ಇಂತಹ ಒಂದು ಊರಿಗೆ ತಲುಪಿ, ಅಲ್ಲಿಂದ ಈ ಕಾಲು ದಾರಿ ಹಿಡಿದು ಇನ್ನೊಂದು ಊರಿನ ಹತ್ತಿರವಾಗಿ ನಡಿಗೆ ಮುಗಿಸುವವರೇ ಜಾಸ್ತಿ. ಸಾಮಾನ್ಯರಿಗೆ ಒಂದೇ ಸಲಕ್ಕೆ ಈ ಕಾಲುದಾರಿಯನ್ನು ಮುಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಬಹುತೇಕರು ಪ್ರತೀ ವರ್ಷ ತುಂಡು ತುಂಡು ಸಾಗಿ ವರ್ಷಗಳ ತರುವಾಯ ನಡಿಗೆಯನ್ನು ಪೂರೈಸುತ್ತಾರೆ, ದಾಖಲಿಸಿಕೊಳ್ಳುತ್ತಾರೆ.

ಈ ಕಾಲ್ನಡಿಗೆಯನ್ನು ಪೂರ್ಣ ಮೂರುವರೆ ಸಾವಿರ ಕಿಲೋಮೀಟರ್ ಒಂದೇ ಜಪಾಟಿಗೆ ಮುಗಿಸುವ ಪರಮ ಸಾಹಸಿಗಳಿಗೇನು ಕೊರತೆಯಿಲ್ಲ. ಪ್ರತೀ ವರ್ಷ ಸುಮಾರು ಮೂರರಿಂದ ನಾಲ್ಕು ಸಾವಿರ ಮಂದಿ ಈ ಸಾಹಸಕ್ಕೆ ಮುಂದಾಗುತ್ತಾರೆ. ಇದೇನು ಕೂತವನು ಎದ್ದು ನಡೆಯಲು ಹೊರಟಂತಲ್ಲವಲ್ಲ. ಇದಕ್ಕೆ ಬೇಕಾದ ದೈಹಿಕ, ಮಾನಸಿಕ ತಯಾರಿಗಳಾಗಬೇಕು. ಎಲ್ಲಿಯೂ ನಿಲ್ಲದೆ ಪ್ರತೀ ದಿನ ನಡೆದರೆ ಸುಮಾರು ಮೂರರಿಂದ ನಾಲ್ಕು ತಿಂಗಳು ಬೇಕು. ಅಷ್ಟು ಕಾಲಕ್ಕೆ ಬೇಕಾಗುವ ಆಹಾರ, ಹಣ ಇದೆಲ್ಲದರ ವ್ಯವಸ್ಥೆ ಮಾಡಿಕೊಳ್ಳಬೇಕು. ಅಷ್ಟೇ ಅಲ್ಲ, ಹೀಗೆ ನಡೆಯುವಾಗ ಯಾವುದೇ ದುಡಿಮೆ ಇರುವುದಿಲ್ಲ, ಹಾಗಾಗಿ ಆರ್ಥಿಕ ಅವಲಂಬನೆಯಿದ್ದರೆ ಅದನ್ನೂ ಹೊಂದಿಸಿಕೊಳ್ಳಬೇಕು. ಹೀಗೆ ಹೊರಡುವ ಅದೆಷ್ಟೋ ಮಂದಿ ತಾವಿರುವ ಅಪಾರ್ಟ್‌ಮೆಂಟುಗಳನ್ನು, ಬಾಡಿಗೆ ಮನೆಯನ್ನು ಖಾಲಿ ಮಾಡಿ ಹೋಗುವುದಿದೆ. ಏಕೆಂದರೆ ಅಷ್ಟು ಕಾಲ ಅನವಶ್ಯ ಬಾಡಿಗೆ ಕಟ್ಟಬೇಕು. ನಡೆಯಲೆಂದೇ ಕೆಲಸಕ್ಕೆ ರಿಸೈನ್ ಮಾಡುವವರ ಗೇನೂ ಕಮ್ಮಿಯಿಲ್ಲ. ಇಷ್ಟೆಲ್ಲ ತಯಾರಿ, ಆಧುನಿಕ ಸಲಕರಣೆಗಳು ಇತ್ಯಾದಿ ಹೊಂದಿದ್ದರೂ ಈ ಕಾಡಿನ ಹಾದಿ ಸುಲಭವಲ್ಲ. ವಿಷಪೂರಿತ ಹಾವುಗಳು, ಕರಡಿ, ಬೆಟ್ಟದ ಸಿಂಹ, ಇನ್ನಿತರ ವನ್ಯಪ್ರಾಣಿಗಳು, ರಣ ಬಿಸಿಲು, ಹಿಮ, –25'ಸೆ. ನಷ್ಟು ಚಳಿ, ಕಾಡಿನಲ್ಲಿಯೇ ಮಲಗಬೇಕು ಇತ್ಯಾದಿ.

ಈ ಎಲ್ಲ ಟ್ರೈಲ್‌ಗಳಲ್ಲಿ ಅಲ್ಲಲ್ಲಿ ನೀರಿನ ವ್ಯವಸ್ಥೆ, ತಂಗಲು, ರಾತ್ರಿ ಮಲಗಲು ವ್ಯವಸ್ಥೆಯನ್ನು ಸರಕಾರವೇ ಮಾಡಿಟ್ಟಿರುತ್ತದೆ. ಸಾಮಾನ್ಯವಾಗಿ ಇಂತಹ ವ್ಯವಸ್ಥೆಗಳು ಕಾಡಿನ ದಾರಿ ಊರಿಗೆ ಹತ್ತಿರವಾಗುವಲ್ಲಿ ಇರುತ್ತವೆ. ಇಂತಹ ನಿಗದಿತ ಜಾಗಗಳು ಸಾಮಾನ್ಯವಾಗಿ ನೂರು ಇನ್ನೂರು ಕಿಲೋಮೀಟರಿಗೆ ಒಂದೆರಡಿರುತ್ತವೆ. ಅಲ್ಲಿಯೇ ಒಂದೆರಡು ದಿನ ಸುಧಾರಿಸಿಕೊಳ್ಳುವವರಿರುತ್ತಾರೆ. ಇನ್ನು ಕೆಲವರು ಅಲ್ಲಿಯೇ ಹತ್ತಿರದಲ್ಲಿರುವ ಊರಿನ ಅಂಗಡಿಗಳಿಗೆ ಹೋಗಿ ಬೇಕಾದದ್ದನ್ನು ಖರೀದಿಸಿ ಮುಂದುವರಿಯುವವರಿದ್ದಾರೆ. ಈ ಕಾಡು ದಾರಿಗಳೆಂದರೆ ಅಲ್ಲಿ ಮೊಬೈಲ್ ನೆಟ್ವರ್ಕ್ ಎಲ್ಲಿಡೆ ಇರುವುದಿಲ್ಲ. ಕೆಲವೊಮ್ಮೆ ನೂರಿನ್ನೂರು ಕಿಲೋಮೀಟರ್ ಹೋದರು ಮೊಬೈಲ್‌ನಲ್ಲಿ ಒಮ್ಮೆಯೂ ಒಂದು ಕಡ್ಡಿಯಷ್ಟು ಸಿಗ್ನಲ್ ಕೂಡ ಸಿಗುವುದಿಲ್ಲ. ಇಂತಹ ಜಾಗದಲ್ಲಿ ನಿಗದಿತ ಕಾಲುದಾರಿಯಿದ್ದರೂ ದಾರಿ ತಪ್ಪುವ ಸಾಧ್ಯತೆಗಳಿವೆ.

ಈಗ ಕೆಲವು ವರ್ಷದ ಹಿಂದೆ 66 ವರ್ಷದ ಗೆರಿ ಲಾರ್ಗೆಯ್ ಎಂಬ ಅಮೆರಿಕನ್ ಅಪಾಲಚಾನ್ ಕಾಲುದಾರಿಯಲ್ಲಿ ನಡೆಯುತ್ತಿದ್ದವಳು ಕಾಣೆಯಾಗಿದ್ದಾಳೆ ಎಂಬ ದೊಡ್ಡ ಸುದ್ದಿಯಾಯಿತು. ಸಾಮಾನ್ಯವಾಗಿ ಇಲ್ಲಿ ದಾರಿ ತಪ್ಪಿದವರು ಇನ್ನೆಲ್ಲಿಗೋ ಊರಿಗೆ ತಲುಪಿ ಬಚಾವಾಗುವುದಿದೆ. ಆದರೆ ಗೆರಿಯ ಹಣೆಬರಹ ಸರಿಯಿರಲಿಲ್ಲ. ಟ್ರೈಲ್‌ನಲ್ಲಿ ನಡೆಯುವಾಗ ಬಹಿರ್ದೆಸೆಗೆಂದು ದಾರಿ ಬಿಟ್ಟು ಪಕ್ಕದ ಕಾಡಿನೊಳಕ್ಕೆ ಹೊಕ್ಕವಳಿಗೆ ವಾಪಸ್ಸಾಗಲು ದಾರಿ ಸಿಗಲೇ ಇಲ್ಲ. ಅವಳ ಹತ್ತಿರ ಜಿಪಿಎಸ್ ಕೂಡ ಇರಲಿಲ್ಲ. ಮೊಬೈಲ್ ಅಂತೂ ಮೊದಲೇ ಕೆಲಸಮಾಡುವುದಿಲ್ಲ. ಬಹು ದೀರ್ಘ ಕಾಲ ಅವಳಿಗಾಗಿ ಹುಡುಕಾಟ ನಡೆಯಿತು. ಆಕೆ ಹಲವು ವಾರಗಳ ಕಾಲ ದಾರಿ ಹುಡುಕಿದ್ದಳು. ಕೊನೆಯಲ್ಲಿ ಆಹಾರ, ನೀರು ಸಿಗದಾಗಿ ಮಲಗಿದಲ್ಲಿಯೇ ಕೊನೆಯುಸಿರೆಳೆದಳು. ಎರಡು ವರ್ಷದ ನಂತರ ದಾರಿ ತಪ್ಪಿಸಿಕೊಂಡ ಇನ್ನೊಬ್ಬ ವ್ಯಕ್ತಿ ಅಚಾನಕ್ಕಾಗಿ ಕಾಡಿನ ಮಧ್ಯೆ ಸ್ಲೀಪಿಂಗ್ ಬ್ಯಾಗ್ ಒಂದನ್ನು ಕಂಡು ಒಳಕ್ಕೆ ನೋಡಿದಾಗ ಅವಳ ಮೂಳೆಗಳಷ್ಟೇ ಅಲ್ಲಿ ಉಳಿದಿದ್ದವು. ಜೊತೆಯಲ್ಲಿದ್ದ ಡೈರಿ ಅವಳು ಅನುಭವಿಸಿದ ಎಲ್ಲ ಕಷ್ಟಗಳ ದಾಖಲೆಯಾಗಿತ್ತು. ಹೀಗೆ ಆಗೀಗ ದಾರಿ ತಪ್ಪಿ, ವನ್ಯ ಪ್ರಾಣಿಗಳ ದಾಳಿಯಿಂದ, ನೀರು ಆಹಾರವಿಲ್ಲದಂತಹ ಸ್ಥಿತಿಯಿಂದ ಕೊನೆಯಾಗುವವರೂ ಇದ್ದಾರೆ. ಈಗೀಗ ಜಿಪಿಎಸ್ ವ್ಯವಸ್ಥೆ ಸುಧಾರಿಸಿರುವುದರಿಂದ ಅಂತಹ ಘಟನೆಯಾದಾಗ ಎಮರ್ಜೆನ್ಸಿ ಸಿಗ್ನಲ್ ಕಳಿಸಿದರೆ ಸರಕಾರ ಕಾಡಿನ ಮಧ್ಯದಿಂದ ಹೆಲಿಕಾಪ್ಟರ್ ಮೂಲಕ ರಕ್ಷಿಸುವ ವ್ಯವಸ್ಥೆ ಮಾಡಿದೆ.



ಇಂತಹ ಸಾವಿರ ಕಿಲೋಮೀಟರ್ ಮೀರಿದ ಇನ್ನೂ ಹತ್ತು ಕಾಲು ದಾರಿಗಳು ಅಮೆರಿಕದಲ್ಲಿವೆ. ಅದು ಬಿಟ್ಟು ಒಂದೂರಿಂದ ಇನ್ನೊಂದೂರಿಗೆ, ಕೆಲವೇ ನೂರು ಮೈಲಿಯ ಕಾಲು ದಾರಿಗಳು ಸಾವಿರಾರಿವೆ. ಹತ್ತಿಪ್ಪತ್ತು ಮೈಲಿಯ ಕಾಲುದಾರಿಗಳು ಲಕ್ಷ ಸಂಖ್ಯೆಯಲ್ಲಿವೆ. ಅಮೆರಿಕಾದ ಪಶ್ಚಿಮದಲ್ಲಿರುವ ಕೆಲವು ಕಾಡು ದಾರಿಗಳು ಹತ್ತಾರು ಜಲಪಾತಗಳ ಮಾರ್ಗವಾಗಿ ಸಾಗುತ್ತವೆ. ಇಲ್ಲಿನ ಡೆತ್ ವ್ಯಾಲಿ ಎಂಬ ಮರುಭೂಮಿಯಲ್ಲಿಯೂ ಇಂತಹ ಕಾಲುದಾರಿಗಳಿವೆ. ಅಲ್ಲಿನ ತಾಪಮಾನ ಹಗಲಲ್ಲಿ 50'ಸೆ ಗಿಂತ ಮೀರುವುದರಿಂದ ಇಲ್ಲಿ ನಡೆಯುವವರು ಸಂಜೆ ನಾಲ್ಕರಿಂದ ಬೆಳಗಿನ ಹತ್ತು ಗಂಟೆಯವರೆಗೆ ಮಾತ್ರ ನಡೆಯಲು ಅನುಮತಿ. ಇದೆಲ್ಲ ಬಿಟ್ಟು ಪ್ರತೀ ಊರುಗಳೊಳಗೆ, ಊರಿನಾಚೆ ಹೊರಗೆ ಇರುವ ನಡಿಗೆಯ ದಾರಿಗಳು ಅಸಂಖ್ಯ. ನಮ್ಮೂರಿನ ಹತ್ತಿರ 'ಬಫೆಲೊ ಗ್ರೋ' ಎಂಬ ಊರಿದೆ. ಇದರ ಶಬ್ದಾರ್ಥ ಕೋಣನ ಕಾಡು. ನಾವು ತಮಾಷೆಗೆ ಆ ಊರನ್ನು 'ಕೋಣನ ಕುಂಟೆ' ಎಂದು ಕರೆಯುವುದು. ಆ ಊರಿನ ವಿಶೇಷತೆಯೇನೆಂದರೆ ಅಲ್ಲಿನ ಕಾಲು ದಾರಿಗಳು. ಆ ಊರಿನಲ್ಲಿರುವ ಸುಮಾರು ಐವತ್ತು ಪಾರ್ಕುಗಳನ್ನು ಕೂಡಿಸುವ ಒಂದು ಕಾಲುದಾರಿಯಿದೆ. ಒಂದು ಪಾರ್ಕಿನಿಂದ ಇನ್ನೊಂದಕ್ಕೆ, ಅಲ್ಲಿಂದ ಮಗದೊಂದಕ್ಕೆ ಹೀಗೆ ಇಡೀ ಊರಿನ ಎಲ್ಲ ಪಾರ್ಕುಗಳನ್ನು ಕಾಲ್ನಡಿಗೆಯಲ್ಲೇ ಸಂಕ್ರಮಿಸಬಹುದು. ಫ್ಲೋರಿಡಾ, ಕ್ಯಾಲಿಫೋರ್ನಿಯಾ ಮೊದಲಾದ ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಗುಂಟ ನೂರಾರು ಮೈಲಿ ಹೋಗುವ ಕಾಲುದಾರಿಗಳಿವೆ. ಹೀಗೆ ದೇಶವಿಡೀ ನಡೆಯಬೇಕೆಂದರೆ ಅಮೆರಿಕದಲ್ಲಿ ಕಾಲುದಾರಿಗೆ ಕೊರತೆಯಿರುವುದಿಲ್ಲ. ಹಾಗಾಗಿಯೇ ಅಮೆರಿಕ ನಡೆಯುವವರ ಸ್ವರ್ಗ. ನೀವು ಯಾವುದೇ ಊರಲ್ಲಿರಿ, ಯಾವುದೇ ಪೇಟೆಯಲ್ಲಿರಿ. ನಡೆಯಬೇಕೆಂದರೆ ಅಡೆತಡೆಯಿಲ್ಲದ ನೂರು ಮೈಲಿಯ ಕಾಲು ದಾರಿ ಅಲ್ಲಿ ಇದ್ದೇ ಇರುತ್ತದೆ. ಅಮೆರಿಕನ್ನರೆಂದರೆ ದೈತ್ಯ ದೇಹದವರು, ಆಶಿಸ್ತಿನವರು ಎಂಬೆಲ್ಲ ನಂಬಿಕೆ ಹಲವರಲ್ಲಿದೆ. ಅದಕ್ಕೆ ವ್ಯತಿರಿಕ್ತವೆನಿಸುವ, ಪ್ರತೀ ದಿನ ಹತ್ತಿಪ್ಪತ್ತು ಮೈಲಿ ನಡೆಯುವ ಜನಸಂಖ್ಯೆಯೂ ಇಲ್ಲಿ ಅದಕ್ಕಿಂತ ಜಾಸ್ತಿಯಿದೆ.

ಮನುಷ್ಯ ಇತಿಹಾಸದ ಶೇ.99ಕ್ಕಿಂತ ಜಾಸ್ತಿ ಕಾಲ ನಾವೆಲ್ಲರೂ ನಡೆದುಕೊಂಡೇ ಸಾಗಿದ್ದಲ್ಲವೇ? ದೇಶಾಂತರ, ಖಂಡಾಂತರ ಎಲ್ಲವೂ ಕಾಲ್ನಡಿಗೆಯಲ್ಲಿಯೇ. ಚಿಕ್ಕ ಗುಂಪುಗಳಲ್ಲಿ, ಪ್ರಾಣಿಗಳ ವಲಸೆಯನ್ನು ಅನುಸರಿಸಿ, ಕಾಲ, ಋತುವಿಗನುಗುಣವಾಗಿ ನಿರಂತರ ನಡೆದೇ ನಡೆದಿದ್ದೇವೆ. ಇತ್ತೀಚಿಗಷ್ಟೇ ನಾವು ಕೂತು ಪ್ರಯಾಣಿಸಲು ಕಲಿತದ್ದು. ಈ ಕಾಲ್ನಡಿಗೆಯ ವಲಸೆಯೇ ಮನುಷ್ಯನಿಗೆ ಪ್ರಕೃತಿಯ ಎಲ್ಲ ಬದಲಾವಣೆಗಳಿಗೆ ಹೊಂದಿಕೊಳ್ಳುವುದನ್ನು ಕಲಿಸಿದ್ದು. ಬದುಕುವ ಕಲೆ, ಆತ್ಮ ರಕ್ಷಣೆಯ ಚಾತುರ್ಯ ಇವೆಲ್ಲವೂ ಹೀಗೆ ನಡೆಯುತ್ತಲೇ ಮನುಷ್ಯ ಕಲಿತದ್ದು. ಕಾಲುದಾರಿಗಳೆಂದರೆ ಅದೊಂದು ವಿಮಶವಾಹಿನಿ, ಪಾರಂಪರಿಕ ಬಳುವಳಿ. ಅಪ್ಪ ನಡೆದ, ಪರಿಚಯಿಸಿದ ಹಾದಿಯಲ್ಲೇ ಮಗನೂ, ಮೊಮ್ಮಗನೂ, ಮರಿಮಗನೂ ನಡೆದದ್ದು. ಆದಿಮಾನವನ ಸಮಯದಲ್ಲಿ ಒಂದೇ ಸ್ಥಳದಲ್ಲಿ ನೆಲೆಸುವ ಪದ್ಧತಿ ಇರಲಿಲ್ಲ, ಜೀವಂತ ಇರಬೇಕೆಂದರೆ ನಡೆದು ವಲಸೆ ಹೋಗಬೇಕಿತ್ತು. ಕೆಲವು ಋತುಮಾನಕ್ಕೆ ತಕ್ಕ ವಾರ್ಷಿಕ ವಲಸೆ, ಇನ್ನು ಕೆಲವು ಶಾಶ್ವತ ವಲಸೆ. ಮರುಭೂಮಿ, ಫಲವತ್ತು ಪ್ರದೇಶ ಬದಲಾದಂತೆ, ಚಲಿಸಿದಂತೆ ಮನುಷ್ಯನೂ ನಡೆದು ಬದುಕನ್ನು ಹಿಂಬಾಲಿಸಿದ್ದಕ್ಕೇ ಪ್ರಪಂಚದಾದ್ಯಂತ ಮನುಷ್ಯ ಸ್ಥಾಪನೆಯಾಗಿರುವುದು, ಸಂಸ್ಕೃತಿಯ ಪ್ರತ್ಯೇಕತೆ ಬೆಳೆದಿರುವುದು. ನೂರೆಂಟು ವೈವಿಧ್ಯದ ಮನುಷ್ಯ ಜನಾಂಗಗಳು ವಿಕಾಸನವಾಗಿದ್ದೇ ಈ ನಡಿಗೆಯ ವಲಸೆಯಿಂದ. ನಡೆಯುತ್ತಲೇ ಇದ್ದ ಮನುಷ್ಯನ ಕಾರಣ ಮಾತ್ರ ಇತ್ತೀಚೆ ಕಾಲ ಕಳೆಯುತ್ತ ಬದಲಾಗಿದೆ. ಮೊದಲು ಆಹಾರಕ್ಕೆ, ವಾತಾವರಣಕ್ಕೆ ತಕ್ಕಂತೆ ಇದ್ದ ವಲಸೆ ಕ್ರಮೇಣ ವ್ಯಾಪಾರಕ್ಕೆ, ವ್ಯವಹಾರ, ತೀರ್ಥಯಾತ್ರೆ ಇವೇ ಮೊದಲಾದ ಕಾರಣಗಳಿಗೆ ಬದಲಾದವು. ಈಗ ವಿಮಾನವಿದೆ, ಕಾರು-ರೈಲುಗಳಿವೆ. ಆದರೆ ಇದೆಲ್ಲದರ ನಡುವೆ ನಡೆಯಲಿಕ್ಕೆಂದೇ ಕಾಲುದಾರಿಗಳನ್ನು ಇಂದಿಗೂ ಕಾಪಿಟ್ಟುಕೊಂಡ ಅಮೆರಿಕನ್ ವ್ಯವಸ್ಥೆ ಅನನ್ಯ. ಹಿಂದೆ ಬದುಕಿನ ಅನಿವಾರ್ಯವಾಗಿದ್ದ ನಡಿಗೆ ಇಂದು ಹವ್ಯಾಸ, ಸಾಹಸ, ಸಾಧನೆ ಇತ್ಯಾದಿಯಾಗಿ ಬದಲಾಗಿದೆ. ಆದರೆ ನಡಿಗೆಯೆನ್ನುವುದು ದೈಹಿಕ ಮತ್ತು ಮಾನಸಿಕ ಅವಶ್ಯಕತೆಯಾಗಿ ಇನ್ನೂ ನಮ್ಮ ಜೊತೆಯಲ್ಲಿಯೇ ಉಳಿದುಕೊಂಡಿದೆ.

ವಾನರ ಲಕ್ಷ ಲಕ್ಷ ವರ್ಷ ನಡೆದು ನರನಾದ. ಕೂತಲ್ಲೇ ಕೆಲಸ ಮಾಡುವುದು, ದುಡಿಯುವುದು ಕಲಿತ. ಕೂತೇ ಚಲಿಸುವುದೂ ಸಾಧನೆಯೆಂದೇ ಆಯಿತು. ಈಗ ವೈದ್ಯರು ಕುಳಿತುಕೊಳ್ಳುವುದು ವಿಷ, Sitting is the new smoking, ಆರೋಗ್ಯಕ್ಕೆ ನಡೆಯಬೇಕೆಂದು ಹೇಳುತ್ತಾರೆ. ನಡೆದಷ್ಟೂ ಒಳ್ಳೆಯದು ಎಂಬುದೇ ಆರೋಗ್ಯದ ಬಹಿರಂಗ ಗುಟ್ಟಾಗಿದೆ. ಹೀಗಿರುವಾಗ ಇಂತಹ ಐತಿಹಾಸಿಕ ಕಾಲು ದಾರಿಗಳನ್ನು ಇಂದಿಗೂ ಸವೆಸುತ್ತ, ಕಾಪಾಡಿಕೊಂಡು ಜೀವಂತವಿಟ್ಟಿರುವ ಅಮೆರಿಕನ್ ವ್ಯವಸ್ಥೆ, ಸರಕಾರ, ಜನರ ಕಾಳಜಿ ಮತ್ತು ನಡಿಗೆಯ ಪ್ರೀತಿ ಅನನ್ಯ. ಅಮೆರಿನ್ ಸರಕಾರ ಪ್ರತೀ ವರ್ಷ ಈ ಕಾದ ಕಾಲುದಾರಿಗಳ ನಿರ್ವಹಣೆಗೆ ಯಥೇಚ್ಛ ಹಣ ಖರ್ಚು ಮಾಡುತ್ತದೆ. ಜನರಿಗೆ ನಡೆಯಲು ಬೇಕಾದ ವ್ಯವಸ್ಥೆಯನ್ನು ಶ್ರದ್ಧೆಯಿಂದ ಸಂಭಾಳಿಸುತ್ತದೆ. ಅದಕ್ಕೆ ಅನುಗುಣವಾಗಿ ಜನರೂ ಅಷ್ಟೇ ಪ್ರೀತಿಯಿಂದ ಈ ಟ್ರೈಲ್ – ಕಾಲು ದಾರಿಯನ್ನು ನೋಡಿಕೊಳ್ಳುತ್ತಾರೆ. ಈ ಕಾಲುದಾರಿಯಲ್ಲಿ ನಡೆಯುವಾಗ ಅನುಸರಿಸಬೇಕಾದ ನಿಯಮ ಒಂದೇ – 'Be a fish, don't leave any trace'. ನಡೆಯುವವರು ಯಾವುದೇ ಕುರುಹನ್ನು ಬಿಡಬಾರದು ಎಂದುದೊಂದೇ ಇಲ್ಲಿನ ಕಾಯ್ದೆ.

ಹೆಚ್ಚಿನ ಗುರಿ ಸಾಧನೆಗೆ ಗೌತಮ್ ಬುದ್ಧನಾಗಲಿ!

ಅಭಿಮತ
ರವೀ ಸಜಂಗದ್ದೆ
vveditoped@gmail.com

ಟಿ20 ವಿಶ್ವಕಪ್ ಗೆಲುವಿನ ತೃಪ್ತಿಯೊಂದಿಗೆ ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತಿದಾರ ರಾಹುಲ್ ದ್ರಾವಿಡ್ ನೇಪಥ್ಯಕ್ಕೆ ಸರಿದಿದ್ದಾರೆ. ಭಾರತದ ಮಾಜಿ ಆರಂಭಿಕರಾದ ಗೌತಮ್ ಗಂಭೀರ್ ಮತ್ತು ಡಬ್ಲ್ಯು.ವಿ. ರಾಮನ್ ಅವರನ್ನು ರಾಷ್ಟ್ರೀಯ ತಂಡದ ಮುಖ್ಯ ತರಬೇತಿದಾರ ಸ್ಥಾನಕ್ಕಾಗಿ ಬಿಸಿಸಿಐನ ಕ್ರಿಕೆಟ್ ಸಲಹಾ ಸಮಿತಿಯು ಸಂದರ್ಶನ ನಡೆಸಿತ್ತು. ಈ ಹುದ್ದೆಯ ಸ್ಪರ್ಧೆಯಲ್ಲಿ ಗೌತಮ್ ಹೆಸರು ಗಂಭೀರವಾಗಿ ಮುಂಚೂಣಿಯಲ್ಲಿತ್ತು. ನಿರೀಕ್ಷೆಯಂತೆ, ತಿಂಗಳಿನಿಂದ ಹರಿದಾಡುತ್ತಿದ್ದ ಗಾಳಿ ಸುದ್ದಿ ನಿಜವಾಗಿದೆ. ಗೌತಮ್ ಗಂಭೀರ್ ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತಿದಾರರಾಗಿ ಆಯ್ಕೆಯಾಗಿದ್ದಾರೆ. ಅಭಿನಂದನೆಗಳು.

2003ರಿಂದ 2016ರವರೆಗೆ ತಂಡದ ಭಾಗವಾಗಿದ್ದ ಗೌತಮ್ ಗಂಭೀರ್ ಮೂರೂ ಮಾದರಿಯಲ್ಲಿ ಆರಂಭಿಕರಾಗಿ ಗಮನಾರ್ಹ ಪ್ರದರ್ಶನದ track record ಹೊಂದಿರುವ ಎಡಗೈ ದಾಂಡಿಗ. 2007ರ ಟಿ20 ವಿಶ್ವಕಪ್ ಫೈನಲ್ ಮತ್ತು 2011ರ ಏಕದಿನ ವಿಶ್ವಕಪ್ ಫೈನಲ್ – ಎರಡೂ ಪಂದ್ಯಗಳಲ್ಲಿ ಭಾರತದ ಪರ ಗರಿಷ್ಠ ರನ್ ಗಳಿಸಿದ ಅಪರೂಪದ ದಾಖಲೆ ಹೊಂದಿದ್ದಾರೆ. ಹಾಗಿದ್ದೂ, ಎರಡೂ ಫೈನಲ್ ಪಂದ್ಯಗಳಲ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿ ಗಂಭೀರ್‌ಗೆ ಒಲಿಯದಿದ್ದುದು ಮತ್ತೊಂದು ವಿಶಿಷ್ಟ ದಾಖಲೆ!

2007 ರ ಟಿ20 ಫೈನಲ್ ಪಂದ್ಯದಲ್ಲಿ ಕೇವಲ 54 ಎಸೆತಗಳಲ್ಲಿ 75 ರನ್ ಕಲೆಹಾಕಿ ತಂಡ ಪೈಪೋಟಿಯುತ ಮೊತ್ತ (157) ಪೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಂತರ ಇರ್ಫಾನ್ ಪಠಾಣ್ ಅವರ 4-0-16-3 bowling figure ಪಂದ್ಯಶ್ರೇಷ್ಠ ಪ್ರಶಸ್ತಿ ಬಾಚಿಕೊಂಡು ಗಂಭೀರ್ ಆ ಪ್ರಶಸ್ತಿಯಿಂದ ವಂಚಿತರಾದರು. ಅದು ಟಿ20 ಫೈನಲ್ಸ್ ಪಂದ್ಯದ ಸಾರ್ವಕಾಲಿಕ ಶ್ರೇಷ್ಠ ಇನ್ನಿಂಗ್ಸ್ ಗಳಲ್ಲೊಂದು.

2011ರ ಏಕದಿನ ವಿಶ್ವಕಪ್ ಫೈನಲ್ಸ್‌ನಲ್ಲಿ ಧೋನಿ 91 ರನ್ ಹೊಡೆದು finisher ಆಗಿ ಮಿಂಚಿ ಇತಿಹಾಸ ಮತ್ತು ಕ್ರಿಕೆಟ್ ಪ್ರೇಮಿಗಳ ಹೃದಯದಲ್ಲಿ ದಾಖಲಾದರು. ಆ ಪಂದ್ಯದಲ್ಲಿ ಕೆಚ್ಚೆದೆಯಿಂದ ಶ್ರೀಲಂಕಾ ಬೌಲರುಗಳನ್ನು ಬೆಂಡೆತ್ತಿ ಅಮೂಲ್ಯ 97 ರನ್ ಗಳಿಸಿ ಭಾರತದ ವಿಜಯಕ್ಕೆ ಬುನಾದಿ ಹಾಕಿಕೊಟ್ಟ ಗಂಭೀರ್ ಇನ್ನಿಂಗ್ಸ್ ಅಲ್ಲೂ ಅದೇ ತೀವ್ರತೆ, ಗಾಂಭೀರ್ಯದಿಂದ ದಾಖಲಾಗಲಿಲ್ಲ! It's truly a superlative innings under pressure. ಕೊಂಚ ತರಾತುರಿಗೆ ಬಿದ್ದು ಔಟಾಗಿರದಿದ್ದರೆ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಶತಕ ಸಿಡಿಸಿ ತಂಡದ ಗೆಲುವಿಗೆ ಪಾತ್ರರಾದ ಕೆಲವೇ ಕೆಲವು ಶ್ರೇಷ್ಠ ಆಟಗಾರರ elite clubನಲ್ಲಿ ಅವರ ಹೆಸರು ಇರುತ್ತಿತ್ತು. ಆ ಕ್ಷಣ, ದಿನ ಮತ್ತು ಅಷ್ಟರ ಮಟ್ಟಿನ ತಾಳ್ಮೆ, ಅದೃಷ್ಟ ಯಾವುದೂ ಗಂಭೀರ್ ಜತೆಗಿರಲಿಲ್ಲ.

ಕ್ರಿಕೆಟ್ ಆಟದಿಂದ ನಿವೃತ್ತಿಯ ನಂತರ ದಶಕಗಳ ಕಾಲ ಪೂರ್ವ ದೆಹಲಿಯ ಸಂಸದರಾಗಿ ಗಂಭೀರ್ ಸೇವೆ ಸಲ್ಲಿಸಿ

ಸ್ಟೈ ಎನಿಸಿಕೊಂಡಿದ್ದಾರೆ. ಜತೆಜತೆಗೆ ಐಪಿಎಲ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ನಾಯಕರಾಗಿ ಎರಡು ಬಾರಿ ಕಪ್ ಗೆಲ್ಲಿಸಿದ್ದಾರೆ. 2024ರಲ್ಲಿ ಕೆಕೆಆರ್ ತಂಡದ ಮೆಂಟರ್ ಆಗಿ ತಂಡ ಚಾಂಪಿಯನ್ ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದವರು.

ಪ್ರಸ್ತುತ ಭಾರತ ಕ್ರಿಕೆಟ್ ತಂಡ ಟಿ20 ಚಾಂಪಿಯನ್ ಆಗಿ ಹೊರಹೊಮ್ಮಿ ಉತ್ತುಂಗದಲ್ಲಿದೆ. ತಂಡದ ಹಿರಿಯ ಮತ್ತು ಆಧಾರ ಸ್ತಂಭಗಳಾಗಿದ್ದ ರೋಹಿತ್, ವಿರಾಟ್, ಜಡೇಜಾ ನಿವೃತ್ತಿ ಘೋಷಿಸಿದ್ದಾರೆ. ಹೊಸ ಯುವ ಆಟಗಾರರನ್ನು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಸಜ್ಜುಗೊಳಿಸಿ ನಿರಂತರ ಗೆಲುವಿಗಾಗಿ ಹಪಹಪಿಸುವ, ಕೆಚ್ಚೆದೆಯ ಹೋರಾಟದ ಸಮೃದ್ಧ ತಂಡವನ್ನು ಟೆಸ್ಟ್, ಏಕದಿನ ಮತ್ತು ಟಿ20 – ಈ ಮೂರೂ ಮಾದರಿಯಲ್ಲಿ ಕಟ್ಟಬೇಕಿದೆ. ಗಂಭೀರ್ ಈ ಕಾರ್ಯಯೋಜನೆಗಳನ್ನು ಎಷ್ಟರ ಮಟ್ಟಿಗೆ ಸಮರ್ಥವಾಗಿ ನಿರ್ವಹಿಸಿ ಯಶ ಕಾಣಲಿದ್ದಾರೆ ಎನ್ನುವುದು ಸದ್ಯಕ್ಕಿರುವ ಕುತೂಹಲ.

ರಣಜಿ ಮುಂತಾದ ಪಂದ್ಯಗಳಲ್ಲಿ ಆಡಿ ಸ್ಥಿರತೆಯತ್ತ ಗಮನ ಹರಿಸುವ ಬದಲು ಕೇವಲ ಐಪಿಎಲ್ ಆಡಿ ರಾಷ್ಟ್ರೀಯ ತಂಡದ ಬಾಗಿಲು ತಟ್ಟುತ್ತಿರುವ ಯುವ ಆಟಗಾರರ ಸಂಖ್ಯೆ ದೊಡ್ಡದಿದೆ. ಭಾರತದ ಕ್ರಿಕೆಟ್ ನ ಅಭಿವೃದ್ಧಿ ಮತ್ತು ಭವಿಷ್ಯದ ದೃಷ್ಟಿಯಿಂದ ಇದು ಖಂಡಿತಾ ಪೂರಕ ಬೆಳವಣಿಗೆಯಲ್ಲ. ಗೌತಮ್ ಮತ್ತು ಆಯ್ಕೆ ಸಮಿತಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕಿದೆ.

ಗೌತಮ್ ಗಂಭೀರ್ ಮುಖ್ಯ ತರಬೇತಿದಾರ ಹುದ್ದೆಯ ಅಧಿಕಾರಾವಧಿ ದಶಂಬರ 31, 2027ರವರೆಗೆ ಇದೆ. 2025ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿ ಪಾಕಿಸ್ತಾನದಲ್ಲಿ ನಿಗದಿಯಾಗಿದೆ. ಅದೇ ವರ್ಷ ವಿಶ್ವ ಐಸಿಸಿ ಟೆಸ್ಟ್ ಚಾಂಪಿಯನ್ಶಿಪ್ ಫೈನಲ್ಸ್ ಲಾರ್ಡ್ಸ್ ಮೈದಾನದಲ್ಲಿ ನಡೆಯಲಿದೆ. 2026ರಲ್ಲಿ ಟಿ20 ವಿಶ್ವಕಪ್ ಪಂದ್ಯಾವಳಿ ಭಾರತ-ಶ್ರೀಲಂಕಾದ ಜಂಟಿ ಆಯೋಜನೆಯಲ್ಲಿ ನಡೆಯಲಿದೆ. 2027ರಲ್ಲಿ ಏಕದಿನ ವಿಶ್ವಕಪ್ ಪಂದ್ಯಾವಳಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ದೇಶಗಳಲ್ಲಿ ನಡೆಯಲಿದೆ. ಇದಲ್ಲದೆ ಏಷ್ಯಾ ಕಪ್ ಪಂದ್ಯಾವಳಿ ಇದೆ. ಜೊತೆಗೆ ಅಂದಾಜು 25 ಟೆಸ್ಟ್, 40 ಏಕದಿನ ಮತ್ತು 50 ಟಿ20 ಪಂದ್ಯಗಳ ದ್ವಿಪಕ್ಷೀಯ ಪಂದ್ಯಾವಳಿಗಳನ್ನು ವಿವಿಧ ದೇಶಗಳೆದುರು ಗಂಭೀರ್ ಮುಖ್ಯ ತರಬೇತಿದಾರಾಗಿ ಭಾರತ ಆಡಲಿದೆ. ನಿರೀಕ್ಷೆಗಳು ಬೆಟ್ಟದಷ್ಟಿವೆ.

ಸವಾಲುಗಳು ಗಂಭೀರ್‌ಗೆ ಹೊಸದೇನಲ್ಲ. ತಂಡದ ಸರ್ವಾಂಗೀಣ ಶಕ್ತಿಯನ್ನು ನಿರಂತರ ಹೆಚ್ಚಿಸಿ, ಪ್ರತಿಯೊಂದು ಪಂದ್ಯದಲ್ಲೂ ಉತ್ತಮ ತಂಡಶ್ರಮದೊಂದಿಗೆ ಶ್ರೇಷ್ಠ ಪ್ರದರ್ಶನ ಹೊರತೆಗೆಯುವ ಗುರುತರ ಜವಾಬ್ದಾರಿ ಗುರು ಸ್ಥಾನಕ್ಕಿದೆ. ಇವರ ಕಾರ್ಯಕಾಲದಲ್ಲಿ ಭಾರತದ ಕ್ರಿಕೆಟ್ ಇನ್ನಷ್ಟು ಶಿಖರಕ್ಕೇರಲಿ. ಮತ್ತಷ್ಟು ಪಂದ್ಯಾವಳಿಗಳು ಮತ್ತು ಚಾಂಪಿಯನ್ ಪಟ್ಟಗಳು ಪಟ್ಟು ಬಿಡದೆ ಭಾರತದ ಮುಡಿಗೇರಲಿ. ತರಬೇತಿದಾರ ಗೌತಮ್ ನೇತೃತ್ವದಲ್ಲಿ ಮತ್ತಷ್ಟು ಯಶಸ್ಸು ಭಾರತ ಕ್ರಿಕೆಟ್ ಚರಿತ್ರೆಯಲ್ಲಿ ದಾಖಲಾಗಲಿ. ಭಾರತ ತಂಡದ ಯಶಸ್ಸಿಗೆ ಗಂಭೀರ ಕೆಲಸ ಮಾಡಲು ಗೌತಮ್ ಬದ್ಧನಾಗಲಿ. 'ನಿನ್ನ ಕೀರ್ತಿಯು ಜಗದಿ ಮೆರೆಯಲಿ ಒಂದೆ ಆಸೆಯು ಮನದಲಿ' – ಆಶಯ ಇಷ್ಟೇ!

(ಲೇಖಕರು: ಸಾಫ್ಟ್‌ವೇರ್ ಉದ್ಯೋಗಿ, ಹವ್ಯಾಸಿ ಬರಹಗಾರರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಲಪಾತ ವೀಕ್ಷಣೆ ನಿಷೇಧಿಸಿ

ನಾಡಿನ ಸೊಬಗನ್ನು ಪ್ರತಿಬಿಂಬಿಸುವ ಜಲಪಾತ, ಕೆರೆ, ಹಳ್ಳ, ನದಿ, ಕೆರೆ-ಕಟ್ಟೆಗಳು ಮನುಷ್ಯನ ಜೀವನಾಡಿಯಾಗಿದ್ದರೂ ಸಹ ಕೆಲವೊಂದು ಬಾರಿ ಜೀವಕ್ಕೆ ಕಂಟಕವಾಗಿ ಪರಿಣಮಿಸುತ್ತವೆ. ಮಳೆಗಾಲದಲ್ಲಿ ಅವುಗಳ ಸಂಭ್ರಮ ಮನಕ್ಕೆ ಮುದ ನೀಡುವಂತವುವಾಗಿದ್ದರೆ ಜನರು ತಮ್ಮ ಉಲ್ಲಾಸಕ್ಕಾಗಿ ವಿಕ್ಷಣೆಗೆ ತೆರಳಿದಾಗ ಅಪಾಯವನ್ನು ಲೆಕ್ಕಿಸದೇ ಹುಚ್ಚಾಟದ ವರ್ತನೆ ಮಾಡಿ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮಹಾರಾಷ್ಟ್ರದ ಲೋನಾವಾಲಾ ಹತ್ತಿರದ ಜಲಪಾತ ವೀಕ್ಷಣೆಗೆ ತೆರಳಿದ ಹಲವಾರು ಜನರು ಅಸುನೀಗಿದ ಘಟಣೆಯೇ ಜ್ವಲಂತ ಸಾಕ್ಷಿಯಾಗಿದೆ.

ಈಗಾಗಲೇ ರಾಜ್ಯ ಸರಕಾರದ ಆಯಾ ಜಿಲ್ಲಾ ಆಡಳಿತಗಳು ಪ್ರೇಕ್ಷಣೀಯ ಸ್ಥಳಗಳ ವಿಕ್ಷಣೆಗೆ ಜನರ ರಕ್ಷಣೆಗಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ಆದೇಶಿಸಿದ್ದರೂ ಸಹ ಕೆಲವೊಂದು ಭಾಗದಲ್ಲಿ ವಿಕ್ಷಣಗೆ ಸಡಿಲಿಕೆ ಇರುವದರಿಂದ ಜನರು ತಂಡೋಪ ತಂಡವಾಗಿ ತೆರಳಿ ಸೆಲ್ಫಿ ಪೋಟೋ, ಕುಣಿದಾಟ, ಮೋಜು, ಮಸ್ತಿಯಲ್ಲಿ ತಲ್ಲಿಣರಾಗಿದ್ದು, ಬೆಳಗಾವಿ ಜಿಲ್ಲೆಯ ಗೋಕಾಕ್ ಹತ್ತಿರದ ಗೋಕಾಕ್ ಫಾಲ್ಸ್ ಕೂಡಾ ಇದಕ್ಕೆ ಹೊರತಾಗಿಲ್ಲ.

ರಾಜ್ಯದ ಇಂಥಹ ಹಲವಾರು ಪ್ರೇಕ್ಷಣೀಯ ಸ್ಥಳಗಳಾದ ನದಿ, ಹರಿನಾಲಾ, ಕೆರೆ, ಹಳ್ಳ, ಜಲಪಾತಗಳು ಸೇರಿದಂತೆ ಶನಿವಾರ ಮತ್ತು ಬಾನುವಾರ ಸರಕಾರಿ ಹಾಗೂ ಸಂಘ-ಸಂಸ್ಥೆಗಳ ರಜೆ ಇರುವ ಕಾರಣ ವಿಪರೀತ ಪ್ರೇಕ್ಷಕರು ಸೇರುವ ನಿರೀಕ್ಷೆ ಯನ್ನು ಇಂಥಲ್ಲಿ ಅಲ್ಲಗಳೆಯುವಂತಿಲ್ಲ. ಸದ್ಯ ಮಳೆಗಾಲದ ವಾತಾವರಣವಿರುವದ ರಿಂದ ಎಲ್ಲೆಡೆ ಬಾರೀ ಮಳೆ ನಿರಂತರ ಸುರಿಯುತ್ತಿದ್ದು ಈಗಾಗಿ ಜನರ ಜೀವ ಸುರಕ್ಷೆಗಾಗಿ ಮಳೆಗಾಲ ಮುಗಿಯುವರೆಗೂ ಇಂಥಹ ಸ್ಥಳಗಳಲ್ಲಿ ಸರಕಾರ ಕಟ್ಟು ನಿಟ್ಟಿನ ಸೂಕ್ತ ಕ್ರಮಗಳನ್ನು ಕೈಗೊಂಡು ಪ್ರವೇಶ ನಿಷೇದ ಮಾಡುವದು ಅತ್ಯಂತ ಸೂಕ್ತವೆನಿಸುತ್ತದೆ. ಈ ಬಗ್ಗೆ ಪ್ರವಾಸೋದ್ಯಮ ಇಲಾಖೆ ಗಂಭೀರ ಚಿಂತನೆ ನಡೆಸಿ ಎಚ್ಚೆತ್ತುಕೊಳ್ಳಲಿ.

-ಮಹಾಂತೇಶ ರಾಜಗೋಳಿ ಬೈಲಹೊಂಗಲ

ನಿರ್ಲಕ್ಷ್ಯ ಧೋರಣೆ ಸಲ್ಲದು

ಕಳೆದ ಜೂನ್ ತಿಂಗಳಿನಿಂದ ಇಲ್ಲಿಯವರೆಗೆ ಬಿಹಾರ್ ರಾಜ್ಯ ಒಂದರಲ್ಲೇ 8 ಸರಣಿ ಸೇತುವೆ ಕುಸಿತದ ಸುದ್ದಿ ನಿಜಕ್ಕೂ ಕಳವಳಕಾರಿ. ದೇಶದಲ್ಲಿ ಸಾವಿರಾರು ವರ್ಷಗಳ ಹಿಂದಿನ ಸ್ಮಾರಕಗಳು, ದೇವಾಲಯಗಳು, ಸೇತುವೆಗಳು ಇವತ್ತಿಗೂ ಯಾವುದೇ ಒಂದು ಬಿರುಕಿಲ್ಲದೆ ತಲೆಯೆತ್ತಿ ನಿಂತಿವೆ. ರಾಷ್ಟ್ರೀಯ ಹೆದ್ದಾರಿಗಳು, ಸೇತುವೆ ಗಳು ದೇಶದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಇತ್ತೀಚಿನ ದಿನಗಳ ಕಾಮಗಾರಿಗಳಲ್ಲಿ ಗುಣಮಟ್ಟ ಮರೀಚಿಕೆಯಾಗು ತ್ತಿದೆ, ಅಭಿವೃದ್ಧಿ ಕಾರ್ಯಗಳಲ್ಲಿ ಭ್ರಷ್ಟಾಚಾರ, ಕಳಪೆ ಕಾಮಗಾರಿ, ಅಧಿಕಾರಿಗಳು, ಎಂಜಿನೀಯರುಗಳ ನಿರ್ಲಕ್ಷ ಧೋರಣೆಯೇ ಇದಕ್ಕೆಲ್ಲ ಮುಖ್ಯ ಕಾರಣ. ಇದೇ ರೀತಿ ಮುಂದುವರೆದರೆ ಭಾರತೀಯ ಸೇತುವೆ ನಿರ್ವಹಣಾ ವ್ಯವಸ್ಥೆ ಬೆಲೆತೆರಬೇಕಾಗುತ್ತತೆ. ಅಸಮರ್ಪಕ, ಅವೈಜ್ಞಾನಿಕ ರೀತಿಯ ಕಾಮಗರಿಗಳಿಂದ ನಾಗರಿಕರಿಗೆ ಅನಾನುಕೂಲವಾಗುತ್ತಿದ್ದು, ಈ ವಿಚಾರ ಯಾವುದೇ ರಾಜಕೀಯ ಕಿತ್ತಾಟಕ್ಕೆ ಕಾರಣವಾಗದೆ ಕಾಮಗಾರಿಗಳಲ್ಲಿ ಗುಣಮಟ್ಟದ ಕಚ್ಚಾವಸ್ತುಗಳ ಬಳಕೆಯಿಂದ ಅಭಿವೃದ್ಧಿ ಕಾರ್ಯಗಳಾಗಲಿ.

-ಸುಪ್ರಿಯಾ ಪಾಟೀಲ ಬೆಳಗಾವಿ

ಭಟ್ಟರ್ ಸ್ಕಾಚ್

- ರವೀಂದ್ರ ಹೆಗಡೆ, ಶಿರಸಿ
ಭಟ್ರೇ, ನಿಮಗೆ ಒಟ್ಟಾರೆ ಹಾರ್ಟ್ ಇದೆ ಅಂತಾಯ್ತು?
- ಇದೆ ಮತ್ತು ಅದು ಕೆಲಸ ಮಾಡ್ತಾ ಇದೆ ಅಂತಾಯ್ತು!

- ಗಂಗಾ ಸಿ., ಕಳಸ
ಭಟ್ರೇ, ನಿಮಗೆ ಈಗ ಹೊಸ ಹಾರ್ಟ್ ಹಾಕಿದ್ದಾರಾ?
- ಆದರೆ ಯಾರೂ ಇನ್ನೂ ಚುಚ್ಚಿಲ್ಲ!

- ಚೈತ್ರಾ ಗೌಡ, ಬೆಂಗಳೂರು
ಭಟ್ರೇ, ನಿಮ್ಮದೂ ಗಟ್ಟಿ ಗುಂಡಿಗೆ ಬಿಡಿ ಅಂತಾರಲ್ಲ ಇಲ್ಲೊಬ್ಬಟ್ರು?
- ಅದು ಅದೆಷ್ಟೋ ಜನರ ಪ್ರೀತಿ ಸ್ನೇಹವೂ ತುಳುಕಿಕೆ ಹಿಡಿದುಕೊಂಡಿದೆಯಲ್ಲ?!

- ಮಂಜುನಾಥ ಹತ್ತರವಾಟ, ಕೊಳವಿ
ಸಾರ್, ಬೀಳ್ಕೊಡುವಾಗ ನರ್ಸ್‌ಗಳು ಕಣ್ಣೀರು ಹಾಕಿದರಂತೆ?
- ಇದನ್ನು ಸಿಸ್ಟರ್ ಕಣ್ಣೀರು ಅಂತ ಯಾಕೆ ಕರೀತಾರೋ?!

- ಸತೀಶ್ ಎಲ್.ವಿ., ಮೈಸೂರು
ಭಟ್ರೇ, ಕಂಠಮಟ್ಟ ಕುಡಿದು ಸುರಕ್ಷಿತವಾಗಿ ಮನೆ ತಲುಪುವುದನ್ನು ಏನೆನ್ನಬಹುದು?
- ಸೇಫ್ ಲ್ಯಾಂಡಿಂಗ್!

- ವಿ.ಹೇಮಂತಕುಮಾರ, ಬೆಂಗಳೂರು
ಸಾರ್, ಆಸ್ಪತ್ರೆಯಲ್ಲಿದ್ದಾಗ ನೀವು ಯಾರನ್ನು ಹೆಚ್ಚು ಮಿಸ್ ಮಾಡ್ಕೊಂಡ್ರಿ?
- ಅಭಿಮಾನಿಗಳನ್ನ!

- ಶಿವಲಿಂಗಪ್ಪ ಸಿಂಗಣೆಟ್ಟಿ, ಕಲಬುರ್ಗಿ
ಭಟ್ರೇ, ನೀವು ಆಸ್ಪತ್ರೆಯಲ್ಲಿ ಮಲಗಿರುವುದನ್ನು ಕಲ್ಪಿಸಿಕೊಳ್ಳಲೂ ಆಗುವುದಿಲ್ಲವಲ್ಲ?
- ಮಾಜಿ ಪ್ರೇಯಸಿಯರು ಹೇಳಿದ್ದರೆ ನಂಬಬಹುದಿತ್ತು!

- ರಘುನಾಥ ಕೆ., ವಿಜಯನಗರ
ಇನ್ನು ಮುಂದೆ ಭಟ್ಟರ ಲೇಖನದಲ್ಲಿ ಪ್ರೀತಿ-ಪ್ರೇಮ ಹೆಚ್ಚಾಗಿರುತ್ತೆ ಅಂತಾಳ್ಳೇ?
- ಸದ್ಯ ಹೈಸ್ಟ್ ಅಂತ ಆಸ್ಪತ್ರೆ ಸೇರಲಿಲ್ಲ ನೋಡಿ!

- ಸಂಜಯ ಗೌಡ, ಮೈಸೂರು
ಭಟ್ರೇ, ನಿಮಗೆ ಹಾರ್ಟ್ ಅಟ್ಯಾಕ್ ಆದರೆ, ರೂಲ್ ಆಂದಿದ್ದು ನಮ್ಮ ಏನೆ?
- ಅಷ್ಟನ್ನೂ ಆದೇನು ಕೆಡ್ಡಿನಲ್ಲಿ ಆದೋರ ಥರ ಹೇಳ್ತೀಯಲ್ಲ?!

- ವಿನಯ್ ಕೆ.ಎಲ್., ಮಂಡ್ಯ
ಭಟ್ರೇ, ಇನ್ನುಂದೆ ನೀವು ಯಾವ ಕೆಲಸವನ್ನಾದರೂ ಮಾಡಬೇಕಾದರೂ ಅಂತ ಡಾಕ್ಟರ್ ಹೇಳಿದ್ದಾರಂತೆ?
- ಕೆಟ್ಟ ಚಟ ಕಂಟಿನ್ಯೂ ಬಿಲ್ಲ ಅದೊಂದನ್ನು ಬಿಟ್ಟು!

ಕಾಡನ್ನು ನಾಶ ಮಾಡುವುದು ಅದೆಂಥಾ ಅಭಿವೃದ್ಧಿ?

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಮರುಭೂಮಿಯೊಂದನ್ನು ನಿರ್ಮಿಸಲು ಸಾಧ್ಯವೆ? ಅದೂ ಕೇವಲ 50 ವರ್ಷಗಳಲ್ಲಿ? ಅಂತಹದೊಂದು ದುರಂತ ಕಳೆದ ಶತಮಾನದಲ್ಲಿ ನಡೆದಿದೆ. ಆ ಮರುಭೂಮಿಯನ್ನು ನಿರ್ಮಿಸಿ, ಸಾವಿರಾರು ಜನರ ಬದುಕನ್ನು ದುರ್ಭರಗೊಳಿಸಿಯಾಗಿದೆ. ಈ ದುರಂತದಿಂದ ನಾವು ಪಾಠ ಕಲಿತಿದ್ದೇವೆಯೆ? ಇಲ್ಲ.. ಖಂಡಿತವಾಗಿಯೂ ಇಲ್ಲ, ನಮ್ಮ ರಾಜ್ಯದಲ್ಲೂ ನದಿಯನ್ನು ಅವೈಜ್ಞಾನಿಕವಾಗಿ ತಿರುಗಿಸಿ, 'ಎತ್ತಿನ ಹೊಳೆ ಯೋಜನೆ'ಯನ್ನು ಜಾರಿಗೆ ತರುವ ಕೆಲಸ ಪ್ರಗತಿಯಲ್ಲಿದೆ, ಭವಿಷ್ಯದ ಮರುಭೂಮಿಯನ್ನು ಗುದ್ದಲಿಪೂಜೆಯನ್ನು ದೊಡ್ಡ ಮಟ್ಟದಲ್ಲಿ ಮಾಡಲಾಗಿದೆ. ಕಳೆದ ತಿಂಗಳು ಇನ್ನೊಂದು ಮರುಭೂಮಿಗೆ ಗುದ್ದಲಿ ಪೂಜೆ ಮಾಡುವ ಪ್ರಯತ್ನ ನಡೆದಿದೆ - ಸಂಡೂರಿನ ದೇವದಾರಿ ಬೆಟ್ಟ ಶ್ರೇಣಿಯಲ್ಲಿ, ಸುಮಾರು 99,000 ಮರಗಳನ್ನು ಕಡಿದು, ಗಣಿಗಾರಿಕೆ ಮಾಡಲು ಹುದುರು ಎಂದು ಪ್ರಭುತ್ವ ಅನುಮತಿ ನೀಡಿದೆ! ಮರಗಳನ್ನು ಉಳಿಸಿ ಎಂದು ಒಂದು ಕಡೆ ಹೇಳುತ್ತಲೇ, 992 ಎಕರೆಯಲ್ಲಿ ಬೆಳೆದಿರುವ 99,000 ಮರಗಳನ್ನು ಕಡಿಯಲು ಅನುಮತಿ ನೀಡುವುದು ಎಂತಹ ಕ್ರಮ? ಅನುಮತಿ ಪಡೆದ 99,000 ಮರಗಳ ಜತೆಯಲ್ಲೇ, ಇನ್ನೆಷ್ಟೋ ಸಾವಿರ ಮರಗಳು ರಸ್ತೆಗೆ, ವಾಹನ ಚಾಲನೆಗೆ, ಉರುವಲಿಗಾಗಿ, ಗಣಿಗಾರಿಕೆಯ ಇತರ ಕೆಲಸಗಳಿಗಾಗಿ ಸಾಯುವುದಂತೂ ನಿಶ್ಚಿತ. ಬಳ್ಳಾರಿ ಜಿಲ್ಲೆಯ ಈ ಹಸುರಿನ ತಾಣವನ್ನು ಮರುಭೂಮಿ ಮಾಡಲು ಇದು ಗುದ್ದಲಿಪೂಜೆ ಅಲ್ಲವೆ? ಗಣಿಗಾರಿಕೆ ಮಾಡಬೇಕು, ಅದರಿಂದ ಹಣ ಗಳಿಸಬೇಕು ನಿಜ, ಆದರೆ ಅದಕ್ಕೆ ತಗಲುವ ವೆಚ್ಚ? At what cost?

ಇಪ್ಪತ್ತನೇ ಶತಮಾನದಲ್ಲಿ ಮನುಷ್ಯನೇ ನಿರ್ಮಿಸಿದ ಒಂದು ಮರುಭೂಮಿಯ ಕಥೆಯನ್ನು, ದುರಂತವನ್ನು ಇಲ್ಲಿ ನೆನಪಿಸಿಕೊಂಡು, ನಾವೆಲ್ಲರೂ ಸಂಡೂರಿನ ಕಾಡನ್ನು ರಕ್ಷಿಸಲು ಪ್ರಯತ್ನ ನಡೆಸಬೇಕು, ಆ ಕುರಿತು ಜನಾಭಿಪ್ರಾಯ ಮೂಡಿಸಬೇಕು, ಹಕ್ಕೊತ್ತಾಯ ಮಂಡಿಸಬೇಕು. ನಮ್ಮ ರಾಜ್ಯದಲ್ಲಿ ಜೀವ ಹಿಡಿದುಕೊಂಡಿರುವ ಕೆಲವೇ ಕೆಲವು ಪ್ರದೇಶದಲ್ಲಿ ದೇವದಾರಿ ಕಾಡು ಸಹ ಒಂದಾಗಿರುವುದರಿಂದ, ಇಂತಹದೊಂದು ಪ್ರಯತ್ನ ನಡೆಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ.

ರಷ್ಯಾ ಮತ್ತು ಅದರ ನೆರೆಯ ದೇಶದಲ್ಲಿ, ಅಲ್ಲಿನವರು 'ಅಭಿವೃದ್ಧಿ'ಯ ಹೆಸರಿನಲ್ಲಿ ನಿರ್ಮಿಸಿದ ಮರುಭೂಮಿಯ ಉದಾಹರಣೆಯು ನಮ್ಮೆಲ್ಲರಿಗೆ ಪಾಠ ಎನಿಸಬೇಕು. 1960ರ ದಶಕ. ರಷ್ಯಾದಲ್ಲಿ 'ಅರಾಲ್ ಸಮುದ್ರ' ಎಂಬ ವಿಶಾಲವಾದ ಸರೋವರವಿತ್ತು. ಸಿಹಿನೀರಿನಿಂದ ತುಂಬಿದ್ದ, ಲಕ್ಷಾಂತರ ಜನರಿಗೆ, ಜೀವಿಗಳಿಗೆ ಆಶ್ರಯ ನೀಡಿದ್ದ, ಎರಡು ಪ್ರಮುಖ ಬಂದರುಗಳನ್ನು ಹೊಂದಿದ್ದ ಈ 'ಸಮುದ್ರ', ಈಗ ಬರಿದಾಗಿ ಹೋಗಿ ಮರುಭೂಮಿಯಾಗಿ ಪರಿವರ್ತನೆಗೊಂಡಿದ್ದು, ತನ್ನ ಹೆಸರನ್ನು ಸಹ ಬದಲಿಸಿಕೊಂಡಿದೆ. ಆ ವಿಶಾಲ ಸರೋವರ ಇದ್ದ ಜಾಗವನ್ನು ಇಂದು ಅರಾಕುಂ ಮರುಭೂಮಿ ಎಂದು ಕರೆಯಲಾಗುತ್ತಿದೆ. ಇದನ್ನು ಬದಲಿಸಿಕೊಂಡದ್ದು, ಆಧುನಿಕ ಮಾನವನ ಚಟುವಟಿಕೆಗಳಿಗೆ ಬರೆದ ವ್ಯಂಗ್ಯಭರಿತ ಒಂದು ಭಾಷ್ಯ ಎಂದನ್ನಬಹುದು.

1960ರಲ್ಲಿ ಅರಾಲ್ ಸಮುದ್ರವು ಸುಮಾರು 435 ಕಿಮೀ ಉದ್ದವಿತ್ತು, 290 ಕಿಮೀ ಅಗಲವಿತ್ತು. ಕಜಕಸ್ತಾನ ಮತ್ತು ಉಜಬೆಕಿಸ್ತಾನ ಪ್ರಾಂತ್ಯಗಳ ನಡುವೆ ಸುಮಾರು 68,000 ಚದರ ಕಿ.ಮೀ. ವಿಸ್ತಾರಕ್ಕೆ ವ್ಯಾಪಿಸಿಕೊಂಡಿತ್ತು. 1970ರ ದಶಕದ ತನಕವೂ ಅದು ಜಗತ್ತಿನ ನಾಲ್ಕನೆಯ ಅತಿ ದೊಡ್ಡ ಸರೋವರ! ಅಮು ದರ್ಯಾ ಮತ್ತು ಸಿರ್ ದರ್ಯಾ ಎಂಬ ಎರಡು ನದಿಗಳು ಅರಾಲ್ ಸರೋವರಕ್ಕೆ ನೀರುಣಿಸುತ್ತಿದ್ದವು. ಆ ಸರೋವರದ ಸುತ್ತಲೂ ಹಳ್ಳಿಗಳಿದ್ದವು, ಊರುಗಳಿದ್ದವು, ಬಂದರುಗಳಿದ್ದವು, ಪುರಾತನ ಕಾಲದ ಒಂದು ಸಂಸ್ಕೃತಿ ಇತ್ತು. ಸರೋವರದಲ್ಲಿ ಆಶ್ರಯಿಸಿ ವಿವಿಧ ಪ್ರಾಣಿ ಪಕ್ಷಿಗಳಿದ್ದವು, 22 ಪ್ರಭೇದದ ಮೀನುಗಳಿದ್ದವು. ಅವುಗಳಲ್ಲಿ ನಾಲ್ಕು ಪ್ರಭೇದದ ಮೀನುಗಳು, ಕೇವಲ ಅರಾಲ್ ಸರೋವರದಲ್ಲಿ ಮಾತ್ರ ಕಾಣಸಿಗುತ್ತಿದ್ದವು.

ಆ ವಿಶಾಲ ಸರೋವರವು ಇಂದು ತನ್ನ ಹೆಸರನ್ನೇ ಬದಲಾಯಿಸಿಕೊಂಡು 'ಅರಾಕುಂ ಮರುಭೂಮಿ'ಯಾಗಿ ಪರಿವರ್ತನೆಗೊಂಡ ನಂತರ, ವಿಶಿಷ್ಟ ಎನಿಸಿದ್ದ ಆ ನಾಲ್ಕು ಪ್ರಭೇದದ ಮೀನುಗಳು ಈ ಭೂಮಿಯಿಂದಲೇ ಕಣ್ಮರೆಯಾಗಿವೆ. ಸರೋವರವೊಂದು ಮರುಭೂಮಿಯಾಗಿ ಪರಿವರ್ತನೆಗೊಂಡ ಈ ದುರಂತವನ್ನು, ಮನುಷ್ಯ ನಿರ್ಮಿಸಿದ ಅತಿ ದೊಡ್ಡ ಪ್ರಾಕೃತಿಕ ದುರಂತ ಎಂದು ಗುರುತಿಸಲಾಗಿದೆ.

ಈ ಒಂದು ಮಾನವ ನಿರ್ಮಿತ ಪ್ರಾಕೃತಿಕ ದುರಂತಕ್ಕೆ ಮುಖ್ಯ ಕಾರಣವೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡ ವಿವೇಚನಾ ರಹಿತ ನೀರಾವರಿ ಯೋಜನೆಗಳು! ಸೋವಿಯತ್ ಸರಕಾರವು ಅಮು ದರ್ಯಾ ಮತ್ತು ಸಿರ್ ದರ್ಯಾ ನದಿಗಳಿಗೆ ಸಾಲು



ಸಾಲು ಅಣೆಕಟ್ಟುಗಳನ್ನು ಕಟ್ಟಿಸಿತು. ಸರೋವರಕ್ಕೆ ನೀರು ತರುತ್ತಿದ್ದ ಆ ನದಿಗಳಿಗೆ 30ಕ್ಕೂ ಹೆಚ್ಚು ಅಣೆಕಟ್ಟುಗಳನ್ನು, ಒಡ್ಡುಗಳನ್ನು ಕಟ್ಟಲಾಯಿತು. ಅಮು ದರ್ಯಾ ನದಿಯನ್ನು 'ನದಿ ತಿರುವು' ಯೋಜನೆಗೆ ಯಶಸ್ವಿಯಾಗಿ ಒಳಪಡಿಸಲಾಯಿತು. ಇದಕ್ಕೆ ಮುಖ್ಯ ಕಾರಣ ಹತ್ತಿ ಬೆಳೆಯುವ ವ್ಯಾಮೋಹ. 'ಬಿಳಿ ಚಿನ್ನ' ಎಂದು ಕರೆಯಲ್ಪಟ್ಟ ಹತ್ತಿಯನ್ನು ಬೆಳೆದು, ರಫ್ತು ಮಾಡಿ ಅಪಾರ ಹಣ ಗಳಿಸುವ ಯೋಜನೆಗೆ ಕೈಹಾಕಿತು. ಇದಕ್ಕಾಗಿ ಕಜಕಿಸ್ತಾನ ಮತ್ತು ಉಜಬೆಕಿಸ್ತಾನದ ವಿಶಾಲ ಬಯಲುಗಳ ಮೇಲೆ ಸೋವಿಯತ್ ಸರಕಾರದ ಕಣ್ಣುಬಿತ್ತು. 1991ರ ತನಕ ಅವು ಸೋವಿಯತ್ ರಷ್ಯಾದ ಭಾಗವಾಗಿದ್ದವಷ್ಟೆ. ಸರಕಾರದ ಜಮೀನು, ಸರಕಾರ ಹೇಳಿದಂತೆ ಕೆಲಸ ಮಾಡುವ ಕೃಷಿ ಕಾರ್ಮಿಕರು, ಕಣ್ಣು ಹಾಯಿಸಿದಷ್ಟು ದೂರ ಹತ್ತಿ ಹೊಲಗಳು! ವೈಟ್ ಗೋಲ್ಡ್ ಅಥವಾ ಬಿಳಿ ಚಿನ್ನವು ರಫ್ತಾಗಿ, ದೇಶಕ್ಕೆ ಸಾಕಷ್ಟು ಸಂಪತ್ತನ್ನು ಗಳಿಸಿತು. 1988ರಲ್ಲಿ ಉಜಬೆಕಿಸ್ತಾನ್ ಜಗತ್ತಿನಲ್ಲೇ ಅತಿ ಹೆಚ್ಚು ಹತ್ತಿ ರಫ್ತು ಮಾಡುವ ಪ್ರಾಂತ್ಯ ಎಂಬ ಹೆಸರು ಗಳಿಸಿತು.

ವಿಚಿತ್ರ ಮತ್ತು ಆಘಾತಕಾರಿ ವಿಚಾರವೆಂದರೆ, ಅರಾಲ್ ಸಮುದ್ರಕ್ಕೆ ನೀರನ್ನು ಒದಗಿಸುತ್ತಿದ್ದ ಆ ಎರಡು ನದಿಗಳ ನೀರನ್ನು ಈ ರೀತಿ ಹತ್ತಿ ಬೆಳೆಯಲು ಉಪಯೋಗಿಸಿದರೆ, ಅರಾಲ್ ಸಮುದ್ರವು ಕ್ರಮೇಣ ಒಣಗಿಹೋಗುತ್ತದೆ ಎಂಬ ವಿಚಾರವು ಅಲ್ಲಿನ ಸರಕಾರದ ಇಲಾಖೆಗಳಿಗೆ ಗೊತ್ತಿತ್ತು. ಇದರಿಂದಾಗಿ ಅರಾಲ್ ಸಮುದ್ರ ಬರಡಾಗುತ್ತದೆ ಎಂಬ ವಿಚಾರವನ್ನು ಸರಕಾರದ ಇಲಾಖೆಗಳು ಚರ್ಚಿಸಿಯೂ ಇದ್ದವು! ಆದರೆ, ಅರಾಲ್ ಸಮುದ್ರದ ಉಳಿವಿಗಿಂತಲೂ, ಹಣದ ಬೆಳೆ ಎನಿಸಿದ ಹತ್ತಿ ತರುತ್ತಿದ್ದ ಆದಾಯಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು.

ಇದರಿಂದಾದ ದುರಂತ ಬಹುದೊಡ್ಡದು. 1990ರ ಸಮಯಕ್ಕೆ, ಅರಾಲ್ ಸರೋವರದ ಶೇ.40 ಭಾಗ ಒಣಗಿಹೋಗಿತ್ತು. ಅಲ್ಲಿದ್ದ ಬಂದರುಗಳಲ್ಲಿ ನಿಂತಿದ್ದ ಮಧ್ಯಮ ಗಾತ್ರದ ಹಡಗುಗಳು, ಅಲ್ಲೇ ಮರಳಿನ ಮೇಲೆ ಬಂಧಿಯಾದವು. ಜತೆಗೆ, ಪ್ರತಿವರ್ಷ ನೀರಿನ ಮಟ್ಟ ಒಂದೇ ಸಮನೆ ಕಡಿಮೆಯಾಗುತ್ತಲೇ ಹೋಗುತ್ತಿತ್ತು! 2010ರ ವೇಳೆಗೆ ಅರಾಲ್ ಸಮುದ್ರವು ಶೇ.90 ರಷ್ಟು ಒಣಗಿಹೋಗಿತ್ತು. ಸರೋವರವು ಇಬ್ಭಾಗವಾಗಿ, ಉತ್ತರ ಅರಾಲ್ ಮತ್ತು ದಕ್ಷಿಣ ಅರಾಲ್ ಎಂಬ ಎರಡು ಪುಟ್ಟ ಸರೋವರಗಳು ರೂಪುಗೊಂಡವು! ಜಗತ್ತಿನ ನಾಲ್ಕನೆಯ ಅತಿದೊಡ್ಡ ಸರೋವರ ಎಂಬ ಪಟ್ಟವು ಮರುಭೂಮಿಯಲ್ಲಿ ಹುದುಗಿಹೋಯಿತು.

ಆ ಹೊಸ ಮರುಭೂಮಿಯಾದರೂ ಅದೆಷ್ಟು ಕ್ರೂರ! ಮೈಲಿ ಮೈಲಿಗಳ ತನಕ ಮರಳು ಮತ್ತು ಕ್ಷಾರ ಭೂಮಿ. ಈ ಮರಳುಗಾಡಿನಲ್ಲಿ ಸಂಚರಿಸಿದರೆ, ಅಲ್ಲಲ್ಲಿ ಧುತ್ತೆಂದು ಹತ್ತಾರು ತುಕ್ಕು ಹಿಡಿದ ಹಡಗುಗಳು ಎದುರಾಗುತ್ತವೆ! ಅಲ್ಲಿದ್ದ ಅರಾಲ್ ಮತ್ತು ಮೊಯ್‌ನಾಕ್ ಎಂಬ ಎರಡು ದೊಡ್ಡ ಬಂದರುಗಳಲ್ಲಿ ಲಂಗರು ಹಾಕಿ ನಿಂತಿದ್ದ ದೋಣಿಗಳನ್ನು ಹೊರ ಸಾಗಿಸಲು ಸಾಧ್ಯವಾಗಿಲ್ಲ. ಅಲ್ಲಿದ್ದ ನಾಲ್ಕು ಪ್ರಭೇದದ ಮೀನುಗಳು ಈ ಭೂಮಿಯಿಂದಲೇ ಅಳಿಸಿಹೋದವು. ಮರುಭೂಮಿಯಿಂದ ಹಾರಿ ಬಂದ ದೂಳು, ಹಲವು ಪಟ್ಟಣಗಳಿಗೆ ನುಗ್ಗಿ, ಅಲ್ಲಿನ ಜನರಿಗೆ ಶ್ವಾಸಕೋಶದ ಕಾಯಿಲೆಗಳನ್ನು ತಂದವು.

2000ರ ನಂತರ ಈ ಸರೋವರವನ್ನು ಪುನರುಜ್ಜೀವನಗೊಳಿಸುವ ಕುರಿತು ಸ್ವಲ್ಪ ಕೆಲಸ ನಡೆಯಿತು. ಜಗತ್ತಿನ ಅತಿ ಘೋರ ಪ್ರಾಕೃತಿಕ ದುರಂತಗಳಲ್ಲಿ ಅರಾಲ್ ಸಮುದ್ರವೂ ಒಂದು ಎಂಬ ಪ್ರಚಾರ ದೊರಕಿತು. ಕಜಕಿಸ್ತಾನ ಮತ್ತು ಉಜ್‌ಬೆಕಿಸ್ತಾನ ಮತ್ತು ಸುತ್ತಲಿನ ಇತರ ಮೂರು ದೇಶಗಳು ಸೂಕ್ತ ಕ್ರಮ ಕೈಗೊಂಡು, ಅರಾಲ್ ಸಮುದ್ರಕ್ಕೆ ಮತ್ತೆ ಜೀವ ತುಂಬಬೇಕು ಎಂಬ ಒತ್ತಡಕ್ಕೆ ಸಿಲುಕಿ, ಒಪ್ಪಂದಕ್ಕೆ ಬಂದವು. 2000ರಲ್ಲಿ ಯುನೆಸ್ಕೋ, 2004ರಲ್ಲಿ ವಿಶ್ವಬ್ಯಾಂಕ್ ಈ ಜಲಮೂಲವನ್ನು ಪುನರುಜ್ಜೀವನ ಗೊಳಿಸಲು ಕಾರ್ಯಸೂಚಿಗಳನ್ನು ಹಾಕಿಕೊಂಡು, ಸ್ವಲ್ಪ ಕೆಲಸವೂ ನಡೆದಿದೆ. ಆದರೆ ಈಗಲೂ ವಿಶಾಲ ಪ್ರದೇಶದಲ್ಲಿ ಹತ್ತಿ ಬೆಳೆದು ರಫ್ತು ಮಾಡುತ್ತಿರುವ ಉಜಬೆಕಿಸ್ತಾನವು ಹೆಚ್ಚು ಇದರಲ್ಲಿ ಆಸಕ್ತಿ ತೋರಿಸುತ್ತಿಲ್ಲ.

'ದೂರದ ಉಜ್‌ಬೆಕಿಸ್ತಾನದ ಅಂಚಿನಲ್ಲಿರುವ ಅರಾಲ್ ಸಮುದ್ರದ ಈ ದುರಂತವನ್ನು ಇಷ್ಟು ವಿವರವಾಗಿ ಬರೆಯುತ್ತಿರುವಿರಲ್ಲಾ, ಇದರಿಂದ ನಮಗೇನು ಪ್ರಯೋಜನ?' ಎಂದು ನೀವು ನನ್ನನ್ನು ಪ್ರಶ್ನಿಸಬಹುದು. ಅರಾಲ್ ಸಮುದ್ರವು ಮರುಭೂಮಿಯಾಗಿ ಪರಿವರ್ತನೆಗೊಂಡ ವಿಚಾರವು, ನಮ್ಮ ರಾಜ್ಯದವರಿಗೆ, ನಮ್ಮ ದೇಶದವರಿಗೆ ಪಾಠವಾಗಬೇಕು, ಈಗ ಉಳಿದಿರುವ ಪರಿಸರ ಸಂಪತ್ತನ್ನು, ಹಸುರು ಹೊದ್ದ ಜಾಗಗಳನ್ನು ಉಳಿಸಿಕೊಳ್ಳಲು ನಮಗೆ ಸ್ಫೂರ್ತಿ ಎನಿಸಬೇಕು. ಜತೆಗೆ, ಅದು ಒಂದು ಎಚ್ಚರಿಕೆಯ ಗಂಟೆಯನ್ನೂ ಮೊಳಗಿಸಬೇಕು. ನಮ್ಮ ರಾಜ್ಯದಲ್ಲಿ ಈಚಿನ ಒಂದು ದಶಕದಲ್ಲಿ ಎತ್ತಿನ ಹೊಳೆ ನದಿ ತಿರುವು ಯೋಜನೆಗಾಗಿ ಸಾವಿರಾರು ಎಕರೆ ಅರಣ್ಯವನ್ನು ನಾಶಮಾಡಲಾಗಿದೆ, ಇನ್ನೂ ಮಾಡಲಾಗುತ್ತಿದೆ. ಸಹ್ಯಾದ್ರಿಯ ಬೆಟ್ಟಗಳನ್ನು ಅವೈಜ್ಞಾನಿಕವಾಗಿ, ಬುಲ್‌ಡೋಜರ್ ಸಹಾಯದಿಂದ ತರಿದು ಹಾಕಿ, ಅಲ್ಲೆಲ್ಲಾ ಕಾಲುವೆಗಳನ್ನು, ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ, ಅಲ್ಲಿನ ಮರಗಳನ್ನು ಕಡಿಯಲಾಗುತ್ತಿದೆ, ಶೋಲಾ ಕಾಡನ್ನು ನಾಶಮಾಡಲಾಗುತ್ತಿದೆ, ಅಲ್ಲಿನ ಜಲಮೂಲಗಳನ್ನು ಬತ್ತಿಸಲಾಗುತ್ತಿದೆ.

'ವ್ಯರ್ಥವಾಗಿ ಪಶ್ಚಿಮದತ್ತ ಹರಿದು ಹೋಗಿ, ಸಮುದ್ರ ಸೇರುತ್ತಿರುವ ನೀರನ್ನು ಪೂರ್ವಕ್ಕೆ ತಿರುಗಿಸಿ, ದೂರದ ತುಮಕೂರು, ಕೋಲಾರ ಮತ್ತು ಇತರ ಪ್ರದೇಶಗಳಿಗೆ ನೀರನ್ನು ಒದಗಿಸುವುದು' - ಎಂಬ ಉದ್ದೇಶವನ್ನು ಎತ್ತಿನಹೊಳೆ ನದಿ ತಿರುವು ಯೋಜನೆ ಹೊಂದಿದೆ. ಆದರೆ, 'ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನೀರು' ಎಂಬ ಪರಿಕಲ್ಪನೆಯೇ ಸರಿಯಲ್ಲ ಎಂದು ಪರಿಸರ ತಜ್ಞರು ಆಧಾರ ಸಹಿತ ಹೇಳಿದ್ದಾರೆ. ಜತೆಗೆ, ಪಶ್ಚಿಮದತ್ತ ಹರಿದು ಹೋಗುವ ನದಿಗಳನ್ನು ಆಶ್ರಯಿಸಿದ ಊರುಗಳಿಗೆ ಮುಂದೆ ನೀರು ದೊರಕದೇ ಇರುವ ಅಪಾಯವೂ ಈ ಯೋಜನೆಯಿಂದ ಇದೆ. ಆದರೆ, ಎತ್ತಿನಹೊಳೆ ಯೋಜನೆಗಾಗಿ ಇಂದಿಗೂ ಪರಿಸರ ನಾಶ ನಡೆಯುತ್ತಲೇ ಇದೆ, ಸೂಕ್ಷ್ಮ ಪರಿಸರ ಹೊಂದಿರುವ ಸಹ್ಯಾದ್ರಿಯ ಕಾಡುಗಳನ್ನು ನಾಶ ಮಾಡಿ, ಕಾಲುವೆ ನಿರ್ಮಾಣ, ರಸ್ತೆ ನಿರ್ಮಾಣ ಮೊದಲಾದ ಕೆಲಸಗಳು ನಡೆಯುತ್ತಲೇ ಇವೆ. ಈ ಯೋಜನೆಯು ಉಂಟುಮಾಡುತ್ತಿರುವ ಪರಿಸರ ನಾಶದ ದೂರಗಾಮಿ ಪರಿಣಾಮಗಳು ಬಹಿರಂಗಗೊಳ್ಳಲು ಇನ್ನೂ ಒಂದೆರಡು ದಶಕಗಳ ಕಾಲ ಬೇಕಾದೀತು. ನಮ್ಮ ಕಣ್ಣೆದುರೇ, ಗೊತ್ತಿದ್ದು ಗೊತ್ತಿದ್ದೇ ನಡೆಯುತ್ತಿರುವ ಪರಿಸರ ದುರಂತ ಇದು.

ಇದೇ ರೀತಿಯ ಇನ್ನೊಂದು ಪರಿಸರ ದುರಂತಕ್ಕೆ ಈಗ ನಾಂದಿ ಹಾಡಲಾಗುತ್ತಿದೆ - ಅದೇ ಸಂಡೂರಿನ ದೇವದಾರಿಯಲ್ಲಿ ನಡೆಸಬೇಕೆಂದು ಉದ್ದೇಶಿಸಿರುವ ಗಣಿಗಾರಿಕೆ. ಹಸುರಿನಿಂದ ತುಂಬಿರುವ ದೇವದಾರಿ ಪ್ರದೇಶದಲ್ಲಿ 99,000 ಮರಗಳನ್ನು ಕಡಿದು, ಗಣಿಗಾರಿಕೆ ನಡೆಸಿದರೆ, ಮುಂದಿನ ದಿನಗಳಲ್ಲಿ ಆ ಸುತ್ತಲಿನ ಪ್ರದೇಶದಲ್ಲಿ ಸಕಾಲಕ್ಕೆ ಮಳೆಯಾದೀತೆ? ಈಗಾಗಲೇ ಮಳೆ ಮತ್ತು ನೀರಿನ ಕೊರತೆ ಎದುರಿಸುತ್ತಿರುವ ಆ ಪ್ರದೇಶವು ಇನ್ನಷ್ಟು ಬರಡಾಗುವ ಸಾಧ್ಯತೆ ಇಲ್ಲವೆ? ಕುದುರೆಮುಖ ಪರ್ವತ ಶ್ರೇಣಿಯಲ್ಲಿ, ಅಪಾರ ಪ್ರಮಾಣದ ಪರಿಸರವನ್ನು ನಾಶಮಾಡಿದ ಸಂಸ್ಥೆಯೊಂದು ಈಗ ಪುನಃ, ಸಂಡೂರಿನ ಬೆಟ್ಟಶ್ರೇಣಿಯಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಪಡೆದಿದೆ ಎಂಬ ವಿಚಾರವೇ ಕಳವಳಕಾರಿ. ಈ ಕುರಿತು ನಾನಾ ರೀತಿಯ ಅಂಕಿ ಸಂಕಿಗಳನ್ನು ಕೋಟ್ ಮಾಡಬಹುದು, ಆ ಅಂಕಿಸಂಕಿಗಳ ಆಧಾರದಿಂದ ಇಲ್ಲೊಂದು ಪರಸರ ದುರಂತ ನಡೆಯಬಹುದು ಎಂದು ಋಜುವಾತು ಮಾಡಬಹುದು. ಆದರೆ, ಸರಳ ಸತ್ಯ ಒಂದಿದೆಯಲ್ಲಾ - ಮರ ಇದ್ದರೆ ಮಳೆ - ಈ ಸಾರ್ವಕಾಲಿಕ ಸತ್ಯವನ್ನೇ ಬುಡಮೇಲು ಮಾಡುವಂತೆ, ಸಾವಿರಾರು ಮರಗಳನ್ನು ಕಡಿಯಲು ಪ್ರಭುತ್ವವು ಹೇಗೆ ತಾನೆ ಅನುಮತಿ ಕೊಡಬಲ್ಲದು?

ಪತ್ರಕರ್ತ ಪಿ.ಲಂಕೇಶ್ ಒಮ್ಮೆ ಬರೆದಿದ್ದರು - ದೂರದ ದೆಹಲಿಯಲ್ಲಿ ಪ್ರಭುತ್ವದ ಪ್ರತಿನಿಧಿಯು ಹಾಕುವ ಒಂದು ಸಹಿಯು, ನಮ್ಮೂರಿನ ಸಾವಿರಾರು ಮರಗಳನ್ನು ಉರುಳಿಸಬಲ್ಲದು ಎಂದು. ಅಂತಹ ಸಾಧ್ಯತೆಯೊಂದು ನಮ್ಮ ರಾಜ್ಯದಲ್ಲಿ, ದೇವದಾರಿ ಕಾಡಿನ ಮರಗಳ ನಾಶದ ಪ್ರಸ್ತಾಪದೊಂದಿಗೆ, ಈಗ ಧುತ್ತೆಂದು ಎದುರಾಗಿದೆ. ಇದು ನೋವಿನ ಸಂಗತಿ.

ಅಭಿಮತ

ಸಂದೀಪ್ ಶರ್ಮಾ ಮೂಟೇರಿ

ಅಂತರಂಗದ ಶಾಂತಿಯ ಪಥ

ಹಿಂದೂ ಧರ್ಮ ಗ್ರಂಥಗಳ ಪ್ರಕಾರ ಅಂತಿಮ ಶಾಂತಿ, ಸಮಾಧಾನ, ಸಂತೋಷ ಸಿಗುವುದು ನಾಲ್ಕು ಪುರುಷಾರ್ಥಗಳನ್ನು ಸಮರ್ಥವಾಗಿ ಪಾಲಿಸುವುದರಿಂದ. ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳೆಡೆಗೆ ಜವಾಬ್ದಾರಿಯುತ ಪಯಣದಿಂದ ಹಾಗೂ ಆತ್ಮದ ಮುಕ್ತಿಯಲ್ಲಿ. ಜುಡಾಯಿಸಂ ಪ್ರಕಾರ ಜೀವನದಲ್ಲಿ ಶಾಂತಿ, ಸಂತೋಷ ಪಡೆಯುವುದು ಪ್ರತಿಯೊಬ್ಬನ ನೈತಿಕ ಜವಾಬ್ದಾರಿ. ಮುಸಲ್ಮಾನರ ಇಸ್ಲಾಂ ಧರ್ಮದ ಪ್ರಕಾರ ಸಂತೋಷ, ನೆಮ್ಮದಿ ಎಂದರೆ ಅದು ಜೀವನ ಪರ್ಯಂತದ ಪ್ರಕ್ರಿಯೆ, ಶಾಂತಿ, ಸಮಾಧಾನ ಹಾಗೂ ಶಾಶ್ವತ ಆನಂದದ ಅನುಭೂತಿ. ಇವೆಲ್ಲ ವ್ಯಾಖ್ಯಾನಗಳಿದ್ದರೂ ಶಾಶ್ವತ ಆನಂದವನ್ನು ಪಡೆದುಕೊಳ್ಳುವ ಜನಸಾಮಾನ್ಯನ ಹುಡುಕಾಟ ಮಾತ್ರ ನಿರಂತರ.

ಲೌಕಿಕ ಜಗತ್ತಿನಲ್ಲಿ ಆಧುನಿಕ ಮಾನವರು ಮನಃಶಾಂತಿಗಾಗಿ, ಸಂತೋಷಕ್ಕಾಗಿ ಏನೇನು ಕಸರತ್ತುಗಳನ್ನು ಮಾಡುತ್ತಾರೋ ಈಗಿನ ಜೀವನಶೈಲಿ ಎಲ್ಲರಿಗೂ ತಿಳಿದೇ ಇದೆ. ಒಬ್ಬೊಬ್ಬರ ಅಭಿರುಚಿಯೂ ಭಿನ್ನ. ಒಬ್ಬರಿಗೆ ಅಧ್ಯಾತ್ಮದಲ್ಲಿ ಸಮಾಧಾನ ಸಿಕ್ಕರೆ, ಇನ್ನೊಬ್ಬರಿಗೆ ಶಾಪಿಂಗ್ ಮಾಡುವುದರಲ್ಲಿ, ಮತ್ತೊಬ್ಬರಿಗೆ ವಾರಾಂತ್ಯ ಪಾರ್ಟಿ ಮಾಡುವುದಲ್ಲಿ, ಮಗದೊಬ್ಬರಿಗೆ ಟ್ರೆಕ್ಕಿಂಗ್‌ನಲ್ಲಿ, ಇನ್ನು ಹಲವರಿಗೆ ಸಂತೋಷವಾಗಿರುವುದು ಹೇಗೆ ಎಂಬುದನ್ನು ತಿಳಿಸಿಕೊಡುವ ಹ್ಯಾಪಿನೆಸ್ ಕೋಚ್‌ಗಳ ಯೂಟ್ಯೂಬ್ ವೀಡಿಯೋಗಳಲ್ಲಿ, ಬೆವರಿಳಿಸುವ ಜಿಮ್‌ಗಳಲ್ಲಿ, ಸಿನೆಮಾ ನೋಡುವುದರಲ್ಲಿ, ಯೋಗ ತರಬೇತಿಯಲ್ಲಿ. ಒಟ್ಟಿನಲ್ಲಿ ಕೊಡುಕೊಳ್ಳುವ ಪ್ರಕ್ರಿಯೆ ಹತ್ತು ಹಲವು ರೀತಿಯಲ್ಲಿ, ರೂಪದಲ್ಲಿ. ಅಂತಿಮ ಗುರಿಯೆಂದರೆ ಗೊಂದಲದ, ಧಾವಂತದ, ವ್ಯಾಪಾರಿ ಮನೋಭಾವದ ಸಂಕೀರ್ಣ ಬದುಕಿನ ಜಂಜಾಟದ ನಡುವೆ ಒಂದಷ್ಟು ಮನಃಶಾಂತಿ, ಸಮಾಧಾನದ ಹುಡುಕಾಟ. ಇದಕ್ಕಾಗಿ ನಿರಂತರ ವ್ಯಾಪಾರ, ವಹಿವಾಟು. ಒಂದು ಕಾಲದಲ್ಲಿ ಸಂತೋಷ, ನೆಮ್ಮದಿಯೆಂದರೆ ಅದೊಂದು ಮನಸ್ಸಿನ ಭಾವ, ಅಧ್ಯಾತ್ಮದ ಅನುಭವ. ಆದರೆ ಈಗ ಸಂತೋಷ ವ್ಯಾಪಾರೀಕರಣದ ಅವಿಭಾಜ್ಯ ತಂತ್ರ. ಹಣದಿಂದ ಸಂತೋಷವನ್ನು ಖರೀದಿಸಲು ಸಾಧ್ಯವಿಲ್ಲ ಎನ್ನುವ ಮಾತಿಗೆ ತದ್ವಿರುದ್ಧವಾಗಿ ಕಾಸು ಕೊಟ್ಟಾದರೂ ಸಂತೋಷ ಪಡೆದುಕೊಳ್ಳುವ ನಿತ್ಯದ ಪರದಾಟ.

ಅಮೆರಿಕದ ಯೇಲ್ ವಿಶ್ವವಿದ್ಯಾನಿಲಯವು ಕೋರ್ಸ್ ಇರಾದ ಮೂಲಕ ನಡೆಸುವ ದಿ ಸೈನ್ಸ್ ಆಫ್ ವೆಲ್ ಬಿಯಿಂಗ್ ಎನ್ನುವ ಆನ್ಲೈನ್ ತರಬೇತಿಗೆ ಇಲ್ಲಿವರೆಗೆ ಸುಮಾರು ಐವತ್ತು ಲಕ್ಷ ಮಂದಿ ನೋಂದಣಿ ಮಾಡಿಸಿಕೊಂಡು ತರಬೇತಿ ಪಡೆದಿದ್ದಾರೆ. ಜೀವನದಲ್ಲಿ ಕ್ಷೇಮವಾಗಿರುವುದಕ್ಕೂ ತರಬೇತಿ ಆರಂಭವಾಗಿದೆ ಹಾಗೂ ಅದಕ್ಕೆ ಅತ್ಯಂತ ಬೇಡಿಕೆಯಿದೆ ಎನ್ನುವುದು ಜೀವನದಲ್ಲಿ ನೆಮ್ಮದಿ, ಸಂತೋಷ ಹಾಗೂ ತೃಪ್ತಿ ಪಡೆದುಕೊಳ್ಳುವ ಮನುಷ್ಯನ ಚಡಪಡಿಕೆಯ ಪ್ರಮಾಣವನ್ನು ಊಹಿಸಿಕೊಳ್ಳಬಹುದು.

ಇಂತಹ ಮನಃಸ್ಥಿತಿಯ ಹೊಯ್ದಾಟದಲ್ಲಿರುವವರ ಕಣ್ಣೆದುರಿಗೆ ಸುಲಭವಾಗಿ ಕಾಣುವುದು, ಸಾಮಾಜಿಕ ಜಾಲತಾಣದಲ್ಲಿ ಕಂಡು ಬರುವ ಸಂತೋಷದ ಮಾದರಿಗಳು ಆ ಪರಿಕಲ್ಪನೆಯಲ್ಲಿಯೇ ಸಂತೋಷದ ಹುಡುಕಾಟ, ನೆಮ್ಮದಿಗಾಗಿ ಅಲೆದಾಟ. ಈ ಅನ್ವೇಷಣೆಯ ದಾರಿಯಲ್ಲಿ ನಮ್ಮೆದುರಿಗೆ ತೆರೆದುಕೊಳ್ಳುವುದು ಸಂತೋಷವನ್ನು ತಂದುಕೊಡುವ ವ್ಯವಹಾರದ ಮಾದರಿಗಳು. ಮಾಸ್ಟರ್‌ಕ್ಲಾಸ್‌ಗಳು, ಡೊಪೋಮಿನ್ ಹೆಚ್ಚಿಸಲು ಬಳಸಬಹುದಾದ ವೈದ್ಯಕೀಯ ಉತ್ಪನ್ನಗಳು, ಧನಾತ್ಮಕ ಚಿಂತನೆ ಹೆಚ್ಚಿಸುವ ವ್ಯಾಯಾಮಗಳು, ಆಹಾರೋತ್ಪನ್ನಗಳು, ಸುಂದರವಾಗಿ ಕಾಣಿಸುವುದರಿಂದ ಆನಂದವಾಗಿರಬಹುದು ಎನ್ನುವುದಕ್ಕೆ, ಜಿಮ್ ಸೇರಿದಂತೆ ದೇಹಕ್ಕೆ ಕಸರತ್ತು ನೀಡುವ ತರಬೇತಿ ಕೇಂದ್ರಗಳ ಜಾಹಿರಾತುಗಳು ಇತ್ಯಾದಿ. ಒಟ್ಟಿನಲ್ಲಿ ಸಂತೋಷ ಪಡೆಯುವುದಕ್ಕೆ ಹಲವಾರು ಪರಿಹಾರೋಪಾಯಗಳು, ಶಾಂತಿ ನೆಮ್ಮದಿ ಪ್ರವಾಸಿ ತಾಣಗಳಲ್ಲಿವೆ, ಹಸಿರು ಪರಿಸರದಲ್ಲಿದೆ, ನದಿ, ಬೆಟ್ಟಗುಡ್ಡಗಳಲ್ಲಿದೆ ಎನ್ನುವ ಟ್ರಾವೆಲಿಂಗ್ ಪ್ರಚಾರಗಳು. ಆದರೆ ಅದನ್ನು ಪಡೆದುಕೊಳ್ಳಲು ಮತ್ತದೇ ಹಣವೆಂಬ ಅಸ್ತ್ರ. ಒಂದು ಅಂಕಿಅಂಶದ ಪ್ರಕಾರ 200 ಬಿಲಿಯನ್ ಹ್ಯಾಪಿನೆಸ್, 2 ಮಿಲಿಯನ್ ಹ್ಯಾಪಿನೆಸ್ ಇಸ್ ಚಾಯ್ಸ್ ಎನ್ನುವ ಇನ್‌ಸ್ಟಾಗ್ರಾಂ ಪೋಸ್ಟ್‌ಗಳಿವೆ. ಇತರ ಸಾಮಾಜಿಕ ಜಾಲತಾಣಗಳೇನು ಕಡಿಮೆ ಇಲ್ಲ. ಮನುಷ್ಯ ಹೇಗೆ ಸಂತೋಷ ವಾಗಿರಬಹುದು, ನೆಮ್ಮದಿ ಪಡೆದುಕೊಳ್ಳಬಹುದು ಎನ್ನುವುದರ ಬಗೆಗೆ ಸಂದೇಶಗಳು ಲೆಕ್ಕವಿಲ್ಲದಷ್ಟು. ದಾರ್ಶನಿಕರು ಹೇಳುವಂತೆ ಸಂತೋಷ ಬೇರೆಲ್ಲೂ ಇಲ್ಲ ನಮ್ಮೊಳಗೇ ಇದೆ ಎನ್ನುವುದನ್ನು ಸಾವಿರಾರು ಜನರು ಹಲವಾರು ರೀತಿಯಲ್ಲಿ ಹೇಳುವ ಸಂದೇಶಗಳೂ ಇವೆ. ಆದರೂ ಗಿಟ್ಟಿಸಿಕೊಳ್ಳುವಲ್ಲಿ ಎಡವುತ್ತಿದ್ದೇವೆ. ಸಂತೋಷ ಸಣ್ಣಸಣ್ಣ ವಿಚಾರಗಳಲ್ಲಿವೆ, ಅದು ದಿನನಿತ್ಯದ ನಿರಂತರ ಪ್ರಕ್ರಿಯೆ ಎನ್ನುವುದು ಮರೆತೇ ಬಿಡುತ್ತೇವೆ. ನಮಗೆಲ್ಲ ಸಂತೋಷವೆಂದರೆ ಅದೊಂದು ಗುರಿ. ಅದರೆಡೆಗೆ ಗಂಭೀರವಾಗಿ ಯೋಚಿಸುತ್ತೇವೆ, ಯೋಜಿಸುತ್ತೇವೆ, ಕೂಡಿಡುತ್ತೇವೆ. ಈ ಪ್ರಕ್ರಿಯೆಯಲ್ಲಿ ಹಲವನ್ನು ಕಳೆದುಕೊಳ್ಳುತ್ತೇವೆ. ಸಂತೋಷದ ಪರಿಕಲ್ಪನೆಯ ಮಾದರಿಯನ್ನು ಮುಂದಿಡುವ ಮಾರುಕಟ್ಟೆ ಬೆಳೆಯುತ್ತಲೇ ಇದೆ.

(ಲೇಖಕರು: ಸಿವಿಲ್ ಎಂಜಿನೀಯರ್ ಹಾಗೂ ಹವ್ಯಾಸಿ ಬರಹಗಾರರು)

ಕುಟುಂಬ ಯೋಜನೆ ಪಯಣ: ನಿರ್ಣಾಯಕ ಕ್ಷಣಗಳು, ಭವಿಷ್ಯದ ಸವಾಲುಗಳು

ಯೋಜನೆ-ಯೋಚನೆ
ಜಗತ್ ಪ್ರಕಾಶ್ ನಡ್ಡಾ
vveditoped@gmail.com

ವಿಶ್ವ ಜನಸಂಖ್ಯಾ ದಿನದಂದು (ಜುಲೈ 11), ನಾವು ಕುಟುಂಬ ಯೋಜನೆಯಲ್ಲಿ ಭಾರತದ ಅದ್ಭುತ ಪ್ರಯಾಣವನ್ನು ಪ್ರತಿಬಿಂಬಿಸುತ್ತೇವೆ. ನಾವು ನಮ್ಮ ಯಶಸ್ಸನ್ನು ಸಂಭ್ರಮಿಸುತ್ತೇವೆ, ಭರವಸೆಯಿಂದ ತುಂಬಿದ ಭವಿಷ್ಯಕ್ಕಾಗಿ ಎದುರುನೋಡುತ್ತೇವೆ ಮತ್ತು ಮುಂದಿನ ಸವಾಲುಗಳನ್ನು ಎದುರಿಸಲು ನಮ್ಮ ಬದ್ಧತೆಯನ್ನು ಪುನರುಚ್ಚರಿಸುತ್ತೇವೆ.

ಭಾರತದ ನಾಯಕತ್ವ ಮತ್ತು ಪ್ರಗತಿ

ಮೇ 2024 ರಲ್ಲಿ ವಿಶ್ವಸಂಸ್ಥೆಯ ಜನಸಂಖ್ಯಾ ಅಭಿವೃದ್ಧಿಯ ಅಂತಾರಾಷ್ಟ್ರೀಯ ಸಮ್ಮೇಳನದ (ಐಸಿಪಿಡಿ) 30 ನೇ ಸಮಾವೇಶದಲ್ಲಿ ಅನುಮೋದಿಸಿದಂತೆ, ಭಾರತವು ಐಸಿಪಿಡಿ ಕಾರ್ಯಸೂಚಿಗೆ ದೃಢವಾಗಿ ನಾಯಕತ್ವವನ್ನು ಒದಗಿಸಿರುವುದು ಮಾತ್ರವಲ್ಲದೆ ಸುಧಾರಿತ ಕುಟುಂಬ ಯೋಜನೆ ಸೇವೆ ಮತ್ತು ಆರೋಗ್ಯದ ಫಲಿತಾಂಶಗಳನ್ನು ಸುಧಾರಿಸುವ ಮೂಲಕ, ವಿಶೇಷವಾಗಿ ತಾಯಿ ಮತ್ತು ಮಕ್ಕಳ ಆರೋಗ್ಯದ ಮೂಲಕ ವಾಸ್ತವದಲ್ಲಿ ಮಹತ್ತರವಾದ ಪ್ರಗತಿಯನ್ನು ಪ್ರದರ್ಶಿಸಿದೆ.

ಜನಸಂಖ್ಯಾ ಬದಲಾವಣೆಗಳಿಗೆ ಪ್ರತಿಕ್ರಿಯಿಸುವುದು

ಭಾರತದಲ್ಲಿ ಮಿಲೇನಿಯಲ್ ಮಹಿಳೆಯರು ಸರಾಸರಿ ಎರಡು ಮಕ್ಕಳಿರುವ ಪುಟ್ಟ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಈ ಪ್ರವೃತ್ತಿಯು ಕಳೆದ ದಶಕದಲ್ಲಿ ಆಗಿರುವ ಗಮನಾರ್ಹ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ, ಈ ಸಮಯದಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರು (ಶೇ.57) ತಮ್ಮ ಸಂತಾನೋತ್ಪತ್ತಿ ವಯಸ್ಸಿನಲ್ಲಿ (15 ರಿಂದ 49 ವರ್ಷಗಳು) ಆಧುನಿಕ ಗರ್ಭನಿರೋಧಕವನ್ನು ಸಕ್ರಿಯವಾಗಿ ಬಳಸುತ್ತಾರೆ. ಗರ್ಭನಿರೋಧಕದ ಈ ವ್ಯಾಪಕ ಬಳಕೆಯು ಭಾರತದ ಕುಟುಂಬ ಯೋಜನೆ ಕಾರ್ಯಕ್ರಮದ ಯಶಸ್ಸನ್ನು ಎತ್ತಿ ತೋರಿಸುತ್ತದೆ. ಆದಾಗ್ಯೂ, ಕುಟುಂಬ ಯೋಜನೆ ಕೇವಲ ಗರ್ಭನಿರೋಧಕಕ್ಕಿಂತ ಹೆಚ್ಚಿನದಾಗಿದೆ; ಇದು ಮಹಿಳೆಯರು, ಕುಟುಂಬಗಳು ಮತ್ತು ಸಮುದಾಯಗಳ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಅವಿಭಾಜ್ಯವಾಗಿದೆ. ಇದು ಮಹಿಳೆಯರು, ಹೆಣ್ಣುಮಕ್ಕಳು ಮತ್ತು ಯುವಜನರಿಗೆ ಹಕ್ಕುಗಳು ಮತ್ತು ಆಯ್ಕೆಗಳನ್ನು ಒದಗಿಸುವ ಮೂಲಕ ಅವರನ್ನು ಸಬಲಗೊಳಿಸುತ್ತದೆ. 10-24 ವರ್ಷ ವಯಸ್ಸಿನ 369 ಮಿಲಿಯನ್ ಯುವಜನರೊಂದಿಗೆ, ಭಾರತವು ಜನಸಂಖ್ಯಾ ಪರಿವರ್ತನೆಯ ಹಂತದಲ್ಲಿದೆ, ವಿಕಸಿತ ಭಾರತದ ಕನಸನ್ನು ನನಸಾಗಿಸಲು ಸಿದ್ಧವಾಗಿದೆ.

ಇದಲ್ಲದೆ, ಹಲವು ದಶಕಗಳಲ್ಲಿ, ಕಾರ್ಯಕ್ರಮವು ಗಮನಾರ್ಹವಾಗಿ ವಿಕಸನಗೊಂಡಿದೆ, ಕ್ಲಿನಿಕ್ ಆಧಾರಿತದಿಂದ ಗುರಿ-ಆಧಾರಿತ ವಿಧಾನಗಳವರೆಗೆ ಮತ್ತು ಈಗ ಕುಟುಂಬ ಯೋಜನೆ ಆಯ್ಕೆಗಳ ಸ್ವಯಂಪ್ರೇರಿತ ಅಳವಡಿಕೆಯವರೆಗೆ ಕುಟುಂಬ ಯೋಜನೆಯು ವಿವಿಧ ವಿಧಾನಗಳನ್ನು ಅಳವಡಿಸಿಕೊಂಡಿದೆ. ಈ ಬದಲಾವಣೆಯು ಜನಸಂಖ್ಯೆಯ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಲು ನೀತಿಗಳ ರೂಪಾಂತರವನ್ನು ಪ್ರತಿನಿಧಿಸುತ್ತದೆ.

ರಾಷ್ಟ್ರೀಯ ಜನಸಂಖ್ಯಾ ಮತ್ತು ಆರೋಗ್ಯ ನೀತಿಗಳು ಕುಟುಂಬ ಯೋಜನೆಗೆ ಈಡೇರದ ಅಗತ್ಯಗಳನ್ನು ಪರಿಹರಿಸುವ ಅವಶ್ಯಕತೆಯನ್ನು ಒತ್ತಿಹೇಳುತ್ತವೆ, ಇದನ್ನು ಮಕ್ಕಳನ್ನು ಹೊಂದಲು ಬಯಸದ ಅಥವಾ ಮಗುವನ್ನು ಹೆರುವುದನ್ನು ವಿಳಂಬಗೊಳಿಸಲು ಬಯಸುವ ಆದರೆ ಯಾವುದೇ ಗರ್ಭನಿರೋಧಕ ವಿಧಾನವನ್ನು ಬಳಸದ ಮಹಿಳೆಯರ ಶೇಕಡಾವಾರು ಎಂದು ವ್ಯಾಖ್ಯಾನಿಸಲಾಗಿದೆ. ಕುಟುಂಬ ಯೋಜನೆ 2020 ಮತ್ತು ಈಗ ಕುಟುಂಬ ಯೋಜನೆ 2030 ಮೂಲಕ ಕುಟುಂಬ ಯೋಜನೆಗೆ ಜಾಗತಿಕ ಒತ್ತು ನೀಡುವುದರ ಜೊತೆಗೆ ಸಂತಾನೋತ್ಪತ್ತಿ, ತಾಯಿ, ನವಜಾತ ಶಿಶು, ಮಗು ಮತ್ತು ಹದಿಹರೆಯದವರ ಆರೋಗ್ಯ (RMNCH+A) ವಿಧಾನದ ಸಾಂಸ್ಥಿಕೀಕರಣದೊಂದಿಗೆ ಕಾರ್ಯಕ್ರಮವು 2012 ರಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಜಾಗೃತಿ ಮೂಡಿಸುವುದು, ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುವುದು, ಮಾಹಿತಿ ಮತ್ತು ಸೇವೆಗಳಿಗೆ ಪ್ರವೇಶವನ್ನು ಸುಧಾರಿಸುವುದು, ಗರ್ಭನಿರೋಧಕ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತರಿಸುವುದು, ಕಟ್ಟ ಕಡೆಯವರೆಗೂ ವಿತರಿಸಲಾದ ಸೇವೆಗಳ ಗುಣಮಟ್ಟದ ಭರವಸೆಯನ್ನು ಖಾತ್ರಿಪಡಿಸುವುದು ಮತ್ತು ಹೆಚ್ಚಿನ ಫಲವತ್ತತೆಯ ಪ್ರದೇಶಗಳಲ್ಲಿ ನವೀನ ತಂತ್ರಗಳನ್ನು ಅನುಷ್ಠಾನಗೊಳಿಸುವುದು ಮುಂತಾದ ವಿಷಯಗಳ ಮೇಲೆ ಇದು ಗಮನ ಕೇಂದ್ರೀಕರಿಸಿದೆ.

ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯು ಜನಸಂಖ್ಯೆಯ ಅಂಕಿಅಂಶಗಳಿಗೆ ಸಂಬಂಧಿಸಿದೆ. ರಾಷ್ಟ್ರೀಯ ಮತ್ತು ಉಪ-ರಾಷ್ಟ್ರೀಯವಾಗಿ ಫಲವತ್ತತೆಯ ಬದಲಿ ಮಟ್ಟವನ್ನು ನಿರ್ವಹಿಸುವುದು ಮತ್ತು ಸಾಧಿಸುವುದು ಗುರಿಯಾಗಿದೆ. ಭಾರತವು ಈಗಾಗಲೇ ರಾಷ್ಟ್ರೀಯ ಮಟ್ಟದಲ್ಲಿ (TFR 2.0) ಫಲವತ್ತತೆಯ ಬದಲಿ ಮಟ್ಟವನ್ನು ಸಾಧಿಸಿದೆ ಮತ್ತು NFHS-5 (2019-21) ರ ಪ್ರಕಾರ 31 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಈಗಾಗಲೇ ಈ ಮೈಲಿಗಲ್ಲನ್ನು ಸಾಧಿಸಿವೆ ಮತ್ತು ಅದರ ಪ್ರಯಾಣದಲ್ಲಿ ಯಶೋಗಾಥೆಯನ್ನು ಬರೆದಿವೆ.

ಇದರೊಂದಿಗೆ ಕುಟುಂಬ ಯೋಜನೆಯು ತಾಯಿ ಮತ್ತು ಮಕ್ಕಳ ರೋಗ ಮತ್ತು ಮರಣವನ್ನು ಕಡಿಮೆ ಮಾಡಲು ಜಾಗತಿಕವಾಗಿ ಗುರುತಿಸಲ್ಪಟ್ಟಿದೆ ಮತ್ತು ಕಾರ್ಯಕ್ರಮದ ಪ್ರಮುಖ ಅಂಶವೆಂದರೆ ತಾಯಿ ಮತ್ತು ಮಕ್ಕಳ ಆರೋಗ್ಯವನ್ನು ಸುಧಾರಿಸುವತ್ತ ಗಮನಹರಿಸಿದೆ, ಇದು ಒಟ್ಟಾರೆ ನೀತಿ ಉದ್ದೇಶಗಳನ್ನು ಸಮಗ್ರ ರೀತಿಯಲ್ಲಿ ವಿಸ್ತರಿಸಿದೆ.

ಭಾರತದ ರಾಜ್ಯಗಳ ಜನಸಂಖ್ಯಾ ವೈವಿಧ್ಯತೆಯು ವಿಶ್ವದಲ್ಲೇ ವಿಶಿಷ್ಟವಾಗಿದೆ ಮತ್ತು ಕುಟುಂಬ ಯೋಜನೆ ಕಾರ್ಯತಂತ್ರಗಳನ್ನು ಅದಕ್ಕೆ ಅನುಗುಣವಾಗಿ ಅಳವಡಿಸಿಕೊಳ್ಳಲಾಗಿದೆ. ಲಭ್ಯವಾಗುವ ಗರ್ಭನಿರೋಧಕ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತರಿಸುವುದರ ಜತೆಗೆ, ಕಾರ್ಯತಂತ್ರವು ಮದುವೆಯ ವಯಸ್ಸು, ಮೊದಲ ಹೆರಿಗೆ ಸಮಯದಲ್ಲಿನ ವಯಸ್ಸು ಮತ್ತು ಹೆಣ್ಣುಮಕ್ಕಳ ಶೈಕ್ಷಣಿಕ ಸಾಧನೆಯಂತಹ ಸಾಮಾಜಿಕ ಸಮಸ್ಯೆಗಳಿಗೆ ಗಮನಾರ್ಹವಾದ ಪರಿಗಣನೆಯನ್ನು ನೀಡುತ್ತದೆ. ರಾಷ್ಟ್ರದ ವೈವಿಧ್ಯಮಯ ಅಗತ್ಯಗಳನ್ನು ಪರಿಹರಿಸುವ ಕುಟುಂಬ ಯೋಜನೆಗೆ ಸಮಗ್ರ ವಿಧಾನವನ್ನು ರಚಿಸಲು ಈ ಅಂಶಗಳು ನಿರ್ಣಾಯಕವಾಗಿವೆ.

ಮಿಷನ್ ಪರಿವಾರ್ ವಿಕಾಸ್ (MPV): ಕುಟುಂಬ ಯೋಜನೆಯನ್ನು ಪರಿವರ್ತಿಸುವುದು

ಮಿಷನ್ ಪರಿವಾರ್ ವಿಕಾಸ್, ಭಾರತ ಸರಕಾರದ ಪ್ರಮುಖ ಕುಟುಂಬ ಯೋಜನೆ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಇದನ್ನು ಏಳು ರಾಜ್ಯಗಳ (ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಛತ್ತೀಸಗಢ, ಜಾರ್ಖಂಡ್ ಮತ್ತು ಅಸ್ಸಾಂ) ಸಂತಾನೋತ್ಪತ್ತಿ ಪ್ರಮಾಣ ಹೆಚ್ಚಿರುವ 146 ಜಿಲ್ಲೆಗಳಲ್ಲಿ ಗರ್ಭನಿರೋಧಕಗಳು ಮತ್ತು ಕುಟುಂಬ ಯೋಜನೆ ಸೇವೆಗಳ ಲಭ್ಯತೆಯನ್ನು ಹೆಚ್ಚಿಸಲು 2016 ರಲ್ಲಿ ಪ್ರಾರಂಭಿಸಲಾಯಿತು.

ಯುವತಿಯರಿಗೆ ಗರ್ಭನಿರೋಧಕಗಳು ದೊರೆಯುವಲ್ಲಿ ಇರುವ ಸಾಮಾಜಿಕ ಅಡೆತಡೆಗಳನ್ನು ಪರಿಹರಿಸಲು ಸಾರಥಿ ವಾಹನಗಳು (ಗಾಲಿಗಳ ಮೇಲೆ ಜಾಗೃತಿ), ಅತ್ತೆ-ಸೊಸೆ ಸಮ್ಮೇಳನಗಳನ್ನು ಬಳಸಿಕೊಂಡು ಜಾಗೃತಿ ಮೂಡಿಸಲು ಮತ್ತು ನವವಿವಾಹಿತರಿಗೆ ಕುಟುಂಬ ಯೋಜನೆ ಮತ್ತು ಜವಾಬ್ದಾರಿಯುತ ಪೋಷಕರ ಅಭ್ಯಾಸಗಳ ಬಗ್ಗೆ ನಯೀ ಪಹೆಲ್ ಕಿಟ್‌ಗಳ ಮೂಲಕ ಜಾಗೃತಿ ಮೂಡಿಸಲು ಪರಿವರ್ತಕ ವಿಧಾನವನ್ನು ಇದು ಹೊಂದಿದೆ. ಅದೇ ಸಮಯದಲ್ಲಿ, ದೃಢವಾದ ಕುಟುಂಬ ಯೋಜನೆ ಲಾಜಿಸ್ಟಿಕ್ಸ್ ನಿರ್ವಹಣೆ ಮಾಹಿತಿ ವ್ಯವಸ್ಥೆಯನ್ನು ಬಳಸಿಕೊಂಡು ಗುಣಮಟ್ಟದ ಸೇವೆಗಳು ಮತ್ತು ಗರ್ಭನಿರೋಧಕಗಳ ತಡೆರಹಿತ ಪೂರೈಕೆಗಳನ್ನು ಒದಗಿಸಲು ಆರೋಗ್ಯ ವ್ಯವಸ್ಥೆಯು ಸಜ್ಜಾಗಿದೆ.

ಕಾರ್ಯಕ್ರಮದ ಜಿಲ್ಲೆಗಳಲ್ಲಿ ಆಧುನಿಕ ಗರ್ಭನಿರೋಧಕಗಳ ಸೇವನೆಯು ಗಮನಾರ್ಹವಾಗಿ ಸುಧಾರಿಸಿದೆ, ಮಿಷನ್ ಪರಿವಾರ್ ವಿಕಾಸ್ (ಎಂಪಿವಿ) ಮಧ್ಯಸ್ಥಿಕೆಗಳ ಧನಾತ್ಮಕ ಪರಿಣಾಮವನ್ನು ಸೂಚಿಸುತ್ತಿದೆ. ಎಂಪಿವಿ ಜಿಲ್ಲೆಗಳಲ್ಲಿ ಆಧುನಿಕ ಗರ್ಭನಿರೋಧಕಗಳ ಬಳಕೆಯಲ್ಲಿನ ಈ ಸುಧಾರಣೆಗಳು 2021ರಲ್ಲಿ ಏಳು ರಾಜ್ಯಗಳ ಎಲ್ಲಾ ಜಿಲ್ಲೆಗಳು ಮತ್ತು ಆರು ಈಶಾನ್ಯ ರಾಜ್ಯಗಳಿಗೆ ಈ ಕಾರ್ಯಕ್ರಮವನ್ನು ಹೆಚ್ಚಿಸುವ ಸರಕಾರದ ನಿರ್ಧಾರಕ್ಕೆ ಕಾರಣವಾಯಿತು.

ರಾಷ್ಟ್ರೀಯ ಕುಟುಂಬ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಆಯ್ಕೆಯ ಅವಕಾಶವನ್ನು ವಿಸ್ತರಿಸುವುದು:

ಬದಲಾಗುತ್ತಿರುವ ಜನಸಂಖ್ಯಾಶಾಸ್ತ್ರ ಮತ್ತು ಅಗತ್ಯಗಳನ್ನು ಹೊಂದಿಸಲು, 2016-17ನೇ ಹಣಕಾಸು ವರ್ಷದಲ್ಲಿ ಗರ್ಭನಿರೋಧಕ ಆಯ್ಕೆಗಳನ್ನು ವಿಸ್ತರಿಸಲಾಗಿದೆ. ಪ್ರಸ್ತುತ, ರಾಷ್ಟ್ರೀಯ ಯೋಜನಾ ಕಾರ್ಯಕ್ರಮವು, ಕಾಂಡೋಮ್, ಗರ್ಭಾಶಯದ ಗರ್ಭನಿರೋಧಕ ಸಾಧನಗಳು, ಗರ್ಭನಿರೋಧಕ ಮಾತ್ರೆಗಳು, ಎಂಪಿಎ ಚುಚ್ಚುಮದ್ದು ಇತ್ಯಾದಿಗಳನ್ನು ಒಳಗೊಂಡಿರುವ ವಿವಿಧ ಆಧುನಿಕ ಗರ್ಭನಿರೋಧಕಗಳನ್ನು ನೀಡುತ್ತದೆ. 10 ರಾಜ್ಯಗಳಲ್ಲಿ, ತಲಾ ಎರಡು ಜಿಲ್ಲೆಗಳನ್ನು ಒಳಗೊಂಡಂತೆ, ಸಬ್ಡರ್ಮಲ್ ಇಂಪ್ಲಾಂಟ್ ಗಳು ಮತ್ತು ಸಬ್ಕ್ಯುಟೇನಿಯಸ್ ಇಂಜೆಕ್ಷನ್‌ಗಳು (ಅಂತರ-ಎಸ್ಸಿ) ಆರಂಭಿಕ ಹಂತದಲ್ಲಿವೆ, ಮುಂಬರುವ ವರ್ಷಗಳಲ್ಲಿ ದೇಶಾದ್ಯಂತ ವಿಸ್ತರಿಸುವ ಯೋಜನೆಯಿದೆ.

ಕ್ರಮಕ್ಕೆ ಕರೆ

ನಾವು 2024 ರ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುವಾಗ, ತಾಯಿ ಮತ್ತು ಮಗುವಿನ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಗರ್ಭಾವಸ್ಥೆಯ ಆರೋಗ್ಯಕರ ಸಮಯ ಮತ್ತು ಅಂತರ ಎಂಬ ವಿಷಯ ಕುರಿತು ನಾವು ನಮ್ಮ ರಾಜ್ಯಗಳ ಪ್ರಯತ್ನಗಳನ್ನು ಮತ್ತು ಎಎನ್‌ಎಮ್‌ಗಳು, ಆಶಾಗಳು ಮತ್ತು ನಿರ್ಣಾಯಕ ಮಾಹಿತಿ ಮತ್ತು ಸೇವೆಗಳನ್ನು ತಲುಪಿಸುವಲ್ಲಿ ಮುಂಚೂಣಿಯಲ್ಲಿರುವ ಇತರ ತಳಮಟ್ಟದ ಕಾರ್ಯಕರ್ತರು ಸೇರಿದಂತೆ ನಮ್ಮ ಆರೋಗ್ಯ ಕಾರ್ಯಪಡೆಯ ನಿರಂತರ ಸಮರ್ಪಣೆಯನ್ನು ಶ್ಲಾಘಿಸುತ್ತೇವೆ. ಜಗತ್ತಿನಲ್ಲಿರುವ ಯುವಜನರು, ಹದಿಹರೆಯದವರು, ಮಹಿಳೆಯರು ಮತ್ತು ಮಕ್ಕಳು ಗಮನಾರ್ಹ ಸಂಖ್ಯೆಯಲ್ಲಿ ನಮ್ಮ ದೇಶದಲ್ಲಿ ವಾಸಿಸುತ್ತಿದ್ದಾರೆ. ಇದು ನಮಗೆ ಜನಸಂಖ್ಯಾ ಲಾಭಾಂಶದ ಅನನ್ಯ ಕೊಡುಗೆಯನ್ನು ನೀಡುತ್ತದೆ ಹಾಗೂ ನಮ್ಮ ಜನರ ಆರೋಗ್ಯ ಮತ್ತು ಯೋಗಕ್ಷೇಮದಲ್ಲಿ ಹೂಡಿಕೆ ಮಾಡುವ ನಿರ್ಣಾಯಕ ಅಗತ್ಯವನ್ನು ಎತ್ತಿ ತೋರಿಸುತ್ತದೆ.

ಗುಣಮಟ್ಟದ ಆರೋಗ್ಯ ಸೇವೆಗಳು ಮತ್ತು ವ್ಯಾಪಕ ಶ್ರೇಣಿಯ ಗರ್ಭನಿರೋಧಕಗಳ ಪ್ರವೇಶವು ನಿರ್ಣಾಯಕವಾಗಿದೆ. ಗರ್ಭನಿರೋಧಕ ವಿಧಾನಗಳ ಬಗ್ಗೆ ತಪ್ಪು ಕಲ್ಪನೆಗಳು, ಗ್ರಾಹಕರಲ್ಲಿ ಅರಿವಿನ ಕೊರತೆ, ಭೌಗೋಳಿಕ ಮತ್ತು ಆರ್ಥಿಕ ಸವಾಲುಗಳು ಮತ್ತು ನಿರ್ಬಂಧಿತ ಸಾಮಾಜಿಕ ಮತ್ತು ಸಾಂಸ್ಕೃತಿಕ ರೂಢಿಗಳನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ. ತಾತ್ಕಾಲಿಕ ಮತ್ತು ದೀರ್ಘಾವಧಿಯ ಗರ್ಭನಿರೋಧಕ ವಿಧಾನಗಳ ಲಭ್ಯತೆ, ಸಾಕಷ್ಟು ಹಣ ಹಂಚಿಕೆ ಮತ್ತು ಆರೋಗ್ಯ ಸೌಲಭ್ಯಗಳಲ್ಲಿ ಮತ್ತು ಸಮುದಾಯ ಕಾರ್ಯಕರ್ತರ ಮೂಲಕ ತಡೆರಹಿತ ಸರಬರಾಜುಗಳನ್ನು ನಿರ್ವಹಿಸುವುದು ಸೇರಿದಂತೆ ಕುಟುಂಬ ಯೋಜನೆ ಸೇವೆಯನ್ನು ಸುಧಾರಿಸಲು ಗಣನೀಯ ಹೂಡಿಕೆಗಳನ್ನು ಮಾಡಲಾಗುತ್ತಿದೆ. ಹೆಚ್ಚುವರಿಯಾಗಿ, ಆಯುಷ್ಮಾನ್ ಆರೋಗ್ಯ ಮಂದಿರಗಳ ಮೂಲಕ ಕುಟುಂಬ ಯೋಜನೆ ಸೇವೆಗಳನ್ನು ಕೊನೆಯ ಮೈಲಿಯವರೆಗೆ ವಿಸ್ತರಿಸಲಾಗುತ್ತಿದೆ. ಡಿಜಿಟಲ್ ಜಗತ್ತಿನ ಕ್ಷಿಪ್ರ ವಿಕಸನವನ್ನು ಗಮನಿಸಿದರೆ, ಮಾಹಿತಿ ಮತ್ತು ಸೇವೆಗಳ ಪ್ರವೇಶದ ವಿಷಯದಲ್ಲಿ ಯಾರೂ ಹಿಂದುಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ನಮ್ಮ ದೃಷ್ಟಿಕೋನವನ್ನು ಸಂಪರ್ಕಿಸಲು ಮತ್ತು ಪ್ರಸಾರ ಮಾಡಲು ಅವಕಾಶವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸರಕಾರವು ಬದ್ಧವಾಗಿದೆ.

ನಮ್ಮ ಕುಟುಂಬ ಯೋಜನೆ ಗುರಿಗಳನ್ನು ಸಾಧಿಸಲು ಎಲ್ಲ ಭಾಗೀದಾರರಿಂದ ಸಹಯೋಗ ಮತ್ತು ಸಮರ್ಪಣೆಯ ಅಗತ್ಯವಿದೆ. ಗರ್ಭನಿರೋಧಕ ವಿಧಾನಗಳ ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ನಮ್ಮ ಯುವಜನರ ಸಂತಾನೋತ್ಪತ್ತಿ ಆರೋಗ್ಯಕ್ಕೆ ಆದ್ಯತೆ ನೀಡುವುದು ಅತ್ಯಗತ್ಯವಾಗಿದೆ. ಇದಲ್ಲದೆ, ಭಾರತದ ಜನಸಂಖ್ಯಾ ಲಾಭಾಂಶವು ಸುಸ್ಥಿರ ಅಭಿವೃದ್ಧಿ, ನಗರೀಕರಣ ಮತ್ತು ವಲಸೆಯ ಸಂಕೀರ್ಣತೆಗಳನ್ನು ಪತ್ತೆ ಹಚ್ಚಬೇಕು. ಈ ಅಂಶಗಳನ್ನು ನಮ್ಮ ನೀತಿಗಳಲ್ಲಿ ಸಂಯೋಜಿಸುವುದರಿಂದ ಜನಸಂಖ್ಯಾ ಬೆಳವಣಿಗೆಯು ಸುಸ್ಥಿರ ಭವಿಷ್ಯ ಮತ್ತು ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಂಡ ಸಮೃದ್ಧಿಗೆ ಕಾರಣವಾಗುತ್ತದೆ.

ಈ ವಿಶ್ವ ಜನಸಂಖ್ಯಾ ದಿನದಂದು, ಭಾರತದಾದ್ಯಂತ ವಂಚಿತ ಮತ್ತು ದುರ್ಬಲ ಸಮುದಾಯಗಳ ಮೇಲೆ ವಿಶೇಷ ಗಮನ ಹರಿಸುವುದರೊಂದಿಗೆ ಎಲ್ಲರಿಗೂ ಉಜ್ವಲ ಮತ್ತು ಆರೋಗ್ಯಕರ ಭವಿಷ್ಯವನ್ನು ರೂಪಿಸಲು ಪ್ರತಿಜ್ಞೆ ಮಾಡೋಣ. ಪ್ರತಿಯೊಬ್ಬ ನಾಗರಿಕರು ಗುಣಮಟ್ಟದ ಆರೋಗ್ಯ ಸೇವೆಗೆ ಪ್ರವೇಶವನ್ನು ಹೊಂದಿರುವ ಮತ್ತು ನಮ್ಮ ಜನರ ಆರೋಗ್ಯ ಮತ್ತು ಯೋಗಕ್ಷೇಮವು ನಮ್ಮ ರಾಷ್ಟ್ರದ ಪ್ರಗತಿ ಮತ್ತು ಸಮೃದ್ಧಿಗೆ ಅಡಿಪಾಯವಾಗಿರುವ ನಮ್ಮ ಜನಸಂಖ್ಯಾ ಲಾಭಾಂಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಭವಿಷ್ಯಕ್ಕಾಗಿ ನಾವು ಶ್ರಮಿಸೋಣ.

(ಲೇಖಕರು: ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ರಾಸಾಯನಿಕ ಹಾಗೂ ರಸಗೊಬ್ಬರಗಳ ಸಚಿವರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:201

ಸಮಾಚಾರ ಸಣ್ಣದಲ್ಲ

2 ಕಾರ್ಮಿಕರ ಸಾವು

ಥಾಣೆ: ಮಹಾರಾಷ್ಟ್ರದ ಥಾಣೆ ಜಿಲ್ಲೆ ಭಿವಂಡಿ ಪಟ್ಟಣದ ಸಾರವ್ಲಿಯಲ್ಲಿನ 'ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮ'(ಎಂಐಡಿಸಿ)ದಲ್ಲಿನ ಕಾರ್ಖಾನೆಯೊಂದರ ಡ್ರೈಯಿಂಗ್ ಘಟಕದಲ್ಲಿ ಬುಧವಾರ ಸಂಜೆ ದೊಡ್ಡ ಗಾತ್ರದ ಬಾಯ್ಲರ್ ಮೇಲೆತ್ತುವ ವೇಳೆ ಜಾರಿ ಬಿದ್ದಿದೆ. ಅದರಡಿ ಸಿಲುಕಿದ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತರನ್ನು ಬಲರಾಮ್ ಚೌಧರಿ(55) ಮತ್ತು ಪಾಂಡುರಂಗ ಪಾಟೀಲ್(65) ಎಂದು ಗುರುತಿಸಲಾಗಿದೆ. ಆಕಸ್ಮಿಕ ಸಾವಿನ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಎಲ್‌ಒಸಿ ಬಳಿ ಸ್ಫೋಟ: ಉಗ್ರರಿಗಾಗಿ ಶೋಧ

ರಜೌರಿ: ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ(ಎಲ್‌ಒಸಿ) ಕೆಲವೆಡೆ ಸ್ಫೋಟವಾಗಿದ್ದು, ಉಗ್ರರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಗಡಿ ಭದ್ರತಾ ಪಡೆ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಲಾಮ್ ಸೆಕ್ಟರ್‌ನಲ್ಲಿ, ಎಲ್‌ಒಸಿಯಲ್ಲಿ ಉಗ್ರರ ಓಡಾಟದ ಮಾಹಿತಿ ಬಂದಿದೆ. ಬುಧವಾರ ತಡರಾತ್ರಿ ಸ್ಫೋಟವಾಗಿದೆ. ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿ ಫಗ್ವಾರಿ ಪ್ರದೇಶದಲ್ಲಿ ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದ ವ್ಯಕ್ತಿಯನ್ನು ಗಡಿ ಭದ್ರತಾ ಪಡೆ ಯೋಧರು ಗುರುವಾರ ಬೆಳಗ್ಗೆ 11ರ ವೇಳೆ ಬಂಧಿಸಿದ್ದಾರೆ. ಮುಂದಿನ ಕ್ರಮಕ್ಕಾಗಿ ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ಬಿಹಾರ ನಳಂದಾ ಜಿಲ್ಲೆಯಲ್ಲಿ ಸೆರೆ | ಅರ್ಜಿ ವಿಚಾರಣೆ 18ಕ್ಕೆ: ಸುಪ್ರೀಂ

ನೀಟ್: ಮಾಸ್ಟರ್‌ಮೈಂಡ್ ರಾಕಿ ಸೆರೆ

ದೆಹಲಿ: ವೈದ್ಯಕೀಯ ಶಿಕ್ಷಣ ಪ್ರವೇಶದ 'ನೀಟ್ ಯುಜಿ-2024' ಪ್ರವೇಶ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದ ಸಂಚಿನ ಮುಖ್ಯ ಆರೋಪಿ ರಾಕೇಶ್ ರಂಜನ್‌ನನ್ನು ಕೇಂದ್ರ ತನಿಖಾ ದಳ(ಸಿಬಿಐ) ಗುರುವಾರ ಬಂಧಿಸಿದೆ.

ಬಿಹಾರದ ನಳಂದಾ ಜಿಲ್ಲೆಯಲ್ಲಿ ಅಡಗಿದ್ದ ಆರೋಪಿ ರಾಕಿಯನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ. ಈ ಬಂಧನಕ್ಕೂ ಮುನ್ನ ಸಿಬಿಐ ತಂಡ ಬಿಹಾರದ ಪಟನಾ, ಪಶ್ಚಿಮ ಬಂಗಾಳದ ಕೋಲ್ಕತ್ತ ಸೇರಿದಂತೆ ನಾಲ್ಕು ಸ್ಥಳಗಳಲ್ಲಿ ಆರೋಪಿ ರಾಕಿಗಾಗಿ ಶೋಧ ನಡೆಸಿತ್ತು. ಕಡೆಗೆ ನಳಂದಾ ಜಿಲ್ಲೆಯಲ್ಲಿ ನಡೆಸಿದ ದಾಳಿಯಲ್ಲಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಯಿತು. ಬಳಿಕ ಆರೋಪಿ ರಾಕಿಯನ್ನು ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ನ್ಯಾಯಾಲಯ ಆರೋಪಿ ಯನ್ನು 10 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಿ ಆದೇಶ ನೀಡಿದೆ. ಸಿಬಿಐ ರಾಕಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದೆ. ಇದರೊಂದಿಗೆ ಸಿಬಿಐನಿಂದ ಈ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 7ಕ್ಕೇರಿದೆ.

ಕೇಂದ್ರ ಸರಕಾರ ಪ್ರಮಾಣಪತ್ರ: ನೀಟ್ ಯುಜಿ 2024 ಪರೀಕ್ಷೆ ವೇಳೆ ಸಾಮೂಹಿಕ ನಕಲು ನಡೆದಿಲ್ಲ. ಹಾಗಾಗಿ, ಮರು ಪರೀಕ್ಷೆ ಅಗತ್ಯವಿಲ್ಲ.

ನೀಟ್ ಪರೀಕ್ಷೆ ಕುರಿತು ಐಐಟಿ ವಿಶೇಷ ದತ್ತಾಂಶ ಬಿಡುಗಡೆ ಮಾಡಿದೆ. ನೀಟ್ ಪರೀಕ್ಷೆ ವೇಳೆ ಸಾಮೂಹಿಕ ನಕಲು ನಡೆದಿಲ್ಲ ಎಂದು ವರದಿ ನೀಡಿದೆ. ಹಾಗಾಗಿ, ನೀಟ್ ಮರು ಪರೀಕ್ಷೆ ಅವಶ್ಯಕತೆ ಇಲ್ಲ. 24 ಲಕ್ಷ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ಹೊರೆ ಬೇಕಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ ಎಂದು ಹೇಳುವ ಸಮಯಕ್ಕೂ ಪರೀಕ್ಷೆ ನಡೆದ ಸಮಯಕ್ಕೂ ಹೆಚ್ಚೇನೂ ಅಂತರವಿಲ್ಲ. ಹಾಗಾಗಿ ಅದರ ಪರಿಣಾಮವೂ ದೊಡ್ಡದಾಗಿಯೇನೂ ಇರುವುದಿಲ್ಲ ಎಂಬ ಅಂಶಗಳಿರುವ ಪ್ರಮಾಣಪತ್ರವನ್ನು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ.

ವಿದ್ಯಾರ್ಥಿ ಅರ್ಜಿ; ಸುಪ್ರೀಂ ವಿಚಾರಣೆ 18ಕ್ಕೆ

ದೆಹಲಿ: ಜು.8ರಂದು ಸುಪ್ರೀಂ ಕೋರ್ಟ್ ನೀಡಿದ್ದ ಆದೇಶ ಸಂಬಂಧ ಕೇಂದ್ರ ಸರಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಗುರುವಾರ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರಗಳನ್ನು ಸಲ್ಲಿಸಿವೆ.

ಆದರೆ, ರಿಟ್ ಅರ್ಜಿ ಸಲ್ಲಿಸಿದ ಗುಜರಾತ್‌ನ 33 ವಿದ್ಯಾರ್ಥಿಗಳ ಪರ ವಕೀಲರಲ್ಲಿ ಕೆಲವರು ಪ್ರಮಾಣ ಪತ್ರಗಳ ಪ್ರತಿ ತಮಗೆ ದೊರಕಿಲ್ಲ ಎಂದು ಪೀಠದ ಗಮನಕ್ಕೆ ತಂದ ಬಳಿಕ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಪೀಠ ನೀಟ್-ಯುಜಿ 2024ರ ವೈದ್ಯಕೀಯ ಪ್ರವೇಶ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಸಂಬಂಧ ವಿದ್ಯಾರ್ಥಿಗಳು ಸಲ್ಲಿಸಿದ್ದ ವಿವಿಧ ಅರ್ಜಿಗಳ ವಿಚಾರಣೆಯನ್ನು ಜು.18ಕ್ಕೆ ಮುಂದೂಡಿತು.

ನೀಟ್ ಯುಜಿ ಪರೀಕ್ಷೆಯಲ್ಲಿ ಹಲವು ಅಕ್ರಮಗಳು ನಡೆದಿರುವುದರಿಂದ ಇಡೀ ಪರೀಕ್ಷಾ ಪ್ರಕ್ರಿಯೆಯನ್ನೇ ರದ್ದುಗೊಳಿಸಬೇಕು ಎಂದು ಕೆಲವು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರೆ, ಕೆಲವು ವಿದ್ಯಾರ್ಥಿಗಳು ಎನ್‌ಟಿಎ ಸಂಸ್ಥೆಯಲ್ಲಿ ಸುಧಾರಣೆ ಕ್ರಮಗಳ ಅಗತ್ಯವಿದೆ ಎಂದಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೆಲವು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ. ಎಲ್ಲಾ 33 ವಿದ್ಯಾರ್ಥಿಗಳ ಅರ್ಜಿಗಳ ವಿಚಾರಣೆಯನ್ನು ಪೀಠ 18ಕ್ಕೆ ಮುಂದೂಡಿದೆ. ಮೊದಲಿಗೆ ಪೀಠ ಜು.15ಕ್ಕೆ ವಿಚಾರಣೆ ದಿನ ನಿಗದಿಪಡಿಸಲು ಬಯಸಿತ್ತು. ಆದರೆ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಜು.15-16ರಂದು ವೈಯಕ್ತಿಕ ಕಾರಣಗಳಿಂದ ಕೋರ್ಟ್‌ಗೆ ಹಾಜರಾಗಲು ಆಗುವುದಿಲ್ಲ ಎಂದು ತಿಳಿಸಿದರು. ಜು.17 ಮೊಹರಂ. ಆ ಕಾರಣದಿಂದ 18ಕ್ಕೆ ವಿಚಾರಣೆ ಮುಂದೂಡಿತು.

ನೀಟ್ ವಿಶೇಷ

ದೇಶಾದ್ಯಂತ 571 ನಗರ, ದೇಶದಾಚೆ 14 ನಗರಗಳು ಸೇರಿದಂತೆ 4750 ಕೇಂದ್ರಗಳಲ್ಲಿ ಮೇ 5ರಂದು ನೀಟ್ ಯುಜಿ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆ 13 ಕನ್ನಡ, ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ನಡೆದಿದೆ. ನೀಟ್ ಪರೀಕ್ಷೆಗೆ 24.06 ಲಕ್ಷ ಮಂದಿ ನೋಂದಾಯಿಸಿಕೊಂಡರೂ 23.33 ಲಕ್ಷ ಮಂದಿ ಪರೀಕ್ಷೆ ಹಾಜರಾದರು.

ಸಚಿವರ ಭೇಟಿ, ಮನವಿ

ನೀಟ್ ಯುಜಿ ಪರೀಕ್ಷೆ ಅಕ್ರಮ ಹಿನ್ನೆಲೆ ವೈದ್ಯಕೀಯ ಶಿಕ್ಷಣ ಪ್ರವೇಶ ಆಕಾಂಕ್ಷಿ ವಿದ್ಯಾರ್ಥಿಗಳು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಗುರುವಾರ ಭೇಟಿಯಾದರು.

ನೀಟ್ ಪರೀಕ್ಷೆಯಲ್ಲಿ ಪಾರದರ್ಶಕತೆ ತರಬೇಕು, ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳ ಭವಿಷ್ಯ ದೃಷ್ಟಿಯಿಂದ ನೀಟ್ ಪರೀಕ್ಷೆ ನ್ಯಾಯಸಮ್ಮತವಾಗಿ ನಡೆಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಯಾಸಿನ್‌ಗೆ ಗಲ್ಲು ಕೋರಿಕೆ: ಹಿಂದೆ ಸರಿದ ನ್ಯಾ.ಶರ್ಮಾ

ದೆಹಲಿ: ಕಾಶ್ಮೀರದಲ್ಲಿ ಉಗ್ರಗಾಮಿಗಳಿಗೆ

ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಹಣದ ನೆರವು ನೀಡುತ್ತಿದ್ದ ಪ್ರತ್ಯೇಕವಾದಿ ಯಾಸೀನ್ ಮಲಿಕ್‌ಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಕೋರಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಸಲ್ಲಿಸಿದ್ದ ಅರ್ಜಿಯ ವಿಚಾರಣೆಯಿಂದ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಅಮಿತ್ ಶರ್ಮಾ ಹಿಂದೆ ಸರಿದಿದ್ದಾರೆ.

ನ್ಯಾ.ಪ್ರತಿಭಾ ಸಿಂಗ್ ನೇತೃತ್ವದ ವಿಭಾಗೀಯ ಪೀಠದಲ್ಲಿ ಎನ್‌ಐಎ ಸಲ್ಲಿಸಿದ್ದ ಅರ್ಜಿ ಗುರುವಾರ ವಿಚಾರಣೆಗೆ ಬಂದಾಗ ನ್ಯಾ.ಶರ್ಮಾ ಹಿಂದೆ ಸರಿಯುತ್ತಿರುವುದಾಗಿ ಹೇಳಿದರು. ಬಳಿಕ ನ್ಯಾ.ಪ್ರತಿಭಾ ಸಿಂಗ್ ಅವರು ಅರ್ಜಿಯನ್ನು ಆ.9ರಂದು ಬೇರೊಂದು ಪೀಠದಲ್ಲಿ ವಿಚಾರಣೆ ನಡೆಸಲಾಗುವುದು ಎಂದು ಹೇಳಿದರು.

ಆರೋಪಿ ಯಾಸಿನ್‌ನನ್ನು ಜೈಲಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರುಪಡಿಸಲಾಗಿತ್ತು.

ಯಾಸಿನ್ ವಿರುದ್ಧ ಯುಎಪಿಎ ಕಾಯ್ದೆಯಡಿ ಹೊರಿಸಿದ ಆರೋಪ ಈಗಾಗಲೇ ಸಾಬೀತಾಗಿದ್ದು, ವಿಚಾರಣಾ ನ್ಯಾಯಾಲಯ 2022ರಲ್ಲೇ ಜೀವಾವಧಿ ಶಿಕ್ಷೆ ವಿಧಿಸಿದೆ. ಆದರೆ, ಎನ್‌ಐಎ ಗಲ್ಲು ಶಿಕ್ಷೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಪುರಸಭಾ ಕಾರ್ಯಾಲಯ, ಚಿಕ್ಕನಾಯಕನಹಳ್ಳಿ

ನಂ.ಪು.ಚಿ:ತಾಂತ್ರಿಕ/10/204-25 ದಿನಾಂಕ: 11.07.2024

"ಅಲ್ಪಾವಧಿ ಟೆಂಡರ್ ಪ್ರಕಟಣೆ"

ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ SFC United 2022-23 AND MUNCIPAL FUND 2024-25ನೇ ಸಾಲಿನ ಯೋಜನೆಯಡಿ ತೆಗೆದುಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ನೊಂದಾಯಿತರಾದ ಹಾಗೂ ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ **ಇಂಡೆಂಟ್ ಸಂಖ್ಯೆ: SE3142,SE0485/CALL-2, SE1527/CALL-2**ರ ಟೆಂಡರ್‌ಗಳಿಗೆ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆಟಿಪಿಪಿ 2000 ರನ್ವಯ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in/ಮೂಲಕ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ www.chikkanayakanahallitown.gov.in ವೆಬ್‌ಸೈಟ್‌ನಲ್ಲಿ ನೋಡಬಹುದು ಮತ್ತು ಕಛೇರಿ ವೇಳೆಯಲ್ಲಿ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.

- **ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 20.07.2024 ಸಂಜೆ 5.00 ಗಂಟೆವರೆಗೆ**
- **ಭರ್ತಿ ಮಾಡಿದ ಟೆಂಡರ್ ಫಾರಂ ತೆರೆಯುವ ದಿನಾಂಕ: 21.07.2024 ಸಂಜೆ 5.05 ಗಂಟೆಗೆ**

ಸಹಿ/- ಆಡಳಿತಾಧಿಕಾರಿ ಪುರಸಭೆ, ಚಿಕ್ಕನಾಯಕನಹಳ್ಳಿ

ಸಹಿ/- ಮುಖ್ಯಾಧಿಕಾರಿ ಪುರಸಭೆ, ಚಿಕ್ಕನಾಯಕನಹಳ್ಳಿ

23ರಂದು ಸಂಸತ್‌ನಲ್ಲಿ ಬಜೆಟ್ ಮಂಡನೆ | ಮೋದಿ 3.0 ಸರಕಾರದ ಪ್ರಥಮ ಬಜೆಟ್

ಬಜೆಟ್ ಸಿದ್ಧತೆ: ತಜ್ಞರ ಜತೆ ಸಭೆ ನಡೆಸಿದ ಮೋದಿ

ದೆಹಲಿ: ಕೇಂದ್ರ ಸರಕಾರದ 2024-25ನೇ ಹಣಕಾಸು ವರ್ಷದ ಪೂರ್ಣ ಪ್ರಮಾಣದ ಮುಂಗಡಪತ್ರ ಜು.23 ರಂದು ಸಂಸತ್ತಿನಲ್ಲಿ ಮಂಡನೆಯಾಗಲಿದ್ದು, ಅದಕ್ಕಾಗಿ ಸಿದ್ಧತೆ ಭರದಿಂದ ಸಾಗಿದೆ. ಇದೇ ವೇಳೆ, ಪ್ರಧಾನಿ ನರೇಂದ್ರ ಮೋದಿ ದೇಶದ ಆರ್ಥಿಕ ತಜ್ಞರ ಜತೆ ಗುರುವಾರ ದೆಹಲಿಯಲ್ಲಿ ವಿಶೇಷ ಸಭೆ ನಡೆಸಿದರು. ತಜ್ಞರ ಸಲಹೆ-ಅಭಿಪ್ರಾಯಗಳನ್ನು ಪಡೆದುಕೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಬೆರ್ರಿ ಸೇರಿದಂತೆ ಆರ್ಥಿಕ ಮತ್ತು ಉದ್ಯಮ ವಲಯದ ಅನುಭವಿಗಳು ಸಭೆಯಲ್ಲಿದ್ದರು. ಅಲ್ಲದೇ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕಂಪನಿ ವ್ಯವಹಾರಗಳ ಖಾತೆ ಸಹಾಯಕ ಸಚಿವ ರಾವ್ ಇಂದರ್‌ಜಿತ್ ಸಿಂಗ್, ಸರಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್, ಆರ್ಥಿಕ ತಜ್ಞ ಸುರಜಿತ್ ಭಲ್ಲಾ, ಅಶೋಕ್ ಗುಲಾಟಿ, ಬ್ಯಾಂಕಿಂಗ್ ಕ್ಷೇತ್ರದ ಅನುಭವಿ ಕೆ.ವಿ.ಕಾಮತ್ ಮತ್ತಿತರರು ಸಭೆಯಲ್ಲಿ ಹಾಜರಿದ್ದರು.

ಪ್ರಧಾನಿ ಮೋದಿ ಅವರ ಮೂರನೇ ಅವಧಿಯ ಸರಕಾರದ ಮೊದಲ ಬಜೆಟ್ ಬಗ್ಗೆ ಹಣಕಾಸು ಮಾರುಕಟ್ಟೆ, ಉದ್ಯಮ ವಲಯ ಮತ್ತು ಸಾರ್ವಜನಿಕರಿಂದ ಭಾರೀ ಕುತೂಹಲ ವ್ಯಕ್ತವಾಗುತ್ತಿದೆ. ಅದರಲ್ಲೂ 2047ರ ವೇಳೆಗೆ ಭಾರತವನ್ನು



ಅಭಿವೃದ್ಧಿ ಹೊಂದಿದ ದೇಶವಾಗಿಸುವ, ಅರ್ಥ ಶಕ್ತಿಯಲ್ಲಿ 3ನೇ ಸ್ಥಾನಕ್ಕೇರಿಸುವ ಗುರಿ ಇಟ್ಟುಕೊಂಡಿರುವ ಮೋದಿ ಅವರ ಕನಸಿನ ಬಜೆಟ್ ಹೇಗಿರಲಿದೆ ಎಂಬ ಸಹಜ ಕುತೂಹಲವಿದೆ. ನಿರೀಕ್ಷೆಗಳೂ ದೊಡ್ಡ ಮಟ್ಟದವೇ ಆಗಿದೆ ಎಂಬ ಮಾತುಗಳು ವಾಣಿಜ್ಯೋದ್ಯಮ ವಲಯದಿಂದ ಕೇಳಿಬರುತ್ತಿವೆ. ಜನಸಾಮಾನ್ಯರು ತೆರಿಗೆ ವಿನಾಯಿತಿ, ಹೊಸ ಕೊಡುಗೆಗಳ ಬಗ್ಗೆ ಕುತೂಹಲಿಗಳಾಗಿದ್ದಾರೆ.

ಘಟನೆ ಮರು ಸೃಷ್ಟಿಸಿದ ಪೊಲೀಸ್ | 2 ಬಾರ್‌ಗಳಲ್ಲಿ ಮದ್ಯಸೇವಿಸಿದ್ದ ಮಿಹಿರ್

ಬಿಎಂಡಬ್ಲ್ಯು ಹಿಟ್ ಅಂಡ್ ರನ್ ತಪ್ಪೊಪ್ಪಿಕೊಂಡ ಮಿಹಿರ್ ಶಾ

ಮುಂಬೈ: ಮುಂಬೈ ಬಿಎಂಡಬ್ಲ್ಯು ಹಿಟ್ ಅಂಡ್ ರನ್

ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ, 'ಅಪಘಾತವಾದಾಗ ಕಾರು ಚಲಾಯಿಸುತ್ತಿದ್ದುದು ನಾನೇ' ಎಂದು ಪೊಲೀಸರೆದುರು ತಪ್ಪೊಪ್ಪಿಕೊಂಡಿದ್ದಾನೆ.

ಐಶಾರಾಮಿ ಕಾರು ಅಪಘಾತದಲ್ಲಿ ಸ್ಕೂಟರ್‌ನಲ್ಲಿ ಸಾಗುತ್ತಿದ್ದ ಮೀನು ಮಾರಾಟದ ಮಹಿಳೆ ಸಾವನ್ನಪ್ಪಿ, ಆಕೆಯ ಪತಿ ಗಾಯಗೊಂಡಿದ್ದಾರೆ. ಆರೋಪಿ ಮಿಹಿರ್ ಶಾ (24) ಮತ್ತು ಆತನ ಚಾಲಕ ರಾಜಋಷಿ ಬಿಡಾವತ್ ಇಬ್ಬರನ್ನೂ ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದು, ಇಬ್ಬರೂ ಘಟನ ಯಲ್ಲಿನ ತಮ್ಮ ಪಾತ್ರ ಒಪ್ಪಿಕೊಂಡಿದ್ದಾರೆ. ಅದನ್ನು ಆಧರಿಸಿ ಪೊಲೀಸರು ಅಪಘಾತದ ದೃಶ್ಯವನ್ನು ಮರುಸೃಷ್ಟಿ ಮಾಡಿ ವಿಡಿಯೊ ಚಿತ್ರೀಕರಿಸಿಕೊಂಡರು.

ಮುಂದೆ ನಿಧಾನವಾಗಿ ಸಾಗುತ್ತಿದ್ದ ಸ್ಕೂಟರ್‌ಗೆ ವೇಗವಾಗಿ ಬಂದ ಕಾರು ಹಿಂದಿ ನಿಂದ ಗುದ್ದಿದೆ. ಆಗ ಸ್ಕೂಟರ್‌ನಲ್ಲಿದ್ದ ಮಹಿಳೆ ಮತ್ತು ಆಕೆಯ ಪತಿ ಕೆಳಗೆ ಬಿದಿದ್ದಾರೆ. ಮಹಿಳೆ ಕಾರಿನ ಟೈರ್‌ನಡಿ ಸಿಲುಕಿರುವುದು ಗೊತ್ತಾದರೂ ಮಿಹಿರ್ ಶಾ ಕಾರು ನಿಲ್ಲಿಸದೆ ವೇಗ ವಾಗಿ 3 ಕಿಮೀವರೆಗೂ ಸಾಗಿದ್ದಾನೆ. ಅದೇ ಮಾರ್ಗ ಸಾಗುತ್ತಿದ್ದ ಬೇರೆ ವಾಹನಗಳವರು ಕೂಗಿ ಹೇಳಿದರೂ ಮಿಹಿರ್ ಕಿವಿಗೆ ಹಾಕಿಕೊಂಡಿಲ್ಲ. ಕಾರನ್ನು ನಿಲ್ಲಿಸಿಲ್ಲ. ಮಹಿಳೆ ದೇಹ ರಸ್ತೆ ಉಜ್ಜುತ್ತಾ ಸಾಗಿದ್ದರಿಂದ ಜರ್ಝರಿತವಾಗಿ ಸಾವಿಗೀಡಾಗಿದ್ದಾರೆ. ಆರೋಪಿ ಮಿಹಿರ್‌ನನ್ನು ಬಂಧಿಸಿ ಜು.16ರವರೆಗೆ ಕಸ್ಟಡಿಗೆ ಪಡೆಯಲಾಗಿದೆ.

ಡ್ರೈವಿಂಗ್ ಲೈಸೆನ್ಸ್ ಇರುವುದಾಗಿ ಆರೋಪಿ ಹೇಳಿದ್ದರೂ ಈವರೆಗೂ ಹಾಜರುಪಡಿಸಿಲ್ಲ ಎಂದು ಪೊಲೀಸರು ವಿವರಿಸಿದ್ದಾರೆ. ಶಿವಸೇನೆ (ಶಿಂದೆ) ಪಕ್ಷದಲ್ಲಿ ಸ್ಥಳೀಯ ನಾಯಕನಾಗಿದ್ದ ರಾಜೇಶ್ ಶಾ ಅವರ ಪುತ್ರ. ಅಪಘಾತ ಬಳಿಕ 3 ದಿನ ತಲೆಮರೆಸಿಕೊಂಡಿದ್ದ. ಆ ನಡುವೆ ಆತನ ತಂದೆ, ಕಾರು ಮಾಲೀಕ ರಾಜೇಶ್ ಶಾನನ್ನು ಬಂಧಿಸಲಾಗಿತ್ತು. ಬಳಿಕ ರಾಜೇಶ್ ಶಾನನ್ನು ಪಕ್ಷದಿಂದಲೂ ಹೊರ ಹಾಕಲಾಗಿದೆ.

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584 133, ರಾಯಚೂರು, ಕರ್ನಾಟಕ, ಭಾರತ
Email:- registrarrur@gmail.com,
+918532200975 https://raichuruniversity.ac.in

ಕ್ರ.ಸಂ. ರಾವಿರಾ/ಆಡಳಿತ/2024-25/388 Dt: 08.07.2024

ನೇಮಕಾತಿ ಅಧಿಸೂಚನೆ

ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ (371(ಜೆ) ಮತ್ತು ಮಿಕ್ಕುಳಿದ ವೃಂದ (371(ಜೆ) ಹೊರತುಪಡಿಸಿ) 02 ಪ್ರಾಧ್ಯಾಪಕರು ಮತ್ತು05 ಸಹ-ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ರೂ. 2,000=00 ಮತ್ತು ಸಾಮಾನ್ಯ ಅಭ್ಯರ್ಥಿಗಳು ರೂ. 4,000=00ಅರ್ಜಿ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರಅರ್ಜಿ ಶುಲ್ಕವನ್ನುದಿನಾಂಕ: 08.08.2024 ರೊಳಗಾಗಿ ಭರಿಸಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಅರ್ಜಿ ಸಲ್ಲಿಸುವಕೊನೆಯ ದಿನಾಂಕ: 08.08.2024.

ವಿವರಗಳಿಗೆ ರಾಯಚೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ (https://raichuruniversity.ac.in) ವೀಕ್ಷಿಸಲು ಸೂಚಿಸಲಾಗಿದೆ.

ಸಹಿ/- ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

DIP/RCR/92/KSMC&A/91/2024-25

ಕಾಂಚನಗಂಗಾ ರೈಲು ಡಿಕ್ಕಿ: ನರಳುತ್ತಾ ಪ್ರಾಣಬಿಟ್ಟ ಆನೆ

ಗುವಾಹಟಿ: ವೇಗವಾಗಿ ಚಲಿಸುತ್ತಿದ್ದ ಕಾಂಚನಗಂಗಾ ಎಕ್ಸ್‌ಪ್ರೆಸ್ ರೈಲು ಅಸ್ಸಾಂ ಮೊರಿಗಾಂವ್ ಬಳಿ ಹಳಿ ದಾಟುತ್ತಿದ್ದ ಕಾಡಾನೆಯೊಂದಕ್ಕೆ ಗುರುವಾರ ಡಿಕ್ಕಿ ಹೊಡೆದಿದೆ. ಆನೆಯ ಹಿಂಬದಿ ಕಾಲಿನ ಮೂಳೆ ಮುರಿದಿದ್ದರಿಂದ ಮುಂದೆ ಸಾಗಲಾಗದೇ ಹಳಿಯ ಮಗ್ಗಲಲ್ಲೇ ಅಡಿ ಮೇಲಾಗಿ ಬಿದ್ದ ವಯಸ್ಕ ಆನೆ, ನರಳುತ್ತಾ, ನೋವಿನಿಂದ ಘೀಳಿಡುತ್ತಲೇ ಪ್ರಾಣಬಿಟ್ಟಿದೆ. ಈ ಹೃದಯವಿದ್ರಾವಕ ದೃಶ್ಯದ ವಿಡಿಯೊ ವೈರಲ್ ಆಗಿದ್ದು, ವೀಕ್ಷಿಸಿದವರೆಲ್ಲಾ ಮಮ್ಮಲು ಮರುಗಿದ್ದಾರೆ.

ಮೊರಿಗಾಂವ್‌ನ ಜಾಗಿರೋಡ್ ರೈಲು ನಿಲ್ದಾಣದ ಬಳಿ ದುರ್ಘಟನೆ ನಡೆದಿದೆ. ಡಿಕ್ಕಿಯ ರಭಸಕ್ಕೆ ಕಾಲಿನ ಮೂಳೆ ಮುರಿದಿದ್ದರಿಂದ ರೈಲಿನ ಹಳಿಗಳ ಮಗ್ಗಲಲ್ಲೇ ಬಿದ್ದ ಆನೆ ಎದ್ದೇಳಲು ಹರಸಾಹಸ ಪಟ್ಟು ಕೊನೆಗೆ ನರಳುತ್ತಾ ಪ್ರಾಣ ಬಿಟ್ಟಿದೆ. ಹಿಂಡಿನಿಂದ ಬೇರ್ಪಟ್ಟಿದ್ದ ಕಾಡಾನೆಗಳೆರಡು ಜಾಗಿ ರೋಡ್ ರೈಲು ನಿಲ್ದಾಣದ ಬಳಿ ರೈಲು ಹಳಿ ದಾಟುತ್ತಿದ್ದಾಗಲೇ ಕಾಂಚನಗಂಗಾ ರೈಲು ವೇಗವಾಗಿ ಬಂದಿದೆ. ಲೊಕೊಪೈಲಟ್‌ಗಳ ಆನೆಗಳನ್ನು ಗಮನಿಸಿ ಬ್ರೇಕ್ ಹಾಕಲು ಯತ್ನಿಸಿದರೂ ಪ್ರಯೋಜನ ವಾಗಿ. ಒಂದು ಆನೆಯ ಹಿಂಬದಿಗೆ ರೈಲಿನ ಎಂಜಿನ್ ಡಿಕ್ಕಿಯಾಗಿದೆ. ಮತ್ತೊಂದು ಆನೆ ರೈಲು ಹಳಿ ದಾಟಿ ಅಪಾಯದಿಂದ ಪಾರಾಗಿದೆ. ಆನೆಯ ಮೃತದೇಹವನ್ನು ಸ್ಥಳೀಯರ ಸಹಾಯದಿಂದ ರೈಲ್ವೆ ಅಧಿಕಾರಿಗಳು ಬೇರೆಡೆಗೆ ಸ್ಥಳಾಂತರಿಸಿದ್ದಾರೆ. ಪಶುವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಅಂತ್ಯಸಂಸ್ಕಾರ ನಡೆಸಲಾಗಿದೆ ಎಂದು ವರದಿಯಾಗಿದೆ.

ಉ.ಪ್ರದೇಶ: ಒಂದೇ ದಿನ ಸಿಡಿಲಿಗೆ 38 ಬಲಿ

ಲಖನೌ: ಉತ್ತರ ಪ್ರದೇಶ ರಾಜ್ಯಾದ್ಯಂತ ಬುಧವಾರ ಸಿಡಿಲು ಬಡಿದು 38 ಜನರು ಮೃತಪಟ್ಟಿದ್ದಾರೆ. ಕೆಲ ದಿನಗಳಿಂದ ರಾಜ್ಯಾದ್ಯಂತ ಸಿಡಿಲು- ಗುಡುಗು ಸಹಿತ ಮಳೆಯಾಗುತ್ತಿದೆ. ಪ್ರತಾಪ್‌ಗಢದಲ್ಲಿ ಅತಿಹೆಚ್ಚು (11) ಮಂದಿ ಮೃತಪಟ್ಟರೆ, ಸುಲ್ತಾನ್‌ಪುರ ದಲ್ಲಿ 7, ಚಂದೌಲಿಯಲ್ಲಿ 6, ಮೈನ್‌ಪುರಿಯಲ್ಲಿ 5 ಮತ್ತು ಪ್ರಯಾಗ್‌ರಾಜ್‌ನಲ್ಲಿ 4, ಔರೈಯಾ, ಡಿಯೋರಿಯ, ಹತ್ರಾಸ್, ವಾರಾಣಸಿ ಮತ್ತು ಸಿದ್ಧಾರ್ಥ ನಗರದಲ್ಲಿ ತಲಾ ಒಬ್ಬರು ಸಿಡಿಲಿಗೆ ಬಲಿಯಾಗಿದ್ದಾರೆ. ಚಂದೌಲಿ ಜಿಲ್ಲೆಯಲ್ಲಿ ಬುಧವಾರ ಸಂಜೆ 4ರಿಂದ ಸಂಜೆ 6ರವರೆಗೆ ಸಿಡಿಲು ಸಹಿತ ಭಾರಿ ಮಳೆಯಾಗಿದೆ. ಸಿಡಿಲಿನ ಆಘಾತದಿಂದ ಹಲವರು ಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮಳೆ ಬಂದಿದ್ದರಿಂದ ಮರದ ಕೆಳಗೆ ಆಶ್ರಯ ಪಡೆದವರು ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗಿದ್ದಾರೆ. ಕೆರೆಗಳಲ್ಲಿ ಮೀನುಗಾರಿಕೆ ನಡೆಸುತ್ತಿದ್ದವರಿಗೂ ಸಿಡಿಲಿನ ಆಘಾತವಾಗಿದೆ

ಕರ್ನಾಟಕ ಸರ್ಕಾರ
ನಗರಸಭೆ ರಾಯಚೂರು
Website:-www.raichurcity.gov.in E-mail:itstaff_ulb_raichura@yahoo.com
Phone No:08532-226768 Fax No:08532-226316

ಸಂಖ್ಯೆ.ನಸರಾ/ತಾಂತ್ರಿಕ/ಕಾ/ಕೆ.ಕೆ.ಆರ್.ಡಿ.ಬಿ/233/2023-24 ದಿನಾಂಕ: 06-07-2024.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP. Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity.mrc. gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಅನುದಾನದ ವಿವರ:2023-24 ಇಂದಿರಾ ಕ್ಯಾಂಟಿನ ದುರಸ್ಥಿ ಅನುದಾನ **ಕಾಮಗಾರಿಗಳ ವಿವರ:** DRINKING WATER SUPPLY SCHEME TO RAICHUR CITY. Estimate Amount Rs. 5,00,00,000/- **ಇಂಡೆಂಟ್ ನಂಬರ:** DMA/2024-25/WS/ WORK_INDENT20381

ಸಹಿ/- ಪೌರಾಯುಕ್ತರು, ನಗರಸಭೆ, ರಾಯಚೂರು

DIP/RCR/85/KSMCA/84/2024-25

ವೈಜಾಗ್ ಉಕ್ಕು ಕಾರ್ಖಾನೆ ಸಚಿವ ಎಚ್‌ಡಿಕೆ ಪರಿಶೀಲನೆ

ವಿಶಾಖಪಟ್ಟಣ: ಕೇಂದ್ರದ ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವ ಎಚ್.ಡಿ.ಕುಮಾರಸ್ವಾಮಿ ಗುರುವಾರ ವಿಶಾಖಪಟ್ಟಣದ ವೈಜಾಗ್‌ನಲ್ಲಿ 'ರಾಷ್ಟ್ರೀಯ ಇಸ್ಪಾಟ್ ನಿಗಮ್ ಲಿ.' (ಆರ್‌ಐಎನ್‌ಎಲ್) ಉಕ್ಕು ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕಾರ್ಖಾನೆ ಕೇಂದ್ರ ಸರಕಾರದ ಉಕ್ಕು ಸಚಿವಾಲಯದ ಅಧೀನದಲ್ಲಿದೆ. ಕಾರ್ಖಾನೆಯ ಹಿರಿಯ ಅಧಿಕಾರಿಗಳ ಜತೆಗೂಡಿ ಇಡೀ ಕಾರ್ಖಾನೆಯನ್ನು ಸುತ್ತುಹಾಕಿದರು. ವಿವಿಧ ವಿಭಾಗಗಳ ಮಾಹಿತಿ ಪಡೆದುಕೊಂಡರು. ಉತ್ಪಾದನಾ ಚಟುವಟಿಕೆಗಳನ್ನು ಪರಿಶೀಲಿಸಿದರು. ಕಾರ್ಮಿಕರ ಜತೆ ಸಂವಾದ ನಡೆಸಿದರು. ಆರ್ಥಿಕ ಸಮಸ್ಯೆ, ಬೇರೆ ಕಾರಣಗಳಿಂದ ಸಮಸ್ಯೆ ಎದುರಿಸುತ್ತಿರುವ ವೈಜಾಗ್ ಸ್ಟೀಲ್ ಕಾರ್ಖಾನೆಯ ಪುನಶ್ಚೇತನ ಕಾರ್ಯಕ್ಕೆ ಸಚಿವ ಕುಮಾರಸ್ವಾಮಿ ಮುಂದಾಗಿದ್ದಾರೆ ಎನ್ನಲಾಗಿದೆ. ಸಚಿವರ ಭೇಟಿ ಸಂದರ್ಭ ಭಾರೀ ಕೈಗಾರಿಕೆ-ಉಕ್ಕು ಖಾತೆ ಸಹಾಯಕ ಸಚಿವ ಭೂಪತಿರಾಜ್ ಶ್ರೀನಿವಾಸ ವರ್ಮಾ, ವಿಶಾಖಪಟ್ಟಣ ಸಂಸದ ಶ್ರೀಭರತಂ, ಶಾಸಕ ಪಲ್ಲಾ ಶ್ರೀನಿವಾಸ್, ಕಂಪನಿ ವ್ಯವಸ್ಥಾಪಕ ನಿರ್ದೇಶಕ ಅತುಲ್ ಭಟ್ ಉಪಸ್ಥಿತರಿದ್ದರು.

ಜೀವನಾಂಶ ನಿರಾಕರಿಸಲು ಷರಿಯಾ ಬಳಕೆ

ದೆಹಲಿ: ವಿಚ್ಛೇದಿತ ಮುಸ್ಲಿಂ ಮಹಿಳೆಗೆ



ಜೀವನಾಂಶ ತಪ್ಪಿಸಲು 'ಷರಿಯಾ' ಕಾನೂನನ್ನು ಬಳಸಲಾಗುತ್ತಿದೆ ಎಂದು 'ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ' ಸಂಸ್ಥಾಪಕಿ, ಸಾಮಾಜಿಕ ಕಾರ್ಯಕರ್ತೆ ಜಾಕಿಯಾ ಸೋಮನ್ ಆರೋಪಿಸಿದ್ದಾರೆ.

ಮುಸ್ಲಿಂ ಮಹಿಳೆಗೆ ಜೀವನಾಂಶ ಹಕ್ಕು ನಿರಾಕರಿಸುವ ಷರಿಯಾ ಕಾನೂನನ್ನು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ಅಪ್ರಸ್ತುತಗೊಳಿಸಿದೆ ಎಂದೂ ಅವರು ಹೇಳಿದ್ದಾರೆ. ಮುಸ್ಲಿಂ ಮಹಿಳೆಗೂ ಜೀವನಾಂಶದ ಹಕ್ಕು ಇದೆ ಎಂದು ಕೋರ್ಟ್ ಬುಧವಾರವಷ್ಟೇ ತೀರ್ಪು ನೀಡಿದ ಬಳಿಕ ಜಾಕಿಯಾ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ ಬುಧವಾರ ನೀಡಿದ ತೀರ್ಪನ್ನು ಅವರು ಸ್ವಾಗತಿಸಿದ್ದಾರೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ (ಸಿಆರ್‌ಪಿಸಿ) ಸೆಕ್ಷನ್ 125ರಲ್ಲಿನ ಅಂಶವನ್ನು ಮುಸ್ಲಿಂ ಮಹಿಳೆಯರು ಅರಿತು ಸಮರ್ಥವಾಗಿ ಬಳಸಿಕೊಳ್ಳಬೇಕು. ತಲಾಕ್ ನೀಡುವ ಪತಿಯಿಂದ ಜೀವನಾಂಶ ಪಡೆಯಲು ಹೋರಾಟಬೇಕು ಎಂದು ಗಮನ ಸೆಳೆದಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಎಇ-1/ಟೆಂಡರ್/2024-25 ದಿನಾಂಕ: 08.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-02/2024-25
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ-ಏಕಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಟೆಂಡರ್‌ಗಳನ್ನು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕೆ.ಪಿ.ಪಿ.ಪಿ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು -560 025, ದೂರವಾಣಿ: 080-22485867, 080-22485927) ರಲ್ಲಿ ನೊಂದಾಯಿಸಿದ ಅರ್ಹ ಏಜೆನ್ಸಿ/ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ತುಮಕೂರು ಮತ್ತು ಉಪವಿಭಾಗಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಮತ್ತು ಡಿ-ಗ್ರೂಪ್ ನೌಕರರನ್ನು ಸರಬರಾಜು ಮಾಡುವ ಕಾಮಗಾರಿ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http:// kppp.karnataka.gov.in ಮುಖಾಂತರ ದಿನಾಂಕ: 09-07-2024 ರಿಂದ 24-07-2024 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಟೆಂಡರ್ ತೆರೆಯುವ ದಿನಾಂಕ:25-07-2024 ರಂದು ಸಂಜೆ 5.10 ಗಂಟೆ ನಂತರ. ಈ ಬಗ್ಗೆ ಸಂಪೂರ್ಣ ವಿವರಗಳನ್ನು http:// kppp.karnataka.gov.in ನಲ್ಲಿ ಲಾಗ್ ಇನ್ ಆಗುವ ಮುಖಾಂತರ ಹಾಗೂ ಈ ಕೆಳ ಸಹಿದಾರರಿಂದ ಕಛೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ (ದೂರವಾಣಿ ಸಂಖ್ಯೆ: 0816-2272620). ಟೆಂಡರ್‌ಗೆ ಯಾವುದೇ ಮಾರ್ಪಾಡು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/132/KSMCA/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-67/806/2024-25 ದಿನಾಂಕ: 11.07.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s Binary Ventures rep by its Managing Partner Mr. Bharath A No. 60/1, Kada Agrahara Village, Bommasandra, Sarjapura Main Road, Bengaluru-562125.	ಆನೇಕಲ್	ಸರ್ಜಾಪುರ	ಬಿ. ಹೊಸಹಳ್ಳಿ	110/1	2A-00G	ವ್ಯವಸಾಯ ವಲಯ	ವಸತಿ
	ಒಟ್ಟು					2A-00G		

ಷರಾ: ಅರ್ಜಿದಾರರು ಭೂ ಉಪಯೋಗ ಬದಲಾವಣೆ ಮಾಡಿ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಹಾಗೂ ಸುತ್ತುಮುತ್ತಲಿನ ಪ್ರದೇಶವು ಅಭಿವೃದ್ಧಿ ಹೊಂದುವುದಲ್ಲದೆ ಇತರೆ ಸಾರ್ವಜನಿಕ ಸಣ್ಣ ಸಣ್ಣ ಉದ್ಯಮಗಳು ಅಭಿವೃದ್ಧಿ ಹೊಂದಲು ಸಹಾಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರೆ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

8ರ ಬಾಲೆ ಅತ್ಯಾಚಾರ- ಕೊಲೆ; 3 ಬಾಲಕರ ಸೆರೆ

ಕರ್ನೂಲ್: ಆಂಧ್ರಪ್ರದೇಶದಲ್ಲಿ ಎಂಟು ವರ್ಷದ ಬಾಲಕಿ ಮೇಲೆ ಮೂವರು ಬಾಲಕರು ಅತ್ಯಾಚಾರವೆಸಗಿ ಕೊಲೆ ಮಾಡಿ ದೇಹವನ್ನು ರಾಜ ಕಾಲುವೆಗೆ ಎಸೆದಿದ್ದಾರೆ. ನಂದ್ಯಾಲ ಜಿಲ್ಲೆ ಪಗಿದ್ಯಾಲ ಮಂಡಲದ ಮುಚ್ಚುಮರ್ರಿ ಗ್ರಾಮದಲ್ಲಿ ಘಟನೆ ಬುಧವಾರ ಸಂಜೆ ನಡೆದಿದೆ.

ಸ್ನೇಹಿತೆಯರ ಜತೆ ಆಟವಾಡಲು ಹೋಗಿದ್ದ ಮಗಳು ಸಂಜೆಯಾದರೂ ಮನೆಗೆ ಬರದೇ ಇದ್ದಾಗ ಗಾಬರಿಯಾದ ಪೋಷಕರು ಊರೆಲ್ಲಾ ಹುಡುಕಾಡಿ ಬಳಿಕ ಪೊಲೀಸರಿಗೆ ದೂರು ನೀಡಿದ್ದಾರೆ. ತಕ್ಷಣ ತನಿಖೆ ಆರಂಭಿಸಿದ ಪೊಲೀಸರು, ಸಿಕ್ಕ ಸುಳಿವಿನ ಮೇರೆಗೆ ಮೂವರು ಬಾಲಕರನ್ನು ವಶಕ್ಕೆ ತೆಗೆದು ಕೊಂಡು ವಿಚಾರಣೆಗೆ ಒಳಪಡಿಸಿದಾಗ ಬಾಲಕಿ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿ ಶವವನ್ನು ಕಾಲುವೆಗೆ ಎಸೆದಿರುವುದನ್ನು ಒಪ್ಪಿಕೊಂಡಿದ್ದಾರೆ. 3ನೇ ತರಗತಿ ಓದುವ ಬಾಲಕಿ ಯನ್ನು ಆಟವಾಡಲು ಬರುವಂತೆ ಮೂವರು ಬಾಲಕರು ಪುಸಲಾಯಿಸಿ ಬಳಿಕ ಆಕೆಯ ಬಾಯಿ ಮುಚ್ಚಿ ಎಳೆದೊಯ್ದು ಅತ್ಯಾಚಾರ ನಡೆಸಿದ್ದಾರೆ ಎಂಬುದು ತನಿಖೆಯಿಂದ ತಿಳಿದು ಬಂದಿದೆ, ರಾಜಕಾಲುವೆಯಲ್ಲಿ ಮಳೆ ನೀರು ರಭಸವಾಗಿ ಹರಿಯುತ್ತಿದ್ದು, ಬಾಲಕಿಯ ಮೃತದೇಹ ಕೊಚ್ಚಿ ಹೋಗಿರುವ ಸಾಧ್ಯತೆಯಿದೆ.

ಪೊಲೀಸರು ಮೃತದೇಹಕ್ಕಾಗಿ ಶೋಧ ನಡೆಸುತ್ತಿದ್ದಾರೆ. ಕೊಲೆಯಾದ ಸ್ಥಳದಲ್ಲಿ ಮಾಟಮಂತ್ರದ ವಸ್ತುಗಳೂ ಪತ್ತೆಯಾಗಿವೆ. ಈ ಆಯಾಮದಲ್ಲೂ ಪೊಲೀಸರು ತನಿಖೆ ನಡೆಸಿದ್ದಾರೆ.

ನಿರೀಕ್ಷೆಗಳನ್ನು ಹೊತ್ತು ಪ್ಯಾರಿಸ್‌ಗೆ ಹೊರಟಿರುವ ಒಲಿಂಪಿಕ್ಸ್ ವೀರರು

ಐತಿಹಾಸಿಕ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕ್ಷಣಗಣನೆ | 124 ಭಾರತೀಯರ ಸಾಮರ್ಥ್ಯ ಪಣಕ್ಕೆ | ಪ್ರತಿಯೊಬ್ಬರ ಮೇಲೂ ನಿರೀಕ್ಷೆಯ ಭಾರ

ಪ್ಯಾರಿಸ್ ಆತಿಥ್ಯದಲ್ಲಿ ನಡೆಯಲಿರುವ 2024ನೇ ಸಾಲಿನ ಒಲಿಂಪಿಕ್ಸ್‌ಗೆ ಇನ್ನೇನು ಕೆಲವೇ ದಿನಗಳು ಉಳಿದಿದ್ದು, ಜಾಗತೀಕ ಮಟ್ಟದ ಎಲ್ಲ ದೇಶಗಳೂ ಅತಿ ದೊಡ್ಡ ಕ್ರೀಡಾಕೂಟಕ್ಕೆ ಸಿದ್ಧವಾಗುತ್ತಿವೆ. ಈ ನಡುವೆ ಭಾರತದ ಕ್ರೀಡಾಪಟುಗಳು ಭರ್ಜರಿ ಅಭ್ಯಾಸ ನಡೆಸುತ್ತಿದ್ದಾರೆ. ಕಳೆದ ಒಲಿಂಪಿಕ್ಸ್‌ನಲ್ಲಿ ಭಾರತ ತೋರಿದ್ದ ಪ್ರದರ್ಶನಕ್ಕೆ ಮೆಚ್ಚಿದ್ದು, ಈ ಬಾರಿ ಇನ್ನಷ್ಟು ನಿರೀಕ್ಷೆ ಮೂಡಿಬರುತ್ತಿವೆ. ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತ ಹಿಂದಿನ ಒಲಿಂಪಿಕ್ಸ್‌ಗಳಿಗಿಂತಲೂ ಹೆಚ್ಚಿನ ಪದಕಗಳನ್ನು ಗೆದ್ದಿತ್ತು. 7 ಪದಕಗಳೊಂದಿಗೆ 48ನೇ ಸ್ಥಾನ ಪಡೆದಿದ್ದ ಭಾರತದ ಮೇಲೆ ಇದೀಗ ಹೆಚ್ಚಿನ ನಿರೀಕ್ಷೆ ಇಡಲಾಗಿದೆ.

ನೂತನ ಆಟಗಾರರು

ಪ್ಯಾರಿಸ್ ಒಲಿಂಪಿಕ್ಸ್‌ಗೆ ಈ ಬಾರಿ ನೂತನ ಆಟಗಾರರು ಅಂದರೆ ಹಿಂದೆಂದೂ ಒಲಿಂಪಿಕ್ಸ್ ಭಾಗವಾಗದ ಆಟಗಾರರನ್ನು ಕಳುಹಿಸಲಾಗುತ್ತಿದೆ. ಪ್ರಮುಖವಾಗಿ ಹಾಕಿ ಅಂತಹ ತಂಡಗಳಲ್ಲಿ ಬಹಳಷ್ಟು ಬದಲಾವಣೆ ಕಂಡಿದ್ದು, ಹೊಸ ಮುಖಗಳ ಮೇಲೆ ಜವಾಬ್ದಾರಿಯನ್ನು ಹೇರಿದೆ. ಹಾಕಿ ಅಲ್ಲದೆ, ವೈಯಕ್ತಿಕ ಕ್ರೀಡೆಗಳಲ್ಲೂ ಭಾರತದ ನೂತನ ಆಟಗಾರರು ಭಾಗಿಯಾಗಲಿದ್ದಾರೆ.

2020ಕ್ಕಿಂತಲೂ ಹೆಚ್ಚು ಸ್ಪರ್ಧಿಗಳು

ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದಿಂದ ಈ ಬಾರಿ ಹೆಚ್ಚಿನ ಆಟಗಾರರು ಅರ್ಹರಾಗಿದ್ದಾರೆ. ಅಥ್ಲೆಟಿಕ್ಸ್, ಗುಂಪು ಗೇಮ್ ಹಾಗೂ ಶೂಟಿಂಗ್ ಸೇರಿ ವಿವಿಧ ಕ್ರೀಡೆಗಳಲ್ಲಿ ಕಳೆದ ಬಾರಿಗಿಂತಲೂ ಹೆಚ್ಚಿನ ಆಟಗಾರರು ಸ್ಪರ್ಧಿಸಲಿದ್ದಾರೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದಿಂದ 122 ಆಟಗಾರರು ಅರ್ಹತೆ ಪಡೆದಿದ್ದರು. ಆದರೆ ಈ ಬಾರಿ 124 ಆಟಗಾರರು ಆಯ್ಕೆಯಾಗಿದ್ದು ಕಳೆದ ಒಲಿಂಪಿಕ್ಸ್‌ಗಿಂತಲೂ ಜಾಸ್ತಿ ಕ್ರೀಡಾಪಟುಗಳು ಭಾಗಿಯಾಗಲಿದ್ದಾರೆ.

ಹಾಕಿ ತಂಡದ ಮೇಲೆ ನಿರೀಕ್ಷೆ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಹಾಕಿ ತಂಡ ಭರ್ಜರಿ ಪ್ರದರ್ಶನ ತೋರಿತ್ತು. ತೀವ್ರ ಶ್ರಮದ ನಂತರ ಭಾರತ ಕಳೆದ ಬಾರಿ ಕಂಚಿನ ಪದಕ ಗೆದ್ದಿತ್ತು. ಹೀಗಾಗಿ ಇದೀಗ ಭಾರತದ ಹಾಕಿ ತಂಡದ ಮೇಲೆ ನಿರೀಕ್ಷೆ ಇಡಲಾಗಿದೆ.

ಆರ್ಚರಿ ಟೀಂ

ಭಾರತದ ಆರ್ಚರಿ ತಂಡಗಳು ಈ ಬಾರಿಯ ವಿಶ್ವಕಪ್ ಟೂರ್ನಿಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದವು. ಪ್ರಮುಖವಾಗಿ ವಿಶ್ವಕಪ್ ಹಂತದ ಗುಂಪು ಪಂದ್ಯಾವಳಿಗಳಲ್ಲಿ ಮಹಿಳೆಯರು ಹ್ಯಾಟ್ರಿಕ್ ವಿಜಯವನ್ನು ದಾಖಲಿಸಿದ್ದರು. ಹೀಗಾಗಿ ಭಾರತದಿಂದ ಹೆಚ್ಚಿನ ಆಟಗಾರರು ಒಲಿಂಪಿಕ್ಸ್ ಕೋಟಾ ಪಡೆದಿದ್ದಾರೆ. ಅವರ ಮೇಲೂ ಹೆಚ್ಚಿನ ನಿರೀಕ್ಷೆಗಳು ಇಡಲಾಗಿದೆ.

ನೀರಜ್ ಚೋಪ್ರಾ ಮೇಲೆ ವಿಶ್ವಾಸ

ಕಳೆದ ಬಾರಿ ಚಿನ್ನ ಗೆದ್ದಿದ್ದ ಜಾವೆಲಿಯನ್ ಥ್ರೋ ಎಸೆತಗಾರ ನೀರಜ್ ಚೋಪ್ರಾ, ಈ ಬಾರಿಯೂ ಚಿನ್ನದ ಮೇಲೆ ಕಣ್ಣಿಟ್ಟಿದ್ದಾರೆ. ಅದಲ್ಲದೆ, ಈ ಬಾರಿ ಅವರನ್ನು ಅಥ್ಲಿಟ್ಸ್ ವಿಭಾಗದ ನಾಯಕರನ್ನಾಗಿ ನೇಮಕ ಮಾಡಿದ್ದು, ಅವರ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹೇರಲಾಗಿದೆ.

ಶೂಟಿಂಗ್

ಪೃಥ್ವಿರಾಜ್ ತೊಂಡೈಮಾನ್: ಪುರುಷರ ಟ್ರ್ಯಾಪ್
ರಾಜೇಶ್ವರಿ ಕುಮಾರಿ: ಮಹಿಳೆಯರ ಟ್ರ್ಯಾಪ್
ಶ್ರೇಯಸಿ ಸಿಂಗ್: ಮಹಿಳೆಯರ ಟ್ರ್ಯಾಪ್
ಅನಂತಜೀತ್ ಸಿಂಗ್ ನರುಕಾ: ಪುರುಷರ ಸ್ಕೀಟ್
ರೈಜಾ ಧಿಲ್ಲೋನ್: ಮಹಿಳೆಯರ ಸ್ಕೀಟ್
ಮಹೇಶ್ವರಿ ಚೌಹಾಣ್: ಮಹಿಳೆಯರ ಸ್ಕೀಟ್
ಅನಂತಜೀತ್ ಸಿಂಗ್ ನರುಕಾ/ಮಹೇಶ್ವರಿ ಚೌಹಾಣ್: ಸ್ಕೀಟ್ ಮಿಶ್ರ ತಂಡ
ಸಂದೀಪ್ ಸಿಂಗ್: ಪುರುಷರ 10 ಮೀ ಏರ್ ರೈಫಲ್
ಅರ್ಜುನ್ ಬಾಬುಟಾ: ಪುರುಷರ 10 ಮೀ ಏರ್ ರೈಫಲ್
ಎಲವೆನಿಲ್ ವಲರಿವನ್: ಮಹಿಳೆಯರ 10 ಮೀ ಏರ್ ರೈಫಲ್
ರಮಿತಾ ಜಿಂದಾಲ್: ಮಹಿಳೆಯರ 10 ಮೀ ಏರ್ ರೈಫಲ್
ಸ್ವಪ್ನಿಲ್ ಕುಸಾಲೆ: ಪುರುಷರ 50 ಮೀಟರ್ ರೈಫಲ್ 3 ಸ್ಥಾನ
ಐಶ್ವರಿ ಪ್ರತಾಪ್ ಸಿಂಗ್ ತೋಮರ್: ಪುರುಷರ 50 ಮೀಟರ್ ರೈಫಲ್ 3 ಸ್ಥಾನ

ಸಿಫ್ಟ್ ಕೌರ್ ಸಮ್ರಾ: ಮಹಿಳೆಯರ 50 ಮೀಟರ್ ರೈಫಲ್ 3 ಸ್ಥಾನಗಳು
ಅಂಜುಮ್ ಮೌದ್ಗಿಲ್: ಮಹಿಳೆಯರ 50 ಮೀಟರ್ ರೈಫಲ್ 3 ಸ್ಥಾನಗಳು
ಸಂದೀಪ್ ಸಿಂಗ್/ಎಲವೆನಿಲ್ ವಲರಿವನ್: 10ಮೀ ಏರ್ ರೈಫಲ್ ಮಿಶ್ರ ತಂಡ
ಅರ್ಜುನ್ ಬಾಬುತಾ/ರಮಿತಾ ಜಿಂದಾಲ್: 10ಮೀ ಏರ್ ರೈಫಲ್ ಮಿಶ್ರ ತಂಡ
ಅರ್ಜುನ್ ಚೀಮಾ: ಪುರುಷರ 10 ಮೀ ಏರ್ ಪಿಸ್ತೂಲ್
ಸರಬ್ಜೋತ್ ಸಿಂಗ್: ಪುರುಷರ 10 ಮೀ ಏರ್ ಪಿಸ್ತೂಲ್
ಮನು ಭಾಕರ್: ಮಹಿಳೆಯರ 10 ಮೀ ಏರ್ ಪಿಸ್ತೂಲ್
ರಿದಮ್ ಸಾಂಗ್ವಾಮ್: ಮಹಿಳೆಯರ 10 ಮೀ ಏರ್ ಪಿಸ್ತೂಲ್
ವಿಜಯವೀರ್ ಸಿಧು: ಪುರುಷರ 25 ಮೀ ರ್‍ಯಾಪಿಡ್ ಫೈರ್ ಪಿಸ್ತೂಲ್
ಅನೀಶ್ ಭನ್ವಾಲಾ: ಪುರುಷರ 25 ಮೀ ರ್‍ಯಾಪಿಡ್ ಫೈರ್ ಪಿಸ್ತೂಲ್
ಮನು ಭಾಕರ್: ಮಹಿಳೆಯರ 25 ಮೀ ಪಿಸ್ತೂಲ್
ಇಶಾ ಸಿಂಗ್: ಮಹಿಳೆಯರ 25 ಮೀ ಪಿಸ್ತೂಲ್
ಸರಬ್ಜೋತ್ ಸಿಂಗ್/ಮನು ಭಾಕರ್: 10ಮೀ ಏರ್ ಪಿಸ್ತೂಲ್ ಮಿಶ್ರ ತಂಡ
ಅರ್ಜುನ್ ಚೀಮಾ/ರಿದಮ್ ಸಾಂಗ್ವಾಮ್: 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತೀಯ ಕ್ರೀಡಾಪಟುಗಳ ಪಟ್ಟಿ

ಆರ್ಚರಿ

ಪುರುಷರ ತಂಡ
ಧೀರಜ್ ಬೊಮ್ಮದೇವರ
ತರುಣ್ ದೀಪ್ ರಾಯ್
ಪ್ರವೀಣ್ ಜಾಧವ್
ಮಹಿಳಾ ತಂಡ
ಭಜನ್ ಕೌರ್
ದೀಪಿಕಾ ಕುಮಾರಿ
ಅಂಕಿತಾ ಭಕತ್

ಅಥ್ಲೆಟಿಕ್ಸ್

ಪುರುಷರು
ಅಕ್ಷದೀಪ್ ಸಿಂಗ್: 20 ಕಿಮೀ ಓಟದ ನಡಿಗೆ
ವಿಕಾಶ್ ಸಿಂಗ್:ಫ 20 ಕಿಮೀ ಓಟದ ನಡಿಗೆ
ಪರಮ್‌ಜೀತ್ ಸಿಂಗ್ ಬಿಶ್ 20 ಕಿಮೀ ಓಟದ ನಡಿಗೆ
ಮಹಿಳಾ
ಪ್ರಿಯಾಂಕಾ ಗೋಸ್ವಾಮಿ: ಮಹಿಳೆಯರ 20 ಕಿ.ಮೀ ಓಟದ ನಡಿಗೆ
ಅವಿನಾಶ್ ಸೇಬಲ್: ಪುರುಷರ 3000ಮೀ ಸ್ಟೀಪಲ್ಚೇಸ್
ಪಾರುಲ್ ಚೌಧರಿ: ಮಹಿಳೆಯರ 3000ಮೀ ಸ್ಟೀಪಲ್ ಚೇಸ್, ಮಹಿಳೆಯರ 5000ಮೀ ಸ್ಟೀಪಲ್ ಚೇಸ್
ಜ್ಯೋತಿ ಯರ್ರಾಜಿ: ಮಹಿಳೆಯರ 100ಮೀ ಹರ್ಡಲ್ಸ್
ಕಿರಣ್ ಪಹಲ್: ಮಹಿಳೆಯರ 400 ಮೀ

ಎಸೆತಗಳು

ತಜಿಂದರ್‌ಪಾಲ್ ಸಿಂಗ್ ತೂರ್: ಪುರುಷರ ಶಾಟ್‌ಪುಟ್
ಅಭಾ ಖತುವಾ: ಮಹಿಳೆಯರ ಶಾಟ್‌ಪುಟ್
ನೀರಜ್ ಚೋಪ್ರಾ: ಪುರುಷರ ಜಾವೆಲಿನ್ ಎಸೆತ
ಕಿಶೋರ್ ಜೆನಾ: ಪುರುಷರ ಜಾವೆಲಿನ್ ಎಸೆತ
ಅಣ್ಣು ರಾಣಿ: ಮಹಿಳೆಯರ ಜಾವೆಲಿನ್ ಎಸೆತ

ಜಿಗಿತ

ಸರ್ವೇಶ್ ಕುಶಾರೆ: ಪುರುಷರ ಎತ್ತರ ಜಿಗಿತ
ಪ್ರವೀಣ್ ಚಿತ್ರವೆಲ್: ಪುರುಷರ ಟ್ರಿಪಲ್ ಜಂಪ್
ಅಬ್ದುಲ್ಲಾ ಅಬೂಬಕರ್: ಪುರುಷರ ಟ್ರಿಪಲ್ ಜಂಪ್

ರಿಲೇ

ಪುರುಷರ 4400 ಮೀ ರಿಲೇ ತಂಡ
ಮುಹಮ್ಮದ್ ಅನಸ್ ಯಾಹಿಯಾ, ಮುಹಮ್ಮದ್ ಅಜ್ಮಲ್, ಅಮೋಜ್ ಜಾಕೋಬ್, ಸಂತೋಷ್ ತಮಿಳರಸನ್ ಮತ್ತು ರಾಜೇಶ್ ರಮೇಶ್
ಮಿಜೋ ಚಾಕೊ ಕುರಿಯನ್: 4400ಮೀ ರಿಲೇ ಮತ್ತು 4400ಮೀ ಮಿಶ್ರ ರಿಲೇ
ಮಹಿಳೆಯರ ರಿಲೇ ತಂಡ
ವಿದ್ಯಾ ರಾಮರಾಜ್, ಜ್ಯೋತಿಕಾ ಶ್ರೀ ದಂಡಿ, ಎಮ್‌ಆರ್ ಪೂವಮ್ಮ, ಶುಭಾ ವೆಂಕಟೇಶನ್ ಮತ್ತು ಪ್ರಾಚಿ: ಮಹಿಳೆಯರ 4400 ಮೀ ರಿಲೇ
ಪ್ರಾಚಿ: 4400ಮೀ ಮಿಶ್ರ ರಿಲೇ

ಮ್ಯಾರಥಾನ್

ಪ್ರಿಯಾಂಕಾ ಗೋಸ್ವಾಮಿ/ಸೂರಜ್ ಪನ್ವಾರ್: ರೇಸ್ ವಾಕ್ ಮಶ್ರ ಮ್ಯಾರಥಾನ್

ಬ್ಯಾಡ್ಮಿಂಟನ್

ಎಚ್‌ಎಸ್ ಪ್ರಣಯ್: ಪುರುಷರ ಸಿಂಗಲ್ಸ್
ಲಕ್ಷ್ಯ ಸೇನ್: ಪುರುಷರ ಸಿಂಗಲ್ಸ್
ಪಿವಿ ಸಿಂಧು: ಮಹಿಳೆಯರ ಸಿಂಗಲ್ಸ್
ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ: ಪುರುಷರ ಡಬಲ್ಸ್
ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ: ಮಹಿಳೆಯರ ಡಬಲ್ಸ್

ಬಾಕ್ಸಿಂಗ್

ನಿಖತ್ ಜರೀನ್: ಮಹಿಳೆಯರ 50 ಕೆಜಿ
ಅಮಿತ್ ಫಂಗಲ್: ಪುರುಷರ 51 ಕೆಜಿ
ನಿಶಾಂತ್ ದೇವ್: ಪುರುಷರ 71 ಕೆಜಿ
ಪ್ರೀತಿ ಪವಾರ್: ಮಹಿಳೆಯರ 54 ಕೆಜಿ
ಲೊವ್ಲಿನಾ ಬೊರ್ಗೊಹೈನ್: ಮಹಿಳೆಯರ 75 ಕೆಜಿ
ಜೈಸ್ಮಿನ್ ಲಂಬೋರಿಯಾ: ಮಹಿಳೆಯರ 57 ಕೆಜಿ
ಕುದುರೆ ಸವಾರಿ
ಅನುಷ್ ಅಗರ್ವಾಲಾ: ಡ್ರೆಸ್ಸೇಜ್

ಗಾಲ್ಫ್

ಶುಭಂಕರ್ ಶರ್ಮ : ಪುರುಷರ ಗಾಲ್ಫ್
ಗಗನ್ಜೀತ್ ಭುಲ್ಲರ್ : ಪುರುಷರ ಗಾಲ್ಫ್
ಅದಿತಿ ಅಶೋಕ್ ಮಹಿಳಾ ಗಾಲ್ಫ್
ದೀಕ್ಷಾ ಡಗಾರ್: ಮಹಿಳಾ ಗಾಲ್ಫ್

ಹಾಕಿ (ಪುರುಷರ ಹಾಕಿ ತಂಡ)

ಪಿಆರ್ ಶ್ರೀಜೇಶ್, ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಗಿದಾಸ್, ಹಮನ್‌ಪ್ರೀತ್ ಸಿಂಗ್, ಸುಮಿತ್, ಸಂಜಯ್, ರಾಜ್‌ಕುಮಾರ್ ಪಾಲ್, ಶಂಶೇರ್ ಸಿಂಗ್, ಮನ್‌ಪ್ರೀತ್‌ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಅಭಿಷೇಕ್, ಸುಖಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಮನದೀಪ್ ಸಿಂಗ್, ಗುಜರಾಂತ್ ಸಿಂಗ್.

ಜೂಡೋ

ತುಲಿಕಾ ಮಾನ್: ಮಹಿಳೆಯರ 78 ಕೆ.ಜಿ
ರೋಯಿಂಗ್
ಬಲರಾಜ್ ಪನ್ವಾರ್
ನೌಕಾಯಾನ
ವಿಷ್ಣು ಸರವಣನ್: ಪುರುಷರ ಒನ್ ಪರ್ಸನ್ ಡಿಂಗಿ
ನೇತ್ರಾ ಕುಮನನ್: ಮಹಿಳೆಯರ ಏಕ ವ್ಯಕ್ತಿ ಡಿಂಗಿ

ಈಜು

ಧಿನಿಧಿ ದೇಸಿಂಗು: ಮಹಿಳೆಯರ 200 ಮೀ ಫ್ರೀಸ್ಟೈಲ್
ಶ್ರೀಹರಿ ನಟರಾಜ್: ಪುರುಷರ 100 ಮೀ ಬ್ಯಾಕ್ ಸ್ಟ್ರೋಕ್

ಟೇಬಲ್ ಟೆನಿಸ್

ಶರತ್ ಕಮಲ್: ಪುರುಷರ ಸಿಂಗಲ್ಸ್ ಮತ್ತು ಪುರುಷರ ತಂಡ
ಹರ್ಮೀತ್ ದೇಸಾಯಿ: ಪುರುಷರ ಸಿಂಗಲ್ಸ್ ಮತ್ತು ಪುರುಷರ ತಂಡ
ಮಾನವ್ ಠಕ್ಕರ್: ಪುರುಷರ ತಂಡ
ಮನಿಕಾ ಬಾತ್ರಾ: ಮಹಿಳೆಯರ ಸಿಂಗಲ್ಸ್ ಮತ್ತು ಮಹಿಳಾ ತಂಡ
ಶ್ರೀಜಾ ಅಕುಲಾ: ಮಹಿಳೆಯರ ಸಿಂಗಲ್ಸ್ ಮತ್ತು ಮಹಿಳಾ ತಂಡ
ಅರ್ಚನಾ ಕಾಮತ್: ಮಹಿಳಾ ತಂಡ

ಟೆನಿಸ್

ಸುಮಿತ್ ನಗಲ್: ಪುರುಷರ ಸಿಂಗಲ್ಸ್
ರೋಹನ್ ಬೋಪಣ್ಣ ಮತ್ತು ಶ್ರೀರಾಮ್ ಬಾಲಾಜಿ: ಪುರುಷರ ಡಬಲ್ಸ್
ಭಾರ ಎತ್ತುವಿಕೆ
ಮೀರಾಬಾಯಿ ಚಾನು: ಮಹಿಳೆಯರ 49 ಕೆಜಿ

ಕುಸ್ತಿ

ಅಮನ್ ಸೆಹ್ರಾವತ್: ಪುರುಷರ ಫ್ರೀಸ್ಟೈಲ್ 57 ಕೆಜಿ
ವಿನೇಶ್ ಫೋಗಟ್: ಮಹಿಳೆಯರ 50 ಕೆಜಿ
ಅಂಶು ಮಲಿಕ್: ಮಹಿಳೆಯರ 57 ಕೆಜಿ
ನಿಶಾ ದಹಿಯಾ: ಮಹಿಳೆಯರ 68 ಕೆಜಿ
ರೀತಿಕಾ ಹೂಡಾ: ಮಹಿಳೆಯರ 76 ಕೆಜಿ
ಆಂಟಿಮ್ ಫಂಗಲ್: ಮಹಿಳೆಯರ 53 ಕೆಜಿ

ಸೈನಾ ಜತೆ ಮುರ್ಮು ಬ್ಯಾಡ್ಮಿಂಟನ್ ಆಟ

ದೆಹಲಿ: ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಅವರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬ್ಯಾಡ್ಮಿಂಟನ್ ಆಡಿದ್ದು, ಭಾರೀ ಸಂಚಲನ ಮೂಡಿಸಿದ್ದಾರೆ. ದೇಶಕ್ಕೆ ಸಂಬಂಧಿಸಿದ ಅನೇಕ ಕೆಲಸಗಳಲ್ಲಿ ನಿರತರಾಗಿದ್ದ ದ್ರೌಪದಿ ಮುರ್ಮು ಅವರು, ಇದೀಗ ಕ್ರೀಡೆಯ ಮೇಲಿನ ಉತ್ಸಾಹ ತೋರಿದ್ದಾರೆ.

ಈ ತುಣುಕೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ವಿಡಿಯೋ ಒಂದರಲ್ಲಿ ದ್ರೌಪದಿ ಮುರ್ಮು ಅವರು ಬ್ಯಾಡ್ಮಿಂಟನ್ ಆಡುತ್ತಿದ್ದರು. ರಾಷ್ಟ್ರಪತಿ ಭವನದಲ್ಲಿ ಬುಧವಾರ ರಾತ್ರಿ ನಡೆದ ಕ್ರೀಡಾ ಕಾರ್ಯಕ್ರಮದ ವೇಳೆ ದ್ರೌಪದಿ ಅವರು ಬ್ಯಾಡ್ಮಿಂಟನ್ ಆಡಿದ್ದಾರೆ. ಎದುರಾಳಿ ಸೈನಾ ವಿರುದ್ಧ ಅಂಕ ಪಡೆಯುವ ಮೂಲಕ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ದ್ರೌಪದಿ ಮುರ್ಮು ಅವರು ಅಂಕ ಪಡೆಯುತ್ತಿದ್ದಂತೆ ನೆರದಿದ್ದ ಕ್ರೀಡಾಪಟುಗಳು ಜೋರಾಗಿ ಚಪ್ಪಾಳೆ ತಟ್ಟುವ ಮೂಲಕ ಪ್ರೋತ್ಸಾಹಿಸಿದರು. ಸೈನಾ ಮತ್ತು ಮುರ್ಮು ಬ್ಯಾಡ್ಮಿಂಟನ್ ಆಡುತ್ತಿರುವ ವಿಡಿಯೋವನ್ನು ರಾಷ್ಟ್ರಪತಿ ಭವನ ತನ್ನ ಅಧಿಕೃತ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದೆ.



5 ಕೋಟಿ ಸಹಾಯಕ ಸಿಬ್ಬಂದಿಗೆ ಗಿಫ್ಟ್: ಮೊದಲೇ ಹೇಳಿದ್ದ ರೋಹಿತ್

ದೆಹಲಿ: ಭಾರತ ವಿಶ್ವಕಪ್ ಗೆದ್ದ ಮೇಲೆ ಆಟಗಾರರಿಗೆ ಭರ್ಜರಿ ಬಹುಮಾನಗಳನ್ನು ನೀಡಲಾಗಿತ್ತು. ಪ್ರಮುಖವಾಗಿ ಬಿಸಿಸಿಐ ಘೋಷಿಸಿದ್ದ 125 ಕೋಟಿ, ಐಸಿಸಿಯ 20.42 ಕೋಟಿ ಮುಂಬೈ ಸರಕಾರದಿಂದ ಬಂದಿದ್ದ 11ಕೋಟಿ ಸೇರಿ ಭಾರತಕ್ಕೆ ಬಹುಮಾನಗಳ ಸರಮಾಲೆಯೇ ಹರಿದುಬಂದಿತ್ತು. ಅದರಂತೆ ಬಿಸಿಸಿಐ ತಂಡದ ಆಟಗಾರರಿಗೆ ಸೇರಬೇಕಾದ ಹಣವನ್ನು ನೀಡಲು ಸಿದ್ಧತೆ ನಡೆಸಿದೆ. ಮೂಲಗಳ ಪ್ರಕಾರ ಭಾರತದ ಆಟಗಾರರಿಗೆ ಹಾಗೂ ಮುಖ್ಯ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರಿಗೆ 5 ಕೋಟಿ ಬಹುಮಾನ ಸಿಗಲಿದೆ ಎನ್ನಲಾಗಿತ್ತು. ಆದರೆ ಕೋಚ್ ರಾಹುಲ್ ದ್ರಾವಿಡ್ ಅವರು, ತಮ್ಮ ಹೆಚ್ಚುವರಿ ಹಣವನ್ನು ನಿರಾಕರಿಸಿ ಉಳಿದ ಕೋಚ್‌ಗಳಂತೆ 2.5 ಮೊತ್ತ ಮಾತ್ರ ಸ್ವೀಕರಿಸುವುದಾಗಿ ಹೇಳಿದ್ದರು. ಆದರೆ ಇದೀಗ ಮತ್ತೊಂದು ವರದಿ ಬೆಳಕಿಗೆ ಬಂದಿದ್ದು, ರಾಹುಲ್ ಅವರ ಮೊದಲೇ ನಾಯಕ ರೋಹಿತ್ ಶರ್ಮ ಅವರು ತಮ್ಮ ಪಾಲಿನ 5 ಕೋಟಿ ಹಣವನ್ನು ಕೋಚಿಂಗ್ ಸ್ಟಾಫ್‌ಗೆ ನೀಡುವುದಾಗಿ ಹೇಳಿದ್ದರು ಎನ್ನಲಾಗಿದೆ. ಈ ಬಗ್ಗೆ ಸಹಾಯಕ ಸಿಬ್ಬಂದಿ ಒಬ್ಬ ಹೇಳಿಕೆ ನೀಡಿದ್ದು, ನಾಯಕ ರೋಹಿತ್ ಶರ್ಮ ಅವರು ತಮ್ಮ ಬಹುಮಾನದ ಹಣವನ್ನು ಸಹಾಯಕ ಸಿಬ್ಬಂದಿಗೆ ನೀಡಲು ಸಿದ್ಧರಾಗಿದ್ದರು ಎಂದಿದ್ದಾರೆ.



ಊಟ ಮಾಡಿ ಬಳಿಕ ಕಥುವಾ ದಾಳಿಗೆ ಸಿದ್ಧತೆ

ಬೆದರಿಸಿ ಅಡುಗೆ ಮಾಡಿಸಿದ ಉಗ್ರರು

ಶ್ರೀನಗರ: ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಜು.8ರಂದು ಪರ್ವತ ಪ್ರದೇಶದ ತಿರುವು ರಸ್ತೆಯಲ್ಲಿ ಹೊಂಚು ಹಾಕಿ ಕೂತು ಭದ್ರತಾ ಪಡೆಗಳ 2 ವಾಹನಗಳ ಮೇಲೆ ಭಯೋತ್ಪಾದಕ ದಾಳಿ ನಡೆಸಿ ಐವರು ಯೋಧರ ಸಾವಿಗೆ ಕಾರಣವಾದ ಉಗ್ರರು, ಸಮೀಪದ ಗ್ರಾಮಕ್ಕೆ ತೆರಳಿ ಜನರನ್ನು ಬೆದರಿಸಿ ಅವರಿಂದ ಅಡುಗೆ ಮಾಡಿಸಿ ಊಟ ಮಾಡಿದ್ದರು. ಆ ಬಳಿಕವೇ ಸೇನಾ ವಾಹನಗಳ ಮೇಲೆ ಉಗ್ರ ದಾಳಿ ನಡೆಸಿದ್ದರು ಎಂದು ತಿಳಿದುಬಂದಿದೆ.

ಗ್ರಾಮಸ್ಥರಿಗೆ ಬಂದೂಕು ತೋರಿಸಿದ ಉಗ್ರರು ಬೆದರಿಸಿದ್ದರು. ಹಾಗಾಗಿಯೇ ಗ್ರಾಮದ ಜನತೆ ಅಡುಗೆ ಮಾಡಿ ಊಟ ಬಡಿಸಿದ್ದರು ಎಂದು ವರದಿಯಾಗಿದೆ. 'ಇಂಡಿಯ ಟುಡೇ' ಟಿವಿ ಪ್ರತಿನಿಧಿ ಗ್ರಾಮಕ್ಕೇ ತೆರಳಿ ಮಾಹಿತಿ ಸಂಗ್ರಹಿಸಿ ವರದಿ ಮಾಡಿದ್ದಾರೆ. ದಾಳಿಯ ಸಂದರ್ಭ ಭಯೋತ್ಪಾದಕರು ಬಾಡಿ ಕ್ಯಾಮೆರಾಗಳನ್ನು ಧರಿಸಿದ್ದರು. ಸೇನಾ ಯೋಧರ ಮೇಲೆ ದಾಳಿ ನಡೆಸಿದ ಬಳಿಕ ಅವರಿಂದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಯೋಜಿಸಿದ್ದರು. ಆದರೆ ಸೈನಿಕರು ಗುಂಡೇಟು ತಿಂದು ನೋವಿನಲ್ಲಿ ನರಳುತ್ತಿದ್ದರೂ ಪ್ರತಿರೋಧ ತೋರಿದರು. ಶಸ್ತ್ರಾಸ್ತ್ರಗಳು ಉಗ್ರರ ಕೈವಶವಾಗುವುದನ್ನು ತಡೆದರು ಎಂದು ಮೂಲಗಳಿಂದ ತಿಳಿದುಬಂದಿದೆ.

ಕಥುವಾ ಜಿಲ್ಲೆಯ ಬದ್ನೋಟಾ ಗ್ರಾಮದ ಬಳಿಯ ಕಡಿದಾದ ಮಚೇಡಿ-ಕಿಂಡ್ಲಿ-ಮಲ್ಹಾರ್ ಪರ್ವತದ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದ ಸೇನಾಪಡೆ ವಾಹನಗಳ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಜ್ಯೂನಿಯರ್ ಕಮಿಷನ್ಡ್ ಆಫೀಸರ್ ಸೇರಿದಂತೆ ಐವರು ಯೋಧರು ಸಾವನ್ನಪ್ಪಿ, ಐವರು ಗಾಯಗೊಂಡರು. ಕಳೆದೊಂದು ತಿಂಗಳಲ್ಲಿ ಜಮ್ಮು ಪ್ರದೇಶದಲ್ಲಿನ 5ನೇ ಭಯೋತ್ಪಾದಕ ದಾಳಿ ಇದಾಗಿತ್ತು.

ಉಗ್ರರ ಯೋಜಿತ ದಾಳಿ

ಭದ್ರತಾ ಪಡೆಗಳ ಶಿಬಿರಗಳಿಂದ ದೂರ, ಅರಣ್ಯ ಪ್ರದೇಶ ಸಮೀಪ, ಅದೂ ರಸ್ತೆ ಕಳಪೆ ಆಗಿರುವ ಸ್ಥಳಗಳಲ್ಲೇ ಸೇನಾ ವಾಹನಗಳ ಮೇಲೆ ದಾಳಿ ಯೋಜಿಸಿದ್ದಾರೆ. ತಿರುವುಗಳು, ಕೆಟ್ಟ ರಸ್ತೆ ಇರುವಲ್ಲಿ ವಾಹನಗಳ ವೇಗ ತಗ್ಗುತ್ತದೆ. ಆಗ ದಾಳಿ ಸುಲಭ. ಸಮೀಪದಲ್ಲೇ ಅರಣ್ಯವಿದ್ದರೆ ತಪ್ಪಿಸಿಕೊಳ್ಳುವುದು ಸಲೀಸು ಎಂಬುದೇ ಅವರ ಯೋಜನೆಯಾಗಿದೆ ಎಂದು ಸೇನೆಯ ಮೂಲಗಳು ವಿಶ್ಲೇಷಿಸಿವೆ.

ತಮಿಳುನಾಡು ಬಂದರಲ್ಲಿ 2560 ಕಿಲೊ ರಾಸಾಯನಿಕ ಪತ್ತೆ, ಜಪ್ತಿ ಮಾಡಿದ ಭದ್ರತಾ ಪಡೆ

ಚೀನಾದಿಂದ ಪಾಕಿಸ್ತಾನಕ್ಕೆ ನಿಷೇಧಿತ ದ್ರಾವಣ ಸಾಗಣೆ

ಚೆನ್ನೈ: ಅಶ್ರುವಾಯು ತಯಾರಿಸಲು ಮತ್ತು ಗಲಭೆ ನಿಯಂತ್ರಣ ಸಾಮಗ್ರಿ ಸಿದ್ಧಪಡಿಸಲು ಬಳಸುವ ಕೆಲವು ರಾಸಾಯನಿಕಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿಷೇಧಕ್ಕೊಳಗಾಗಿವೆ. ಅಂತಹ ನಿಷೇಧಿತ ರಾಸಾಯನಿಕಗಳು ಚೀನಾದಿಂದ ಪಾಕಿಸ್ತಾನಕ್ಕೆ ಸಾಗಣೆಯಾಗುತ್ತಿದ್ದು, ಅಂತಹುದೊಂದು ಶಿಪ್‌ಮೆಂಟ್ ತಮಿಳುನಾಡಿನ ಬಂದರಿನಲ್ಲಿ ಪತ್ತೆಯಾಗಿದೆ. ಮಾಹಿತಿ ಪಡೆದ ಬಂದರಿನ ಭದ್ರತಾ ಸಂಸ್ಥೆಗಳ ಅಧಿಕಾರಿಗಳು ಕಂಟೇನರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪಾಕಿಸ್ತಾನ ಮಿತ್ರರಾಷ್ಟ್ರ ಚೀನಾದಿಂದ ಆಕ್ರಮಣಕಾರಿ ರಾಸಾಯನಿಕಗಳನ್ನು ತರಿಸಿಕೊಂಡು ಜೈವಿಕ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆಯೇನೋ ಅನುಮಾನ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಚೀನಾದ 'ಚೆಂಗ್ಡು ಶಿಚೆನ್ ಟ್ರೇಡಿಂಗ್ ಕಂ.ಲಿ.' ಕಂಪನಿ ರಾವಲ್ಪಿಂಡಿ ಮೂಲದ ರಕ್ಷಣಾ ಪೂರೈಕೆದಾರ 'ರೊಹೇಲ್ ಎಂಟರ್‌ಪ್ರೈಸಸ್'ಗೆ ಆರ್ಥೋ-ಕ್ಲೋರೋ ಬೆಂಜೈಲಿಡೆನ್ ಮಲೋನೋನಿಟ್ರಿಲ್ ಡ್ರಮ್‌ಗಳನ್ನು ರವಾನಿಸಿದೆ. ಒಟ್ಟು 2560 ಕಿಲೋ ಶಿಪ್‌ಮೆಂಟ್ ನಲ್ಲಿ ತಲಾ 25 ಕೆಜಿಯ 103 ಡ್ರಮ್‌ಗಳು ಇದ್ದು, ನಿಷೇಧಿತ ರಾಸಾಯನಿಕವನ್ನು ತುಂಬಿಸ' ಲಾಗಿದೆ. 2024ರ ಏ.18ರಂದು ಚೀನಾದ ಶಾಂಘೈ ಬಂದರಿನಲ್ಲಿ ಈ ಶಿಪ್‌ಮೆಂಟ್ ಹಡಗಿಗೆ ಲೋಡ್ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರಾಚಿಗೆ ತೆರಳುತ್ತಿದ್ದ ಹಡಗು ಮೇ 8ರಂದು ತಮಿಳುನಾಡಿನ ಕಟ್ಟುಪಲ್ಲಿ ಬಂದರನ್ನು ತಲುಪಿದೆ. ಭಾರತದ ರಫ್ತು ನಿಯಂತ್ರಣ ಪಟ್ಟಿಯ 'ನಿಷೇಧಿತ' ಶೀರ್ಷಿಕೆಯಲ್ಲಿರುವ ರಾಸಾಯನಿಕದ ಹೆಸರು ಹಡಗಿನ ಸರಕು ಸಾಗಣೆ ವಿವರಗಳಲ್ಲಿ ಕಾಣಿಸಿದ್ದರಿಂದ ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ನಡೆಸಿ ಶಿಪ್‌ಮೆಂಟ್ ವಶಕ್ಕೆ ತೆಗೆದುಕೊಂಡಿದ್ದಾರೆ. ಬಳಿಕ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ ಸೇರಿ 98 ದೇಶದ ಐಫೋನ್ ಬಳಕೆದಾರರಿಗೆ ಆ್ಯಪಲ್ ಎಚ್ಚರಿಕೆ

ಪೆಗಾಸಸ್ ಮಾದರಿ ಸ್ಪೈವೇರ್ ದಾಳಿ ಭೀತಿ

- ಐಫೋನ್ ಬಳಕೆದಾರರು ಯಾರು? ಏನೇನು ಮಾಡುತ್ತಾರೆ? ಎಂಬ ಮಾಹಿತಿ ಕದಿಯಲು ದಾಳಿ ನಡೆಸುತ್ತಿರಬಹುದು
- ಇಂತಹ ದಾಳಿಗಳನ್ನು ಪೂರ್ಣ ಖಚಿತ ವಾಗಿ ಪತ್ತೆಹಚ್ಚಲು ಸಾಧ್ಯವಿಲ್ಲ. ಆದರೂ ಈ ಎಚ್ಚರಿಕೆ ನಂಬಲರ್ಹವೆಂದ ಕಂಪನಿ

ದೆಹಲಿ: ಭಾರತ ಸೇರಿದಂತೆ 98 ದೇಶಗಳಲ್ಲಿ ಐಫೋನ್‌ಗಳ ಮೇಲೆ 'ಪೆಗಾಸಸ್' ರೀತಿಯಲ್ಲೇ ಹೊಸ ಸ್ಪೈವೇರ್‌ಗಳು ದಾಳಿ ಮಾಡುವ ಸಾಧ್ಯತೆ ಇದೆ ಎಂದು 'ಆಪಲ್' ಕಂಪನಿ ಮುನ್ನೆಚ್ಚರಿಕೆ ನೀಡಿದೆ.



ಐಫೋನ್ ಬಳಕೆದಾರರು ಯಾರು? ಏನೇನು ಮಾಡುತ್ತಾರೆ? ಮೊದಲಾದ ಮಾಹಿತಿ ಗಳನ್ನು ಕದಿಯಲು ಈ ದಾಳಿ ನಡೆಸುತ್ತಿರ ಬಹುದು. ಇಂತಹ ದಾಳಿಗಳನ್ನು ಪೂರ್ಣ ಖಚಿತವಾಗಿ ಪತ್ತೆಹಚ್ಚಲು ಸಾಧ್ಯವಿಲ್ಲ. ಆದರೂ ಈ ಎಚ್ಚರಿಕೆ ನಂಬಲರ್ಹ. ಗಂಭೀರವಾಗಿ ಪರಿಗಣಿಸಿ ಎಂದು ಕಂಪನಿ ಹೇಳಿದೆ. 2023ರ ಅಕ್ಟೋಬರ್, ಈ ವರ್ಷದ ಏಪ್ರಿಲ್‌ನಲ್ಲೂ ಇದೇ ರೀತಿ ಎಚ್ಚರಿಕೆ ಕಳುಹಿಸಿತ್ತು.

ಇದೇ ವೇಳೆ, ತಮ್ಮ ಫೋನನ್ನು ಪೆಗಾಸಸ್ ಸ್ಪೈವೇರ್ ಹ್ಯಾಕ್ ಮಾಡಿದೆ ಎಂದು ಪಿಡಿಪಿ ಅಧ್ಯಕ್ಷೆ, ಜಮ್ಮು-ಕಾಶ್ಮೀರ ಮಾಜಿ ಮುಖ್ಯ ಮಂತ್ರಿ ಮೆಹಬೂಬಾ ಮುಫ್ತಿ ಅವರ ಪುತ್ರಿ ಇಲ್ತಿಜಾ ಮುಫ್ತಿ ಹೇಳಿದ್ದನ್ನಿಲ್ಲಿ ಉಲ್ಲೇಖಿಸ ಬಹುದು. ಭಾರತದಲ್ಲಿನ ಐಫೋನ್ ಬಳಕೆದಾ ರರು ಎನ್‌ಎಸ್‌ಒ ಗುಂಪಿನಿಂದ ಬರುವ ಪೆಗಾಸಸ್ ರೀತಿಯ ಸ್ಪೈವೇರ್‌ಗೆ ಗುರಿಯಾಗಬಹುದು ಎಂದು ಹೇಳಲಾಗಿದೆ. ಭಾರತ ಸರಕಾರ ಕೂಡ, ದೇಶದ ಆಪಲ್ ಐಫೋನ್ ಬಳಕೆದಾರರಿಗೆ ಫೋನ್‌ನಲ್ಲಿನ ಹಲವುದೋಷ ಗಳ ಬಗ್ಗೆ ಎಚ್ಚರಿಸಿತ್ತು.

ಸಮಾಚಾರ ಸಣ್ಣದಲ್ಲ

ಅನುವಾದ ಪ್ರಶಸ್ತಿ ಪ್ರದಾನ ಇಂದು

ಬೆಂಗಳೂರು: ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ ಕಾರ್ಯಕ್ರಮವನ್ನು ಜುಲೈ 12 ಶುಕ್ರವಾರ ಸಂಜೆ 5.30ಕ್ಕೆ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್ ವಹಿಸಲಿದ್ದು, ಅನುವಾದ ಪ್ರಶಸ್ತಿಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಹಾಗೂ ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷ ಕುಮುದ್ ಶರ್ಮ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಅನಿರೀಕ್ಷಿತ ಕನ್ನಡ ಕಿರುಚಿತ್ರ ಬಿಡುಗಡೆ

ಬೆಂಗಳೂರು: ಜಯನಗರದ ಅಮೆಚೂರ್ ಕಲ್ಚರಲ್ ಅಕಾಡೆಮಿ ವತಿಯಿಂದ ನಿರ್ಮಾಣ ಮಾಡಲಾದ ಅನಿರೀಕ್ಷಿತ ಕನ್ನಡ ಕಿರುಚಿತ್ರ ಬಿಡುಗಡೆ ಸಮಾರಂಭ ಕಾರ್ಯಕ್ರಮವನ್ನು ಜುಲೈ 13 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ಜೆಪಿನಗರ ಕ್ಲಬ್‌ನಲ್ಲಿ ಆಯೋಜಿಸಲಾಗಿದೆ. ಈ ಕಿರುಚಿತ್ರವನ್ನು ಚಲನಚಿತ್ರ ನಿರ್ದೇಶಕ ಡಾ. ಪ್ರಸನ್ನ ಕುಮಾರ್‌ರ ಪರಿಕಲ್ಪನೆ ಮತ್ತು ಪ್ರಧಾನ ನಿರ್ದೇಶನದಲ್ಲಿ, ಕನ್ನಡ ಧಾರಾವಾಹಿ ನಿರ್ದೇಶಕ ನಾಗೇಶ್ ಮಾರ್ಗದರ್ಶನದಲ್ಲಿ ನಿರ್ಮಿಸಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕ ಪಟ್ಟಾಭಿರಾಮ ಶೇಷಾದ್ರಿ, ಆಗಮಿಸಲಿದ್ದು, ಇಸ್ರೋ ಸತ್ಯಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಕ್ತದಾನ ಶಿಬಿರ ಯಶಸ್ವಿ

ಬೆಂಗಳೂರು: ನಗರದಲ್ಲಿ ಡೆಂಘೀ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೋಗಿಗಳಿಗೆ ಉಚಿತವಾಗಿ ರಕ್ತ ನೀಡುವ ನಿಟ್ಟಿನಲ್ಲಿ ಲಯನ್ಸ್ ಕ್ಲಬ್ ಹಾಗೂ ಪೆಮ್ ಕೋ ಸಂಸ್ಥೆ ಯ ಸಹಯೋಗದಲ್ಲಿ ಶಿಲ್ಪಾ ಫೌಂಡೇಷನ್ ವತಿಯಿಂದ ಗುರುವಾರ ನಗರದಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಿತ್ತು. ಅಂದಾಜು 500ಕ್ಕೂ ಅಧಿಕ ಐಟಿ ಉದ್ಯೋಗಿಗಳು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು. ಶಿಬಿರದಲ್ಲಿ ಸಂಗ್ರಹವಾದ ರಕ್ತವನ್ನು ಕಿದ್ವಾಯಿ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಹಾಗೂ ಡೆಂಘೀ ಜ್ವರದಿಂದ ಬಳಲುತ್ತಿರುವವರಿಗೆ ಉಚಿತವಾಗಿ ನೀಡಲಾಗುತ್ತದೆ. ಎಲ್‌ಕೆಕ್ಯೂ ಸಂಸ್ಥೆಯ ನಿರ್ದೇಶಕ ಕಿಶೋರ್ ಮಾತನಾಡಿ, ಹಲವು ವರ್ಷಗಳಿಂದ ಶಿಲ್ಪಾ ಫೌಂಡೇಷನ್ ಸಂಸ್ಥೆ ಸಮಾಜಮುಖಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಪ್ರಶಂಸನೀಯ. ಹಲವು ಸಂಸ್ಥೆಗಳನ್ನು ಒಟ್ಟಿಗೆ ಸೇರಿಸಿ ಇಂತಹ ರಕ್ತದಾನ ಶಿಬಿರ ಸೇರಿ ಸಮಾಜಕ್ಕೆ ಅನಿವಾರ್ಯತೆವುಳ್ಳ ಕಾರ್ಯಕ್ರಮ ರೂಪಿಸುವ ಮೂಲಕ ಸೇವೆ ಸಲ್ಲಿಸುತ್ತಿರುವುದು ಇತರ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ಹರ್ಷಿತಾ ನಾಡಿಗ್ ಸಿಎ ಉತ್ತೀರ್ಣ

ಬೆಂಗಳೂರು: ನಗರದ ನಿವಾಸಿ, ಹಿರಿಯ ಪತ್ರಕರ್ತ ಶ್ರೀವತ್ಸ ನಾಡಿಗ್ ಅವರ ಪುತ್ರಿ ಹರ್ಷಿತಾ ಎಸ್. ನಾಡಿಗ್ ದೇಶದಲ್ಲಿನ ಉನ್ನತ ಮಟ್ಟದ ಪರೀಕ್ಷೆಗಳಲ್ಲಿಯೇ ಅತಿ ಕಠಿಣ ಎನ್ನುವ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಅಂತಿಮ ವರ್ಷದ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ.



'ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟ್ಸ್ ಆಫ್ ಇಂಡಿಯ' (ಐಸಿಎಐ) ಕಳೆದ ಮೇ ತಿಂಗಳಲ್ಲಿ ನಡೆಸಿದ್ದ ಸಿಎ ಇಂಟರ್ ಮತ್ತು ಅಂತಿಮ ವರ್ಷದ ಫಲಿತಾಂಶವನ್ನು ಗುರುವಾರ ಪ್ರಕಟಿಸಿದೆ. ಮೊದಲ ಮತ್ತು ಎರಡನೇ ಗುಂಪಿನ ಪರೀಕ್ಷೆಗಳಿಗೆ ಒಟ್ಟು 35,819 ಪರೀಕ್ಷಾರ್ಥಿಗಳು ಹಾಜರಾಗಿದ್ದರು. ಅವರಲ್ಲಿ ಅವರಲ್ಲಿ ಕೇವಲ 7122 (ಶೇ.19.88) ಮಂದಿಯಷ್ಟೇ ತೇರ್ಗಡೆ ಹೊಂದಿದ್ದಾರೆ. ಅವರಲ್ಲಿ ಹರ್ಷಿತಾ ಎಸ್. ನಾಡಿಗ್ ಕೂಡಾ ಒಬ್ಬಳು ಎಂಬುದು ಗಮನಾರ್ಹ

ಕಾಂಗ್ರೆಸ್ ಸರಕಾರ ದಲಿತ ವಿರೋಧಿ

ಬೆಂಗಳೂರು: ಸರಕಾರ ವಾಲ್ಮೀಕಿ ನಿಗಮದ ಹಗರಣದಲ್ಲಿ ಪರಿಶಿಷ್ಟ ಪಂಗಡದ ಜನಾಂಗಕ್ಕೆ ಬಳಕೆ ಆಗಬೇಕಾದ ಹಣವನ್ನು ನುಂಗಿಹಾಕೋ ಮೂಲಕ ದಲಿತರ ವಿರೋಧಿ ಸರಕಾರ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಎಸ್‌ಇಪಿ, ಎಸ್‌ಟಿಎಸ್ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿ ದೊಡ್ಡ ಪ್ರಮಾಣದಲ್ಲಿ ಸರಕಾರ ಅನ್ಯಾಯ ಮಾಡಿದೆ. ಬಿಜೆಪಿ ಸರಕಾರ ದಲಿತರ ಮೀಸಲಾತಿ ಜಾಸ್ತಿ ಮಾಡಿ ಕಲ್ಯಾಣಕ್ಕೆ ಮುಂದಾಗಿತ್ತು. ಆದರೆ, ಸಿದ್ದರಾಮಯ್ಯ ಸಚಿವ ಸಂಪುಟವು ದಲಿತರ ಹಣ ನುಂಗಿ ಹಾಕಲು ಸಹಮತ ವ್ಯಕ್ತಪಡಿಸಿರುವುದು ವಿಷಾದದ ಸಂಗತಿ ಎಂದರು.

{ ಎಂ.ಬಿ.ಪಾಟೀಲ್ } ಸಚಿವ

ರಾಜಕೀಯ ಒತ್ತಡಗಳನ್ನ ಇಟ್ಟುಕೊಂಡು ದಾಳಿ ಮಾಡುವ ಅವಶ್ಯಕತೆ ಇಲ್ಲ. ಸತ್ಯಾಸತ್ಯತೆ ಹೊರಗೆ ಬರಲಿದೆ. ನಾಗೇಂದ್ರ ತಪ್ಪು ಮಾಡಿದ್ದಾರೋ ಇಲ್ಲವೋ ಎಂಬುದು ಸಾಬೀತಾಗಬೇಕಲ್ಲವಾ?. ಅಧಿಕಾರಿಗಳ ಪಾತ್ರ ಇದೆಯಾ ಅನ್ನೋದು ಗೊತ್ತಾಗಬೇಕಲ್ಲವಾ?. ಈ ಹಿಂದೆಯೇ ಇ.ಡಿ. ದಾಳಿ ರಾಜಕೀಯ ಪ್ರೇರಿತ ಎಂಬುದು ಸಾಬೀತಾಗಿದೆ.

ಸತ್ಯಶೋಧನಾ ಸಮಿತಿ ಮುಂದೆ ಪರಾಜಿತ ಅಭ್ಯರ್ಥಿಗಳ ದೂರು | ಸ್ವಪಕ್ಷೀಯರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ನಾಯಕರು

ಕಾಂಗ್ರೆಸ್ ಸೋಲಿಗೆ ಹೊಂದಾಣಿಕೆಯೇ ಕಾರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಟಾರ್ಗೆಟ್ 15ರೊಂದಿಗೆ ಲೋಕಸಭಾ ಚುನಾವಣೆಗೆ ಧುಮುಕಿದ್ದ ಕಾಂಗ್ರೆಸ್ ಹಿನ್ನಡೆಗೆ ಸ್ವಪಕ್ಷೀಯರ ಹೊಂದಾಣಿಕೆಯೇ ಕಾರಣವೆಂದು ಪರಾಜಿತ ಅಭ್ಯರ್ಥಿಗಳು ಆರೋಪಿಸಿದ್ದಾರೆ.

ರಾಜ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸೀಟು ಲಭಿಸದಿರುವ ಬಗ್ಗೆ ಕಾರಣ ಹುಡುಕಲು ಎಐಸಿಸಿ ನೇಮಿಸಿರುವ ಸತ್ಯಶೋಧನಾ ಸಮಿತಿ ಮುಂದೆ ಹಲವು ನಾಯಕರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಶಾಸಕರು, ಸಚಿವರ ಬಗ್ಗೆ ವರಿಷ್ಠರಿಗೆ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸತ್ಯಶೋಧನಾ ಸಮಿತಿಯಲ್ಲಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಧುಸೂದನ ಮಿಸ್ತ್ರಿ, ಸಂಸದ ಗೌರವ್ ಗೊಗೋಯಿ ನೇತೃತ್ವದಲ್ಲಿ ಸರಣಿ ಸಭೆ ನಡೆಸಲಾಯಿತು. ಮೊದಲ ದಿನ ಎಐಸಿಸಿ ಪದಾಧಿಕಾರಿಗಳು, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ಹಿರಿಯ ನಾಯಕರು, ಸಚಿವರು, ಲೋಕಸಭೆ ಹಾಗೂ ರಾಜ್ಯ ಸಭಾ ಸದಸ್ಯರು, ಜಿಲ್ಲಾಧ್ಯಕ್ಷರು ಹಾಜರಿದ್ದರು. ಸಭೆಯ ಆರಂಭದಲ್ಲಿಯೇ ಈ ಚುನಾವಣೆಯಲ್ಲಿ ಸೋಲಿಗೆ ಹೊಂದಾಣಿಕೆ ಕಾರಣ ಎಂದು ಹಲವು ನಾಯಕರು ಆರೋಪಿಸಿದರು. ಇನ್ನು ಸೋಲಿಗೆ ಕಾರಣವಾದ ನಾಯಕರು ಎದುರಾದ ಸಮಯದಲ್ಲಿ ಅಂತರ ಕಾಯ್ದುಕೊಂಡು ಸಿಟ್ಟು ಹೊರಹಾಕಿದ ಘಟನೆ ನಡೆಯಿತು.

ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು, ಯಾವೆಲ್ಲ ಕ್ಷೇತ್ರದಲ್ಲಿ ಹೊಂದಾಣಿಕೆ ರಾಜಕೀಯ ಮಾಡಿದ್ದಾರೆ ಎನ್ನುವ ಪಟ್ಟಿ ನೀಡಿದ್ದಾರೆ. ಹಲವು ಕ್ಷೇತ್ರದಲ್ಲಿ ಗೆಲ್ಲುವ ಅವಕಾಶವಿದ್ದರೂ, ಪಕ್ಷದ ಅಭ್ಯರ್ಥಿಗಳು ಪರಾಭವಗೊಂಡಿದ್ದಾರೆ. ಈ ಹಂತದಲ್ಲಿಯೇ ಇದನ್ನು ಸರಿಪಡಿಸದಿದ್ದರೆ ಮುಂದಿನ ದಿನದಲ್ಲಿ ಇನ್ನಷ್ಟು ಹೊಡೆತ ಬೀಳಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ನಮ್ಮ ಅಭಿಪ್ರಾಯ ನೀಡಿದ್ದೇನೆ: ಇನ್ನು ಸಮಿತಿ ಭೇಟಿಯ ಬಳಿಕ ಮಾತನಾಡಿದ ಹಿರಿಯ ನಾಯಕ ಬಿ.ಕೆ ಹರಿಪ್ರಸಾದ್, ಸತ್ಯ ಶೋಧನಾ ಸಮಿತಿ ಬಂದಿದೆ. ಲೋಕಸಭೆಯಲ್ಲಿ ನಿರೀಕ್ಷಿತ ಸ್ಥಾನ ಬಂದಿಲ್ಲದ ಕಾರಣ ಹುಡುಕಲು ನಮ್ಮ ಅಭಿಪ್ರಾಯ ಸಂಗ್ರಹ ಮಾಡಿದ್ದಾರೆ. ಸವಿಸ್ತಾರವಾಗಿ ನಾವು ಹೇಳಿದ್ದೇವೆ ಎಂದರು. ಮುಂದೆ ಯಾವ ರೀತಿ ಕ್ರಮ ಆಗುತ್ತದೆ ನೋಡೋಣ ಎಂದ ಅವರು, ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ ವಿಧಾನಸಭೆಯಲ್ಲಿ ಆದ ಚುನಾವಣಾ ತಯಾರಿ ಲೋಕಸಭೆಯಲ್ಲಿ ಆಗಿಲ್ಲ. ಕಾರಣಗಳನ್ನು ನಾವು ಸಮಿತಿಗೆ ಕೊಟ್ಟಿದ್ದೇವೆ. ಕಳೆದ ಒಂದು ವರ್ಷದಿಂದ ಸರಕಾರ ಮತ್ತು ಪಕ್ಷ ಎಲ್ಲಿ ಎಡವಿದೆ, ಯಾವ ರೀತಿಯಲ್ಲಿ ಕೆಲಸ ಮಾಡಿದೆ ಅಂತ ಮಾಹಿತಿ ನೀಡಿದ್ದೇವೆ ಎಂದು ಹೇಳಿದರು.



ಕೆಪಿಸಿಸಿ ಕಚೇರಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಧುಸೂದನ ಮಿಸ್ತ್ರಿ ಸಂಸದ ಗೌರವ್ ಗೊಗೋಯಿ ನೇತೃತ್ವದಲ್ಲಿ ಸತ್ಯಶೋಧನಾ ಸಮಿತಿ ಸರಣಿ ಸಭೆ ನಡೆಯಿತು.

> ಸತ್ಯಶೋಧನಾ ಸಮಿತಿ ಮುಂದೆ ತಮ್ಮ ಕ್ಷೇತ್ರಗಳ ಬಗ್ಗೆ ವಿವರಣೆ ನೀಡಿದ್ದೇನೆ. ಕೆಲವು ಕಡೆ ಲೀಡ್ ಕಡಿಮೆಯಾಗಿದೆ, ನನ್ನ ಕ್ಷೇತ್ರದಲ್ಲಿ ಅಲ್ಪಪ್ರಮಾಣದ ಲೀಡ್ ಕಡಿಮೆ ಆಗಿದೆ. ಮುಂದೆ ಯಾವ ರೀತಿ ಕೆಲಸ ಮಾಡಬೇಕೆಂದೂ ತಿಳಿಸಿದ್ದೇನೆ. ಮುಂದಿನ ವಿಧಾನಸಭೆ ಚುನಾವಣೆಯ ಗೆಲುವಿನ ಬಗ್ಗೆಯೂ ಅಭಿಪ್ರಾಯ ಸಂಗ್ರಹ ಮಾಡಲಾಗಿದೆ.
>
> – ಎಂ.ಬಿ. ಪಾಟೀಲ್, ಸಚಿವ

ನಾಯಕರು ಹೇಳಿದ ಪ್ರಮುಖಾಂಶ

- ಗ್ಯಾರಂಟಿ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಸಹಾಯ ಮಾಡಿಲ್ಲ
- ಗ್ಯಾರಂಟಿ ಯೋಜನೆಯಿಂದ ಇತರೆ ಅಭಿವೃದ್ಧಿ ಯೋಜನೆಗೆ ಹಿನ್ನಡೆ
- ಮೋದಿ ವೇವ್‌ಅನ್ನು ಅರಿಯುವಲ್ಲಿ ಮತ್ತೊಮ್ಮೆ ವಿಫಲ
- ನೇಹಾ ಕೊಲೆ ಪ್ರಕರಣದ ಎರಡನೇ ಹಂತದ ಮತದಾನದ ವೇಳೆ ಪರಿಣಾಮ
- ಬಿಜೆಪಿಗೆ, ಜೆಡಿಎಸ್ ಮತಗಳು ವರ್ಗಾವಾಗುವುದಿಲ್ಲ ಎನ್ನಲಾಗಿತ್ತು. ಆದರೆ ಇದು ಸುಳ್ಳಾಯಿತು
- ಮೈಸೂರು, ಉತ್ತರ ಕನ್ನಡ, ಶಿವಮೊಗ್ಗ ಸೇರಿ ಹತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸಮರ್ಥ ಅಭ್ಯರ್ಥಿ ಕೊರತೆ

ಆಗಿರುವ ತಪ್ಪನ್ನು ಸರಿಪಡಿಸಿಕೊಳ್ಳುತ್ತೇವೆ; ಡಿಸಿಎಂ ಡಿಕೆಶಿ

ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಲ್ಲಿ ಎಡವಿದೆ ಎಂದು ಪರಾಮರ್ಶನೆ ನಡೆಸಿ, ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆಯಲ್ಲಿ ಒಂದು ಸ್ಥಾನ ಹೊಂದಿದ್ದವರು ಈಗ 9 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದೇವೆ. ನಾವು 14-15 ಸೀಟುಗಳನ್ನು ಗೆಲ್ಲುವ ನಿರೀಕ್ಷೆ ಇತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಎಲ್ಲಿ ಎಡವಿದ್ದೇವೆ ಎಂದು ಎಐಸಿಸಿಯ ಸಮಿತಿ ಸಮ್ಮುಖದಲ್ಲಿ ಪರಾಮರ್ಶನೆ ನಡೆಯಲಿದೆ. ಕೇವಲ ಕರ್ನಾಟಕ ಮಾತ್ರವಲ್ಲದೇ ದೇಶದೆಲ್ಲೆಡೆ ಈ ಪ್ರಕ್ರಿಯೆ ಮಾಡಲಾಗುತ್ತಿದೆ. ನಾನು ಕೂಡ ನಾಲ್ಕು ವಿಭಾಗಗಳ ವರದಿ ಕಳುಹಿಸಿಕೊಡಲಿದ್ದೇನೆ. ನಾನು ಹಾಗೂ ಮುಖ್ಯಮಂತ್ರಿಗಳು ಸೇರಿ ನಮ್ಮ ನಾಯಕರ ಜತೆ ಚರ್ಚೆ ಮಾಡಿ ಪರಾಮರ್ಶನೆ ಮಾಡುತ್ತೇವೆ. ಲೋಕಸಭೆ ಚುನಾವಣೆಯಲ್ಲಿ ಈ ಬಾರಿ ಅತ್ಯುತ್ತಮ ಅಭ್ಯರ್ಥಿಗಳನ್ನು ನಾವು ಕಣಕ್ಕಿಳಿಸಿದ್ದೆವು. ಎಲ್ಲಾ ಕಡೆ ಒಟ್ಟಾಗಿ ಚುನಾವಣೆ ನಡೆಸಲಾಗಿತ್ತು. ಆದರೆ ಜನರ ಮಧ್ಯೆ ಗುಪ್ತಗಾಮಿನಿಯಲ್ಲಿ ಯಾವ ವಿಚಾರ ಪರಿವರ್ತನೆ ಮಾಡಿದೆ ಎಂಬುದನ್ನು ಪತ್ತೆ ಹಚ್ಚಬೇಕು. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪರಿಣಾಮಕಾರಿಯಾಗಲಿದೆ ಎಂದು ನಾವು ಮೊದಲೇ ಅಂದಾಜಿಸಿದ್ದೆವು. ಮುಂದಿನ ದಿನಗಳಲ್ಲೂ ಅವರು ಒಟ್ಟಾಗಿರುತ್ತಾರೆ ಎಂದು ನಮಗೆ ಗೊತ್ತಿದೆ. ಅವರು ಹಾಗೆಯೇ ಇರಲಿ. ಅವರು ಒಟ್ಟಾಗಿದ್ದರೂ ನಾವು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕೋ ಮಾಡುತ್ತೇವೆ ಎಂದರು.

ಕಟ್ಟಡ ತ್ಯಾಜ್ಯ ಎಸೆದರೆ ದಂಡ

ಬೆಂಗಳೂರು: ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯು ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಟ್ಟಡ ತ್ಯಾಜ್ಯ ಸುರಿಯುವುದನ್ನು ನಿಯಂತ್ರಿಸಲು ಮುಂದಾಗಿದ್ದು, ಹೊಸ ಯೋಜನೆ ಜಾರಿಗೊಳಿಸಲು ಮುಂದಾಗಿದೆ.

ನಿರ್ಮಾಣ ಮತ್ತು ಕೆಡವಿ ಹಾಕಿರುವ ಕಟ್ಟಗಳ ಘನ ತ್ಯಾಜ್ಯವನ್ನು ಸಂಗ್ರಹಣೆ, ನಿರ್ವಹಣೆ ಮತ್ತು ಸಂಸ್ಕರಿಸಲು ಆಯ್ದ ಗುತ್ತಿಗೆದಾರರಿಗೆ ಜವಾಬ್ದಾರಿ ವಹಿಸಲು ನಿರ್ಧರಿಸಿದೆ. ಈ ಹೊಸ ನಿಯಮದ ಅನ್ವಯ ತ್ಯಾಜ್ಯವನ್ನು ವಿಲೇವಾರಿ ಮಾಡಲು ಬಯಸುವವರು ಪ್ರತ್ಯೇಕ ಶುಲ್ಕವನ್ನು ನೀಡಬೇಕಾಗುತ್ತದೆ. ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಾಗುತ್ತದೆ. ಗುತ್ತಿಗೆದಾರರ ಪ್ರತಿಕ್ರಿಯೆಯನ್ನು ಆಧರಿಸಿ ಶುಲ್ಕವನ್ನು ನಿಗದಿಪಡಿಸಲಾಗುವುದು ಎಂದು ಅಧಿಕಾರಿಗಳು ಹೇಳಿದರು. ಬಿಬಿಎಂಪಿಯ ಘನ ತ್ಯಾಜ್ಯ ನಿರ್ವ ಹಣಾ ವಿಭಾಗದಲ್ಲಿ ತ್ಯಾಜ್ಯ ವಿಲೇವಾರಿಗೆ ಚಿಕ್ಕಜಾಲ ಮತ್ತು ಬಾಗಲೂರು ವಿಭಾಗದಲ್ಲಿ ಇಬ್ಬರು ಗುತ್ತಿಗೆದಾರರನ್ನು ಗುರುತಿಸಿದೆ. ಆದರೆ ಇವರಿಬ್ಬರೂ ಶೇ.10 ರಷ್ಟು ತ್ಯಾಜ್ಯವನ್ನು ಮಾತ್ರ ಸಂಗ್ರಹಿಸುವ ಸಾಮರ್ಥ್ಯವನ್ನು ಮಾತ್ರ ಹೊಂದಿದ್ದಾರೆ. ಹೆಚ್ಚುವರಿಯಾಗಿ ಇನ್ನೂ 5 ಘನ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ನಿರ್ಧಾರ ಮಾಡಿದೆ ಎಂದರು.

ಅನಧಿಕೃತವಾಗಿ ಘನತ್ಯಾಜ್ಯವನ್ನು ಸಂಗ್ರಹಿಸಿದರೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸುರಿದರೆ 10 ಸಾವಿರ ರು.ವರೆಗೆ ದಂಡ ಪಾವತಿಸಬೇಕಾಗುತ್ತದೆ.

ಖಾಲಿ ನಿವೇಶನಗಳಲ್ಲಿ ಘನತ್ಯಾಜ್ಯ ವಿಲೇವಾರಿ

ಬೆಂಗಳೂರಿನಲ್ಲಿ ಅದರಲ್ಲೂ ಹೊರವಲಯದಲ್ಲಿ ಖಾಲಿ ನಿವೇಶನ, ರಸ್ತೆಗಳ ಅಕ್ಕಪಕ್ಕ ಕಟ್ಟಡ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಪ್ರಕರಣ ಹೆಚ್ಚಾ ಗುತ್ತಿದ್ದು, ಬಿಬಿಎಂಪಿ ಎಚ್ಚರಿಕೆ ನೀಡಿದರೂ ಪ್ರಯೋಜನವಾಗಿಲ್ಲ. ತ್ಯಾಜ್ಯ ಉತ್ಪಾದಕರೇ ಕಟ್ಟಡ ಮತ್ತು ಭಗ್ನಾವಶೇಷ ತ್ಯಜ್ಯದ ಸಂಗ್ರಹಣೆ ಮತ್ತು ವಿಲೇವಾರಿ ಮಾಲೀಕರದ್ದೇ ಎಂದು ಆದೇಶಿಸಿದ್ದರೂ ಯಾರೊಬ್ಬರು ಪಾಲನೆ ಮಾಡುತ್ತಿಲ್ಲ.

ಸರಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ದರ ವಸೂಲಿ | 22 ಪ್ರಯೋಗಾಲಯಗಳಿಗೆ ನೋಟಿಸ್

ಡೆಂಘೀ ಪತ್ತೆ ಪರೀಕ್ಷೆಗೆ ಹೆಚ್ಚು ಹಣ ವಸೂಲಿ

ಬೆಂಗಳೂರು: ಡೆಂಘೀ ಪರೀಕ್ಷೆಗೆ ಸರಕಾರ ನಿಗದಿ ಪಡಿಸಿದ್ದ ದರಕ್ಕಿಂತ ಹೆಚ್ಚುವರಿ ದರ ಪಡೆಯುತ್ತಿದ್ದ ನಗರದ 22 ಪ್ರಯೋಗಾಲಯಗಳಿಗೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ ಹಾಗೂ ಕೆಪಿಎಂಇ ಅಧಿನಿಯಮದನ್ವಯ ಆರೋಗ್ಯ ಇಲಾಖೆಯ ನೋಟಿಸ್ ನೀಡಿದೆ.

ಸರಕಾರ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚು ದರ ಪಡೆಯುತ್ತಿರುವ ಕುರಿತು ಮಾಧ್ಯಮಗಳ ವರದಿ ಪ್ರಕಟವಾದ ಹಿನ್ನೆಲೆಯಲ್ಲಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ (ಕೆ.ಪಿ.ಎಂ.ಇ.) ನೋಡಲ್ ಅಧಿಕಾರಿಗಳ ತಂಡವು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಹಾಗೂ ತಾಲೂಕು ಆರೋಗ್ಯಾಧಿಕಾರಿ ಬೆಂ.ಉತ್ತರ, ಬೆಂ.ದಕ್ಷಿಣ, ಬೆಂ.ಪೂರ್ವ ಮತ್ತು ಆನೇಕಲ್ ತಾಲೂಕು ವ್ಯಾಪ್ತಿಯ 31 ಖಾಸಗಿ ಸಂಸ್ಥೆಗಳಿಗೆ, ಆಸ್ಪತ್ರೆಗಳು ಹಾಗೂ ಪ್ರಯೋಗಾಲಯಗಳಿಗೆ ಗುರು ವಾರ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಿದರು.

ಈ ವೇಳೆ 22 ಪ್ರಯೋಗಾಲಯಗಳು ಸರಕಾರ ನಿಗದಿ ಪಡಿಸಿರುವುದಕ್ಕಿಂತ (ಡೆಂಘೀ ಎಲಿಸಾ ಎನ್‌ಎಸ್1ಗೆ 300 ರು., ಡೆಂಘೀ ಎಲಿಸಾ 1ಜಿಎಂ 300 ರು., ರ‍್ಯಾಪಿಡ್ ಕಾರ್ಡ್ ಟೆಸ್ಟ್ ಎನ್‌ಎಸ್1, 1ಜಿಎಂ ಮತ್ತು 1ಜಿಜಿ 250 ರು.) ಡೆಂಘೀ ಪರೀಕ್ಷೆಗೆ ಹೆಚ್ಚುವರಿ ದರ ಪಡೆಯುತ್ತಿದದ್ದು ದೃಢಪಟ್ಟಿದೆ. ಅವರ ವಿರುದ್ಧ ಕೆಪಿಎಂಇ ಅಧಿನಿಯಮದನ್ವಯ ನೋಟಿಸ್ ನೀಡಲಾಗಿದ್ದು, ಸದರಿ ಕೇಂದ್ರಗಳಿಗೆ ಕಾಯ್ದೆಯಡಿ ಕ್ರಮಕ್ಕೆ ಸೂಚಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಹೆಚ್ಚುವರಿ ದರ ಪಡೆದರೆ ದೂರು ಸಲ್ಲಿಸಿ

ಡೆಂಘೀ ಪರೀಕ್ಷೆಗೆ ಸರಕಾರ ನಿಗದಿ ಪಡಿಸಿರುವುದಕ್ಕಿಂತ ಹೆಚ್ಚುವರಿ ದರ ಪಡೆಯುವ ಆಸ್ಪತ್ರೆ ಹಾಗೂ ಪ್ರಯೋಗಾಲಯಗಳ ವಿರುದ್ಧ ಸಾರ್ವಜನಿಕರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ, ಹಳೆ ಕ್ಷಯರೋಗಿಗಳ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು - 38. ಅಥವಾ ಮೊ: 9449843037ಗೆ ದೂರು ಸಲ್ಲಿಸಬಹುದಾಗಿದೆ.

ರಾಜ್ಯದಲ್ಲಿ 8 ಸಾವಿರ ಗಡಿ ದಾಟಿದ ಡೆಂಘೀ

ಬೆಂಗಳೂರು: ರಾಜ್ಯದಲ್ಲಿ ಗುರುವಾರ ಒಂದೇ 381 ಹೊಸ ಡೆಂಘೀ ಪ್ರಕರಣಗಳು ವರದಿಯಾಗಿರುವುಗಿರುವುದಾಗಿ ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಎಷ್ಟೆಲ್ಲ ಜನಜಾಗೃತಿ, ಮುಂಜಾಗ್ರತಾ ಕ್ರಮಗಳ ಹೊರತಾಗಿ ಡೆಂಘೀ ನಿಯಂತ್ರಣಕ್ಕೆ ಬರುತ್ತಿಲ್ಲ. ಇದರಿಂದಾಗಿ ಪ್ರಕರಣಗಳ ಸಂಖ್ಯೆ 8 ಸಾವಿರ ಗಡಿ ದಾಡಿದೆ. ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ 2,503 ಶಂಕಿತ ಡೆಂಘೀ ಪರೀಕ್ಷೆಗಳನ್ನು ನಡೆಸಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 171, ಮೈಸೂರು 44, ಹಾಸನ 38, ಚಿತ್ರದುರ್ಗ 20, ಮಂಡ್ಯ 18, ತುಮಕೂರು 17, ದಾವಣಗೆರೆ 16, ಚಿಕ್ಕಮಗಳೂರು 12, ವಿಜಯಪುರ 10 ಸೇರಿ ರಾಜ್ಯಾದ್ಯಂತ 293 ಪ್ರಕರಣಗಳು ವರದಿಯಾಗಿದೆ. ಈ ಪ್ರಕರಣಗಳಲ್ಲಿ ಒಂದು ವರ್ಷದೊಳಗಿನ ನಾಲ್ಕು ಮಕ್ಕಳು ಹಾಗೂ 1ರಿಂದ 18 ವರ್ಷದೊಳಗಿನ 140 ಮಂದಿ ಮತ್ತು 18 ವರ್ಷಗಳು ಮೇಲ್ಪಟ್ಟ 237 ಮಂದಿ ಡೆಂಘೀ ಪೀಡಿತರಾಗಿದ್ದಾರೆ. ರಾಜ್ಯದಲ್ಲಿ ಈವರೆಗೆ ವರದಿಯಾದ ಒಟ್ಟು ಡೆಂಘೀ ಪ್ರಕರಣಗಳ ಸಂಖ್ಯೆ 8,221ಕ್ಕೆ ಏರಿಕೆಯಾಗಿದೆ. ಏಳು ಮಂದಿ ಮೃಪಟ್ಟಿದ್ದಾರೆ. ಡೆಂಘೀ ಸೋಂಕಿತರಲ್ಲಿ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 362 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ ಮೇಟ್ರೋ, ಬಿಡಿಎ ಕಾಮಗಾರಿ ಆರಂಭ

ಕಾಮಗಾರಿ: ವಿಮಾನ ನಿಲ್ದಾಣಕ್ಕೆ ಬದಲಿ ಮಾರ್ಗ

ಬೆಂಗಳೂರು: ಬೆಂಗಳೂರು-ಬಳ್ಳಾರಿ ರಸ್ತೆಯಲಿರುವ ಹೆಬ್ಬಾಳ ಮೇಲ್ಸೇತುವೆಯೂ ವಿಮಾನ ನಿಲ್ದಾಣ ಮತ್ತು ಹೊರಜಿಲ್ಲೆ ಮತ್ತು ಹೊರರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆಯಲ್ಲಿ ಬಿಡಿಎ ಮತ್ತು ನಮ್ಮ ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ಬದಲಿ ಮಾರ್ಗ ಸೂಚಿಸಿದೆ.

ಪ್ರತಿದಿನ 2.5 ಲಕ್ಷಕ್ಕೂ ಅಧಿಕ ವಾಹನಗಳು ಸಂಚರಿಸುವುದರಿಂದ ಹಾಗೂ ಹೆಬ್ಬಾಳ ಫ್ಲೈಓವರ್ ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಸಂಚಾರದಿಂದ ಸಂಚಾರ ದಟ್ಟಣೆಯುಂಟಾಗುತ್ತದೆ. ಸಂಚಾರ ದಟ್ಟಣೆಯನ್ನು ನಿವಾರಿಸಲು ವಿವಿಧ ಕಾಮಗಾರಿ ಆರಂಭಗೊಂಡಿವೆ. ಬಿಡಿಎ ವತಿಯಿಂದ ಮೇಲ್ಸೇತುವೆ ಅಗಲೀಕರಣ ಹಾಗೂ ಮೆಟ್ರೋ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೀಕ್ ಅವರ್‌ಗಳಲ್ಲಿ ಸಂಚಾರ ನಿಧಾನಗತಿಯಲ್ಲಿರುತ್ತದೆ. ಇದರಿಂದಾಗಿ ಏರ್ ಪೋರ್ಟ್‌ಗೆ ಚಲಿಸುವ ವಾಹನಗಳು ನಿಗದಿತ ವೇಳೆಗೆ ಏರ್‌ಪೋರ್ಟ್ ತಲುಪಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಗಧಿತ ಅವಧಿಗಿಂತ ಎರಡು ಗಂಟೆ ಮುಂಚಿತವಾಗಿ ಪ್ರಯಾಣ ಪ್ರಾರಂಭಿಸಬೇಕು ಎಂದು ಸಂಚಾರಿ ಪೊಲೀಸ್ ಇಲಾಖೆ ಪ್ರಕಟಣೆ ಹೊರಡಿಸಿದೆ.

ಮಾರ್ಗ ಬದಲಾವಣೆ ಇಲ್ಲಿದೆ

ಕೆ.ಆರ್ ಪುರ-ಏರ್‌ಪೋರ್ಟ್ ಕಡೆಗೆ ತೆರಳಲು ಬಳಸಬೇಕಾದ ಮಾರ್ಗಗಳು:

- ಹೊರವರ್ತುಲ ರಸ್ತೆಯಲ್ಲಿ ಬಲ ತಿರುವು ಪಡೆದು ಹೆಣ್ಣೂರು ಕ್ರಾಸ್-ಬಾಗಲೂರು ರಸ್ತೆಯ ಏರ್ಪೋರ್ಟ್ ಪರ್ಯಾಯ ರಸ್ತೆಯ ಮೂಲಕ ವಿಮಾನ ನಿಲ್ದಾಣಕ್ಕೆ ಹೋಗಬೇಕು.
- ಹೊರವರ್ತುಲ ರಸ್ತೆಯಲ್ಲಿ ನಾಗವಾರ ಅಂಕ್ಷನ್ ಬಳ ಬಲ ತಿರುವು ಪಡೆದು ಥಣಿಸಂದ್ರ-ಹೆಗಡೆನಗರ ಮುಖ್ಯರಸ್ತೆ, ಬೆಳ್ಳಳ್ಳಿ ಸೇತುವೆ-ರೇವಾ ಜಂಕ್ಷನ್ ಮೂಲಕ ಬಲ ತಿರುವು ಪಡೆದು ಬಾಗಲೂರು ರಸ್ತೆಯ ಏರ್‌ಪೋರ್ಟ್ ಪರ್ಯಾಯ ರಸ್ತೆಯ ಮೂಲಕ ವಿಮಾನ ನಿಲ್ದಾಣಕ್ಕೆ ಹೋಗಬೇಕು.

ಕೆ.ಆರ್ ಪುರ – ಬೆಂಗಳೂರು ಕಡೆಗೆ ಬರುವ ವಾಹನಗಳು ಬಳಸಬೇಕಾದ ಮಾರ್ಗಗಳು:

- ಹೊರವರ್ತುಲ ರಸ್ತೆಯ ಮೂಲಕ ಚಲಿಸುವ ವಾಹನಗಳು ಐಓಸಿ-ಮುಕುಂದ ಥಿಯೇಟರ್ ರಸ್ತೆಯ ಅಂಗರಾಜಮರಂ ಮೇಲ್ಸೇತುವೆ ಮಾರ್ಗ ಮೂಲಕ ನಗರದ ಕಡೆಗೆ ಹೋಗಬಹುದು.
- ನಾಗವಾರ ಮತ್ತು ಬ್ಯಾನರಿ ರಸ್ತೆ ಮಾರ್ಗವಾಗಿ ನಗರಕ್ಕೆ ಪ್ರವೇಶಿಸಬಹುದು.

ಭಾರಿ ಮತ್ತು ಮಧ್ಯಮ ಗಾತ್ರದ ಸರಕು ಸಾಗಾಣಿಕ ವಾಹನಗಳ ಮಾರ್ಗ

- ಬೆಂಗಳೂರು-ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ದೇವನಹಳ್ಳಿಯ ರಾಣಿ ಕ್ರಾಸ್ ಬಳಿ ಎಡತಿರುವು ಪಡೆದು ಹೊಸಕೋಟೆ, ಕೋಲಾರ ಕಡೆಗೆ ಚಲಿಸಬೇಕು.
- ಬೆಂಗಳೂರು-ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ದೇವನಹಳ್ಳಿಯ ದೊಡ್ಡಬಳ್ಳಾಪುರ ಕ್ರಾಸ್ ಬಳಿ ಎಡತಿರುವು ಪಡೆದು ಹೊಸಕೋಟೆ, ಕೋಲಾರ ಕಡೆಗೆ ಚಲಿಸಬೇಕು.
- ಬೆಂಗಳೂರು-ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ವಿದ್ಯಾನಗರ ಕ್ರಾಸ್ ಬಳಿ ಎಡತಿರುವು ಪಡೆದು ರಜಾಕ್ ಪಾಳ್ಯ-ಬಾಗಲೂರು ಮೂಲಕ ಹೆಣ್ಣೂರು-ಕೆ.ಆರ್ ಪುರ ಮಾರ್ಗವಾಗಿ ನಗರದ ಕಡೆಗೆ ಚಲಿಸಬೇಕು.
- ದೊಡ್ಡಬಳ್ಳಾಪುರ ಕಡೆಯಿಂದ ನಗರದ ಕಡೆಗೆ ಬರುವ ವಾಹನಗಳು ರಾಜಾನುಕುಂಟೆ ಬಳಿ ಬಲ ತಿರುವು ಪಡೆದು ನೆಲಮಂಗಲ ಕಡೆಗೆ ಚಲಿಸುವುದು.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಬಸನಗೌಡ ಬಾದರ್ಲಿ ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಈ ವೇಳೆ ಸಚಿವ ಕೆ.ಎಚ್. ಮುನಿಯಪ್ಪ, ಎನ್.ಎಸ್. ಭೋಸರಾಜು, ಪರಿಷತ್ ಮುಖ್ಯ ಸಚೇತಕ ಹಾಗೂ ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್ ಸೇರಿ ಹಲವರಿದ್ದರು.

ಡಬಲ್‌ಡೆಕ್ಕರ್ ಸೇತುವೆ ಉದ್ಘಾಟನೆಗೆ ಸಿದ್ಧ

ಬೆಂಗಳೂರು: ಸಿಲ್ಕ್ ಬೋರ್ಡ್ ಜಂಕ್ಷನ್‌ನ ಸಂಚಾರ ದಟ್ಟಣೆಯ ನಿಯಂತ್ರ ಣಕ್ಕಾಗಿ ನಿರ್ಮಿಸಲಾದ ಡಬಲ್ ಡೆಕ್ಕರ್ ರಸ್ತೆ ಉದ್ಘಾಟನೆಗೆ ಸಿದ್ಧವಾಗಿದ್ದು, ದಕ್ಷಿಣ ಭಾರತದ ಮೊದಲ ಡಬಲ್ ಡೆಕ್ಕರ್ ಮೇಲ್ಸೇತುವೆ ಇದಾಗಿದೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಿ ವಾಹನಗಳ ಓಡಾಟಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಕೋನದಿಂದ ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ನವರೆಗೆ ನಿರ್ಮಿಸಲಾದ ದಕ್ಷಿಣ ಭಾರತದ ಮೊದಲ ಡಬಲ್ ಡೆಕ್ಕರ್ ಮೇಲ್ಸೇತುವೆ ಇದಾಗಿದೆ. ಜೂನ್ ಕೊನೆಯಲ್ಲೇ ಎಲ್ಲ ಕೆಲಸಗಳು ಮುಗಿದಿದ್ದು, ಮೇಲ್ಸೇತುವೆ ಉದ್ಘಾಟನೆ ಸಂಬಂಧ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸ ಲಾಗಿದೆ. 3.36 ಕಿಮೀ ಉದ್ದದ ಈ ಮೇಲ್ಸೇತುವೆ ರಾಗಿಗುಡ್ಡ ಮೆಟ್ರೋ ನಿಲ್ದಾಣದಲ್ಲಿ ಪ್ರಾರಂಭವಾಗುತ್ತಿದ್ದು, ಮೆಟ್ರೋ ಹಳದಿ ಲೈನ್‌ನ ಕೆಳಗೆ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಸಾಗಿದೆ.

ದಲಿತರಿಗೆ ಅನ್ಯಾಯ ಮಾಡಿದ ಕಾಂಗ್ರೆಸ್ ವಿರುದ್ಧ ಹೋರಾಟ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ದಲಿತರಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿಗೆ ವರ್ಗಾವಣೆ ಮಾಡಿ ದಲಿತರಿಗೆ ಅನ್ಯಾಯ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಆರೋಪಿಸಿದ್ದಾರೆ.

ನಗರದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಆರಂಭವಾದ ರಾಜ್ಯ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಕಾರ ಒಂದೆಡೆ, ದಲಿತರಿಗೆ ಮೀಸಲಿಟ್ಟ ಎಸ್‌ಇಪಿ ಟಿಎಸ್‌ಪಿ ಹಣವನ್ನು ಗ್ಯಾರಂಟಿಗೆ ವರ್ಗಾಯಿಸಿದರೆ, ಮತ್ತೊಂದೆಡೆ ವಾಲ್ಮೀಕಿ ನಿಗಮದ ಹಣವನ್ನು ಲೂಟಿ ಮಾಡಿ ಲೋಕಸಭಾ ಚುನಾವಣೆಗೆ ದುರ್ಬಳಕೆ ಮಾಡಿಕೊಂಡ ವಿಚಾರವನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿ ಹೋರಾಟ ಮಾಡುತ್ತಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅಹಿಂದ ನಾಯಕರು ಎಂದು ಹೇಳಿಕೊಂಡು ತಮ್ಮ ಬೆನ್ನನ್ನು ತಾವು ತಟ್ಟಿಕೊಂಡು, ದಲಿತರ ಉದ್ಧಾರಕರು ಎಂದು ಹೇಳಿ, ತಾವೇ ದಲಿತರ ಉದ್ಧಾರ ಮಾಡಿರುವುದಾಗಿ ತಮ್ಮ ಬಗ್ಗೆ ಕೊಚ್ಚಿಕೊಳ್ಳುತ್ತಾರೆ. ದಲಿತರಿಗೆ ಮೀಸಲಿಟ್ಟ 12 ಸಾವಿರ ಕೋಟಿ ಹಣವನ್ನು ಗ್ಯಾರಂಟಿಗೆ ವರ್ಗಾವಣೆ ಮಾಡಿ, ತದನಂತರ ಅಷ್ಟೇ ಮೊತ್ತ ವರ್ಗಾಯಿಸಿ, ಒಟ್ಟು 24,500 ಕೋಟಿ ಮೊತ್ತ ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಳ್ಳಲಾಗಿದ್ದು, ಈ ಕುರಿತು ದೆಹಲಿಯಿಂದ ಬಂದ ಪತ್ರಕ್ಕೆ ಸರಕಾರ ಉತ್ತರಿಸಬೇಕಿದೆ. ಇದನ್ನು ದಲಿತರಿಗೇ ಬಳಸಿದ್ದೇವೆ, ದುರುಪಯೋಗ ಆಗಿಲ್ಲ ಎಂದಿದ್ದಾರೆ. ಆದರೆ ಸರಕಾರ ದಲಿತರಿಗೆ ಅನ್ಯಾಯ ಮಾಡಿದ್ದು, ಇದು ಅಕ್ಷಮ್ಯ ಅಪರಾಧ. ಬಿಜೆಪಿ, ಸದನದ ಒಳಗೆ ಮತ್ತು ಹೊರಗೆ ಇದರ ವಿರುದ್ಧ ಹೋರಾಟ ಮುಂದುವರಿಸಲಿದೆ ಎಂದು ತಿಳಿಸಿದರು.

ದ್ವೈವಾರ್ಷಿಕ ಪ್ರವೇಶ ಮಾಡಿಕೊಳ್ಳಲು ಸಾಧ್ಯವಿಲ್ಲ: ಕೇಂದ್ರಕ್ಕೆ ಸರಕಾರ ತಿರುಗೇಟು | ಎರಡು ಬಾರಿ ಪ್ರವೇಶ ನೀಡುವುದರಿಂದ ಸಮಸ್ಯೆಯಾಗುತ್ತದೆ: ಉನ್ನತ ಶಿಕ್ಷಣ ಸಚಿವ ಸುಧಾಕರ್

ಯುಜಿಸಿ ನಿಯಮ ಪಾಲನೆ ಅಸಾಧ್ಯ

ಬೆಂಗಳೂರು: ಕೇಂದ್ರ ಸರಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಡ್ಡು ಹೊಡೆದು, ರಾಜ್ಯ ಶಿಕ್ಷಣ ನೀತಿಗೆ ಮುಂದಾ ಗಿರುವ ರಾಜ್ಯ ಸರಕಾರ ಇದೀಗ ಮತ್ತೊಂದು ಹೆಜ್ಜೆ ಮುಂದೆ ಹೋಗಿದ್ದು, ಯುಜಿಸಿಯ ನೂತನ ಮಾರ್ಗ ಸೂಚಿಯನ್ನು ಪಾಲಿಸಲು ಸಾಧ್ಯವಿಲ್ಲವೆಂದು ಹೇಳುವ ಮೂಲಕ ಮತ್ತೊಂದು ಸಂಘರ್ಷಕ್ಕೆ ಇಳಿದಿದೆ.

ವಿವಿಧ ವಿಷಯಗಳಲ್ಲಿ ಈಗಾಗಲೇ ಸಂಘರ್ಷಕ್ಕೆ ಇಳಿದಿರುವ ರಾಜ್ಯ ಸರಕಾರ ಇದೀಗ, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವರ್ಷಕ್ಕೆ ದ್ವೈವಾರ್ಷಿಕ ಪ್ರವೇಶಕ್ಕೆ ಅವಕಾಶ ನೀಡುವಂತೆ ಮಾರ್ಗಸೂಚಿ ಪ್ರಕಟಿಸಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಒಡ್ಡಲು ವಿದ್ಯಾರ್ಥಿಗಳಿಗೆ ಸಹಾಯವಾಗಲಿದೆ ಎನ್ನುವುದು ಯುಜಿಸಿಯ ಅಭಿಪ್ರಾಯ. ಆದರೆ ಈ ದ್ವೈವಾರ್ಷಿಕ ಪ್ರವೇಶದಿಂದ ಕಾಲೇಜುಗಳ ಮೇಲೆ ಒತ್ತಡ ಹೆಚ್ಚಾಗಲಿದೆ ಎಂದು ಹೇಳಿ ರಾಜ್ಯ ಸರಕಾರ ಈ ಮಾರ್ಗಸೂಚಿ ಪಾಲಿಸಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದೆ. ಪ್ರತಿ ಶೈಕ್ಷಣಿಕ ವರ್ಷಾರಂಭದ ನಂತರ ಜುಲೈ-ಆಗಸ್ಟ್ ಮತ್ತು ಜನವರಿ-ಫೆಬ್ರವರಿ ದ್ವೈವಾರ್ಷಿಕ ಪ್ರವೇಶ ಮಾದರಿಯನ್ನು ಅಳವಡಿಸಿಕೊಳ್ಳುವಂತೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ಸೂಚಿಸಿತ್ತು. ಹೊಸ ಮಾದರಿಯ ಪ್ರವೇಶಗಳು 2024-25ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಕ್ಕೆ ಬರಲಿದೆ ಎಂದಿತ್ತು. ಆದರೆ, ಈ ಮಾದರಿಯಲ್ಲಿ ಪ್ರವೇಶ ನೀಡಲು ಸಾಧ್ಯವಿಲ್ಲವೆಂದು ಯುಜಿಸಿಗೆ ಪತ್ರ ಬರೆಯಲು ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ದ್ವೈವಾರ್ಷಿಕ ಪ್ರವೇಶವೇಕೆ?:

ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅಗತ್ಯ ಅರ್ಹತೆಯಿದ್ದರೂ ಹಲವು ಕಾರಣಗಳಿಂದ ಸರಿಯಾದ ಸಮಯಕ್ಕೆ ಪ್ರವೇಶ ಪಡೆದಿದ್ದರೆ, ವಿದ್ಯಾರ್ಥಿಗಳ ಒಂದು ವರ್ಷ ವ್ಯರ್ಥವಾಗಲಿದೆ. ವರ್ಷ ಸಮಯವನ್ನು ವ್ಯರ್ಥ ಮಾಡದಂತೆ ಕ್ರಮವಹಿಸಲು, ವಿದ್ಯಾರ್ಥಿಗಳಿಗೆ ಹೊಸ ಪದ್ಧತಿಯಂತೆ ವರ್ಷಕ್ಕೆರಡು ಬಾರಿ ಪ್ರವೇಶ ಸೌಲಭ್ಯ ದೊರೆಯುವ ತನ್ನ ನಿಲುವನ್ನು ಯುಜಿಸಿ ಸಮರ್ಥಿಸಿಕೊಂಡಿದೆ. ವಿಶ್ವಾದ್ಯಂತ ಹಲವು ವಿಶ್ವವಿದ್ಯಾಲಯಗಳು ಈಗಾಗಲೇ ವರ್ಷಕ್ಕೆ ಎರಡು ಬಾರಿ ಪ್ರವೇಶ ನಿಯಮ ಅನುಸರಿಸುತ್ತಿವೆ. ಅದನ್ನು ಅಳವಡಿಸಿಕೊಂಡರೆ ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳು ಜಾಗತಿಕ ಸಹಯೋಗ ಮತ್ತು ವಿದ್ಯಾರ್ಥಿ ವಿನಿಮಯ ಹೆಚ್ಚಿಸಲು ನೆರವಾಗುತ್ತದೆ ಎಂದು ಯುಜಿಸಿ ಅಭಿಪ್ರಾಯಪಟ್ಟಿದೆ.

> ಉನ್ನತ ಶಿಕ್ಷಣಕ್ಕೆ ಸೇರ್ಪಡೆಯಾಗುವವರ ಪ್ರಮಾಣ ಶೇ.50ಕ್ಕೆ ಹೆಚ್ಚಿಸುವ ಗುರಿ ಸಾಧಿಸಲು ಎಲ್ಲ ಕಾಲೇಜುಗಳಲ್ಲಿಯೂ ವರ್ಷಕ್ಕೆ ಎರಡು ಬಾರಿ ಪ್ರವೇಶ ನೀಡಬೇಕೆನ್ನುವ ಸೂಚನೆ ಪಾಲಿಸಲು ಸಾಧ್ಯವಿಲ್ಲ. ಸರಕಾರಿ, ಖಾಸಗಿ ಕಾಲೇಜು ಗಳು ಅಧ್ಯಾಪಕರು ಸೇರಿದಂತೆ ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿವೆ. ಈಗಿರುವ ಪದ್ಧತಿ ಪ್ರಕಾರವೇ ಉನ್ನತ ಶಿಕ್ಷಣ ನೀಡುವುದು ಕಠಿಣ. ಇನ್ನು ಯಜಿಸಿಯ ಹೊಸ ನಿಯಮ ಪಾಲನೆ ಅಸಾಧ್ಯ.
>
> – **ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

ದಶಕದಲ್ಲಿ ಶೇ.50ಕ್ಕೆ ಏರಿಸುವ ಗುರಿ

ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಸೇರ್ಪಡೆಯಾಗುವವರ ಸಂಖ್ಯೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಆದ್ದರಿಂದ ಈ ಪ್ರಮಾಣವನ್ನು 2032ರ ಹೊತ್ತಿಗೆ ಶೇ.50ಕ್ಕೆ ಹೆಚ್ಚುವ ಗುರಿಯೊಂದಿಗೆ ದ್ವೈವಾರ್ಷಿಕ ಪ್ರವೇಶವನ್ನು ಪರಿಚಯಿಸಲು ಯುಜಿಸಿ ಮುಂದಾಗಿದೆ. ಇದರಿಂದಾಗಿ, ಮುಂದಿನ ದಿನದಲ್ಲಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಲಿದೆ ಎನ್ನುವುದು ಯುಜಿಸಿಯ ವಾದವಾಗಿದೆ.

@vishwavaninews
ಬೆಂಗಳೂರು
ಶುಕ್ರವಾರ
12|07|2024
ವಿಶ್ವವಾಣಿ
ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ಎಲ್ಲರ ಜೀವನದಲ್ಲಿಯೂ ಸಮಾಧಾನಪಡಿಸುವ, ಸಮಾಧಾನದ ಮಾತುಗಳನ್ನು ಬಯಸುವ ಮತ್ತು ಸ್ವೀಕರಿಸುವ ಸಂದರ್ಭಗಳು ಬಂದೇ ಬರುತ್ತದೆ. ಸಮಾಧಾನ ಮಾಡುವುದು ಅತ್ಯಂತ ಕ್ಲಿಷ್ಟ ಕೆಲಸಗಳಲ್ಲೊಂದು ಎಂದು ಎಲ್ಲರಿಗೂ ತಿಳಿದಿದೆ. ಸಮಾಧಾನ ಪಡಿಸುವುದು 'ಕೆಲಸ' ಎನ್ನುವುದಕ್ಕಿಂತ 'ಕಲೆ' ಎನ್ನುವುದು ಹೆಚ್ಚು ಸೂಕ್ತ.

ಸಮಾಧಾನಿಸುವ ಕಲೆ!

ಲೈಫ್ ಇಷ್ಟೇನೆ

● ರಂಜನಾ ಭಟ್, ಬೈಂದೂರು

ಸಮಾಧಾನದ ಮಾತುಗಳಿಗೆ ಮನಸ್ಸುಗಳನ್ನು ನಿರಾಳ ಮಾಡುವ ಶಕ್ತಿ ಇದೆ. ಅದೇ ರೀತಿಯಲ್ಲಿ ಹಳಿ ತಪ್ಪಿದ ಸಾಂತ್ವನದ ನುಡಿಗಳು ಅದೇ ಮನಸ್ಸನ್ನು ಇನ್ನೂ ಬಲಹೀನಗೊಳಿಸಬಲ್ಲುದು. ಕೆಲವರಿಗೆ ಬೇರೆಯವರಿಗೆ ಮನಮುಟ್ಟುವಂತೆ ಸಮಾಧಾನ ಮಾಡಲು ಬರುತ್ತದೆ. ಸಾಂತ್ವನದ ಮಾತುಗಳಿಂದ ಸಮಾಧಾನಪಟ್ಟುಕೊಳ್ಳುತ್ತಾರೋ ಇಲ್ಲವೋ ಆದರೆ ಹೆಚ್ಚಿನವರಿಗೆ ಸಮಾಧಾನದ ಮಾತುಗಳಂತೂ ಬೇಕೇ ಬೇಕು. ನಮ್ಮ ಕಷ್ಟದಲ್ಲಿ ಸಮಾಧಾನದ ಮಾತುಗಳನ್ನು ಬಯಸುವ ನಾವು ಇತರರನ್ನು ಸಮಾಧಾನಿಸುವ ಸಂದರ್ಭದಲ್ಲಿ 'ಹೇಗೆ ಸಮಾಧಾನ ಮಾಡುವುದು ಅಂತ ಗೊತ್ತಾಗಲ್ಲ' ಎನ್ನುತ್ತೇವೆ ಅಲ್ಲವೇ. ಏಕೆಂದರೆ ಅದು ಅಷ್ಟು ಸುಲಭದ ಕೆಲಸವಲ್ಲ.

ಸಾಮಾನ್ಯವಾಗಿ ನಮಗೆ ಇನ್ನೊಬ್ಬರಿಗೆ ಮೂರು ವಿಚಾರವಾಗಿ ಸಮಾಧಾನಪಡಿಸುವ ಪ್ರಸಂಗ ಬರುತ್ತದೆ. ಮೊದಲನೆಯದು ಯಾರಾದರೂ ಅಗಲಿದರೆ, ಎರಡನೆಯದು ಎದುರಿನ ವ್ಯಕ್ತಿ ತನ್ನ ತಪ್ಪಿಲ್ಲದೇ ನೋವು ಪಡುತ್ತಿದ್ದರೆ, ಮೂರನೆಯದು ಎದುರಿನ ವ್ಯಕ್ತಿ ತನ್ನ ತಪ್ಪಿನಿಂದ ಪಶ್ಚಾತ್ತಾಪ ಪಡುತ್ತಿದ್ದರೆ. ಮೊದಲನೆಯ ಸಂದರ್ಭದಲ್ಲಿ ಅಗಲಿದ ವ್ಯಕ್ತಿ ಏನು ಹೇಳಿದರೂ ಖಂಡಿತವಾಗಿ ಮರಳಿ ಬರಲಾರರು, ಅದೊಂದು ಆಘಾತ! ಆ ಸಂದರ್ಭದಲ್ಲಿ ನೋವಿನಲ್ಲಿರುವವರ ಜತೆ ನಾವಿದ್ದರೆ ಅದು ಅವರಿಗೆ ಸಣ್ಣ ಧೈರ್ಯ ನೀಡಬಹುದು. ಸಾಂತ್ವನದ ಮಾತುಗಳು ಧೈರ್ಯ ನೀಡುವ ಮಾತಾದರೆ ಒಳ್ಳೆಯದು. ಇನ್ನು ಎರಡನೇ ಮತ್ತು ಮೂರನೆಯ ಸಂದರ್ಭದಲ್ಲಿ ನಿಮ್ಮ ಮಾತುಗಳು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಏಕೆಂದರೆ ಅದರಿಂದ ವ್ಯಕ್ತಿ ಸಮಸ್ಯೆಯ ಸುಳಿಯಿಂದ ಹೊರಬರಬಹುದು, ನಿರಾಳತೆಯನ್ನು ಕ್ಷಿಪ್ರವಾಗಿ ಪಡೆಯಬಹುದು.

ನಂಬಿಕೆ ಉಳಿಸಿಕೊಳ್ಳಿ

ಯಾರಾದರೂ ನಿಮ್ಮ ಬಳಿ ತಮ್ಮ ಅಳಲನ್ನು ಹೇಳಿಕೊಳ್ಳುತ್ತಾರೆ ಎಂದರೆ ಅವರು ನಿಮ್ಮ ಮೇಲೆ ಸಂಪೂರ್ಣ ಭರವಸೆ ಇಟ್ಟಿದ್ದಾರೆ ಎಂದು ಅರ್ಥ. ಆ ನಂಬಿಕೆಯನ್ನು ಉಳಿಸಿಕೊಳ್ಳುವುದು ನಿಮ್ಮ ಕೈಯಲ್ಲೇ ಇರುವ ಕಾರಣ ಅವರು ಹೇಳಿದ ನೋವನ್ನು ಇತರರಿಗೆ ಹೇಳಬೇಡಿ, ಮುಂದೊಂದು ದಿನ ನಿಮ್ಮಿಬ್ಬರ ನಡುವೆಯೇ ವೈಮನಸ್ಸು ಬಂದರೆ ಅವರ ಕಥೆಯನ್ನು ಅಸ್ತ್ರವಾಗಿ ಬಳಸುವ ಕೀಳು ವ್ಯಕ್ತಿತ್ವ ಬೇಡ. ಒಬ್ಬರು ನಿಮ್ಮ ಬಳಿ ತಮ್ಮ ಜೀವನದ ವಿಷಯ ಹೇಳಿಕೊಳ್ಳುವಾಗ ನೀವು ವಿಮರ್ಶಾತ್ಮಕವಾಗಿರಬಾರದು. ನೋವಲ್ಲಿರುವವರು ಸಂಪೂರ್ಣವಾಗಿ ವಿಷಯ ಹೇಳುವ ಮೊದಲು ನೀವೇ ಸಾವಿರ ಪ್ರಶ್ನೆ ಕೆದಕಿ ಕೆದಕಿ ಕೇಳಬೇಡಿ. ಕೆಟ್ಟ



ಕುತೂಹಲದ ಪ್ರಶ್ನೆಗಳು ಬೇಡವೇ ಬೇಡ. ಅವರು ಸಂಪೂರ್ಣವಾಗಿ ವಿವರಿಸುವಷ್ಟು ಸಮಯ ಕೊಡಿ. ಶಾಂತವದನರಾಗಿ ಮತ್ತು ನಿಮ್ಮ ಗಮನ ಅವರ ಮಾತಿನ ಮೇಲೆ ಇಡಿ. ಸರಿಯೋ ತಪ್ಪೋ ಮುಂದಿನ ನಡೆ ಕೇಳುವಾಗ ನಿಮ್ಮ ಮುಖದ ಭಾವನೆಗಳು ಹೇಳುಗರ ಪರ ಇದ್ದರೆ ಒಳ್ಳೆಯದು, ಇದರಿಂದ ಹೇಳುಗರಿಗೆ ಹೇಳುವಾಗ ಅಳುಕು ಮೂಡುವುದಿಲ್ಲ.

ಮಾತುಗಳು ನಾಟಕೀಯವಾಗಿರದೆ ಇರಲಿ

ಸಾಂತ್ವನದ ಮಾತುಗಳು ನಾಟಕೀಯವಾಗಿರದೇ ಇರಲಿ. ಹೀಗೆ ಉದ್ದುದ್ದ ನಾಟಕದಲ್ಲಿ ಹೇಳುವಂತೆ ಡೈಲಾಗ್ ಹೇಳಬೇಡಿ. ಕೇಳಲು ಚೆನ್ನಾಗಿದ್ದರೂ ಇದು ಮನಸ್ಸಿಗೆ ನಾಟುವುದಿಲ್ಲ.ಸಮಸ್ಯೆಗಳನ್ನು ಕೇಳಿದ ಮೇಲೆ 'ಇದೆಲ್ಲಾ ಒಂದು ಸಮಸ್ಯೆನಾ? ಹಿಂದೆ ತ್ರೇತಾಯುಗದಲ್ಲಿ ರಾಮನಿಗೆ ಹಾಗಾಗಿತ್ತು, ಕೃಷ್ಣನಿಗೆ ಹೀಗಾಗಿತ್ತು' ಎಂದು ರಾಮಾಯಣ ಮಹಾಭಾರತದ ಕಥೆಗಳನ್ನು ಹೇಳಬೇಡಿ. ರಾಮ ಕೃಷ್ಣರು ಎದುರಿಸಿದ ಪರೀಕ್ಷೆಗಳು ಮಹಾಕಠಿಣವಾಗಿದ್ದರೂ ನಮ್ಮ

ಮನಸ್ಸು ವಾಸ್ತವದಲ್ಲಿಯೇ ಸುತ್ತುತ್ತಿರುತ್ತದೆ. ಐದು ಸಾವಿರ ವರ್ಷಗಳ ಹಿಂದಿರುವ ಪೌರಾಣಿಕ ಪಾತ್ರಗಳಿಗೆ ಜನರು ತಮ್ಮನ್ನು ಹೋಲಿಸಿಕೊಳ್ಳಲಾರರು. ಸಮಸ್ಯೆ ಹೇಳಿಕೊಳ್ಳುವವರು ಪರಿಹಾರದ ಹುಡುಕಾಟದಲ್ಲಿರುತ್ತಾರೆ.

ತಪ್ಪು ದಾರಿ ತೋರಿಸಬೇಡಿ

ಸಮಸ್ಯೆಗಳಿಗೆ ಪರಿಹಾರ ನೀಡಲು ಶಕ್ತಿ ಇಲ್ಲದಿದ್ದರೂ, ಸಾಂತ್ವನ ಹೇಳುವ ಶಕ್ತಿ ನಮಗಿದೆ ಅಲ್ಲವೇ. ಸಾಂತ್ವನದ ಮಾತುಗಳೆಂದರೆ ಧೈರ್ಯ ತುಂಬುವ ಮಾತುಗಳು. ಸಮಸ್ಯೆಗಳನ್ನು ಎದುರಿಸಲು ಶಕ್ತಿ ತುಂಬುವ ಮಾತುಗಳು, ಕುಗ್ಗಿದವರನ್ನು ಮೇಲೆತ್ತುವ ಮಾತುಗಳು. ಕತ್ತಲಲ್ಲಿದ್ದವರಿಗೆ ಪರಿಹಾರ ಎಂದೂ ಕಾಣದು. ಆದರೆ ಅದು ನಿಮಗೆ ಖಂಡಿತವಾಗಿ ಗೊತ್ತಾಗುತ್ತದೆ. ಹಾಗಾಗಿ ಅವರಿಗೆ ಸರಿಯಾದ ಪರಿಹಾರ ಸಾಧ್ಯವಾದರೆ ತಿಳಿಸಿ, ದಾರಿ ತಿಳಿಸದಿದ್ದರೂ ಪರವಾಗಿಲ್ಲ, ತಪ್ಪು ದಾರಿ ತೋರಿಸಬೇಡಿ. ಏಕೆಂದರೆ ಅದು ಕರ್ಮವಾಗಿ ನಿಮ್ಮ ಬೆನ್ನು ಹತ್ತುತ್ತದೆ. ಮುಂದೊಂದು ದಿನ ಅವರು ನೋವು ಮರೆತ ಮೇಲೆಯೂ ಮತ್ತೆ ಪುನಃ ನೀವು ಅದನ್ನೇ ನೆನಪಿಸಿ 'ಅಯ್ಯೋ ಆಗ ಹಾಗಾಗಿತ್ತಲ್ಲ' ಎಂದು ಸಾಂತ್ವನ ಹೇಳಲು ಹೋಗಿ ಕಿರಿಕಿರಿ ಮಾಡಬೇಡಿ.

ಮರುಗುವವರ ಬಗ್ಗೆ ಗೌರವ ಇರಲಿ

ಇನ್ನು ಕಷ್ಟ ಹೇಳಿಕೊಳ್ಳುವವರೂ ಯಾರು ಯಾರಿಗೋ ನಿಮ್ಮ ಕಷ್ಟ ಹೇಳಿಕೊಳ್ಳಬೇಡಿ, ಅದನ್ನು ದುರುಪಯೋಗ ಪಡಿಸಿಕೊಂಡು ಒಳಗೊಳಗೇ ಖುಷಿ ಪಡುವವರೇ ಜಾಸ್ತಿ. ಕಷ್ಟವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ 'ನಿನಗೆ ಬಿಡು ಏನೂ ಸಮಸ್ಯೆ ಇಲ್ಲ, ನನಗೆ ಮಾತ್ರ ಯಾಕೆ ಇಷ್ಟು ಕಷ್ಟ ಗೊತ್ತಾಗುತ್ತಿಲ್ಲ' ಎಂದು ಮಾತ್ರ ಹೇಳಬೇಡಿ. ಎಲ್ಲರಿಗೂ ಒಂದಲ್ಲಾ ಒಂದು ಕಷ್ಟ ಇರುತ್ತದೆ. ಕೆಲವರು ಹೇಳಿಕೊಳ್ಳುತ್ತಾರೆ. ಇನ್ನು ಕೆಲವರು ಒಳಗೊಳಗೇ ಕೊರಗುತ್ತಿರುತ್ತಾರೆ. ನಿಮ್ಮ ಕಷ್ಟಕ್ಕೆ ಸ್ಪಂದಿಸುವವರ ಬಗ್ಗೆ, ಮರಗುವವರ ಬಗ್ಗೆ ಗೌರವ ಇರಲಿ. ಕೆಲವರಿಗೆ ಹೇಳಿಕೊಳ್ಳಬೇಕೆಂದರೂ ಯಾರೂ ಇರುವುದಿಲ್ಲ, ನಿಮ್ಮ ಕಷ್ಟ ಕೇಳಲು ಸಮಯ ನೀಡುವವರಿದ್ದಾರೆ ಎಂದರೆ ನೀವು ಅದೃಷ್ಟವಂತರೇ ಸರಿ. ಏನೇ ಹೇಳಿ, ಎಷ್ಟೇ ಸಮಾಧಾನದ ಮಾತು ಕೇಳಿದರೂ ಸಮಾಧಾನ ಮಾಡಿಕೊಳ್ಳುವುದು ನಮ್ಮ ಕೈಯ್ಯಲ್ಲಿಯೇ ಇದೆ.ಆದರೂ ಇತರರು ಸಮಾಧಾನಿಸಿದಾಗ ಬೇಗ ಸಮಾಧಾನ ಸಿಗುತ್ತದೆ. ನಿಮ್ಮ ಮಾತಿನಿಂದ ಇತರರಿಗೆ ಸಮಾಧಾನ ಪಡೆದರೆ ನಿಮಗೂ ಸಮಾಧಾನ ಸಿಗುತ್ತದೆ. ಎಲ್ಲದಕ್ಕೂ ಸಮಾಧಾನದಿಂದ ಸಮಾಧಾನಿಸುವ ಕಲೆ ಗೊತ್ತಿರಬೇಕು ಅಷ್ಟೇ!

ಬಿ ಪಾಸಿಟಿವ್

ಬಯಕೆಗಳ ರಿಂಗಣದ ಸುಳಿಯಲಿ

ಮನುಷ್ಯ ಸ್ವಭಾವವೇ ಹಾಗೆ. ನಮಗೆ ಕಂಡ ವಸ್ತುಗಳೆಲ್ಲವನ್ನು ನಮ್ಮದಾಗಿಸಿಕೊಳ್ಳುವ ಬಯಕೆ ಮತ್ತೆ ಮತ್ತೆ ನಮ್ಮ ಮನದಾಳದಲ್ಲಿ ಇಣುಕುತ್ತಲೇ ಇರುತ್ತದೆ. ನಮ್ಮೆದುರು ಮುಲಾಜಿಲ್ಲದೇ ಅದು ಬೇಡಿಕೆಯನ್ನು ಸಲ್ಲಿಸುತ್ತಲೇ ಹೋಗುತ್ತದೆ. ಹೇಗಾದರೂ ಮಾಡಿ ಅದನ್ನು ಪಡೆಯುವಂತೆ ದುಂಬಾಲು ಬೀಳುವಂತೆ ಒತ್ತಾಯಿಸುತ್ತದೆ. ಒಂದು ಮಾಲ್‌ನಲ್ಲಿ ನಮಗೆ ಅಗತ್ಯವಿರುವ ವಸ್ತುಗಳನ್ನು ಕೊಂಡುಕೊಳ್ಳಲು ಹೋದಾಗ, ಅಲ್ಲಿರುವ ಇನ್ನು ಹಲವಾರು ವಸ್ತುಗಳ ಆಕರ್ಷಣೆಗೆ ಒಳಗಾಗುತ್ತೇವೆ. ಆ ಕ್ಷಣಕ್ಕೆ ಅವುಗಳ ಅಗತ್ಯಲ್ಲದಿದ್ದರೂ ಖರೀದಿಸಲು ನಾವು ಮುಂದಾಗುತ್ತೇವೆ. ಸಾಲ ಮಾಡಿಯಾದರೂ ಸರಿ ಮನೆಗೆ ಕೊಂಡೊಯ್ಯುತ್ತೇವೆ. ಅಗತ್ಯವಿಲ್ಲದಿರುವ ಸಂಗತಿಗಳನ್ನು ಬಯಸದಿರುವುದು ಒಂದು ಜಾಣತನವೇ ಸರಿ. ಇಂತಹದೊಂದು

ನಮ್ಮ ಸ್ವಭಾವ ನಮ್ಮ ನಿಯಂತ್ರಣದಲ್ಲಿ ಇರಬಹುದಾದ ಸಂಗತಿಯಾಗಿರುವುದರಿಂದ ನಾವು ಸುಲಭವಾಗಿ ನಿಯಂತ್ರಿಸಬಹುದು. ಮುಂದೆ ಬಂದೆರಗಬಹುದಾದ ಸಂಕಷ್ಟಗಳನ್ನು ತಡೆಯಬಹುದು. ಇನ್ನು ಕೆಲವು ಬಾರಿ ನಾವು ನಮಗೆ ಬೇಡವೆನಿಸುವ ಸಂಗತಿಗಳಿಂದ ದೂರವಿರಲು ಪ್ರಯತ್ನಿಸುತ್ತೇವೆ. ಅನಾರೋಗ್ಯ, ಸಾವು, ಅಪಘಾತ, ದುರಾದೃಷ್ಟಗಳು ನಮ್ಮ ಸುತ್ತ ಎಂದಿಗೂ ಸುಳಿಯದಿರಲಿ ಎಂದು ಬಯಸುತ್ತೇವೆ. ನಮ್ಮ ಅಸಮ್ಮತಿಯ ನಡುವೆಯೂ ಇವುಗಳು ಧುತ್ತೆಂದು ಬಂದೆರಗುತ್ತವೆ. ವಾಸ್ತವದಲ್ಲಿ ಇವುಗಳಿಂದ ನಾವು ಯಾರು ಯಾವಾಗಲೂ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಇವುಗಳೆಲ್ಲವೂ ನಮ್ಮ ನಿಯಂತ್ರಣಕ್ಕೆ ದಕ್ಕದವುಗಳು. ಇವುಗಳನ್ನು ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಲೇ ಬೇಕು. ಇವುಗಳನ್ನು ಒಂದಷ್ಟಾದರೂ ಸಕಾರಾತ್ಮಕವಾಗಿ ಸ್ವೀಕರಿಸುವ ಮನೋಸ್ಥೈರ್ಯ ನಾವು ರೂಢಿಸಿಕೊಳ್ಳಲೇ ಬೇಕು. ಬಯಕೆಗಳ ಮೇಲೆ ನಿಯಂತ್ರಣ ಸಾಧಿಸುವುದು ಸಂತಸದ ಮತ್ತು ನೆಮ್ಮದಿಯ ಬದುಕಿನ ಬಹು ಮುಖ್ಯ ತಳಹದಿಯಾಗಿದೆ. ಇಂತಹದೊಂದು ನಿಯಂತ್ರಣ ನಮಗೆ ದಕ್ಕಬೇಕಾದರೆ ನಮ್ಮ ನಿಯಂತ್ರಣಕ್ಕೆ ಒಳ ಪಡುವ ಮತ್ತು ಒಳಪಡದ ಸಂಗತಿಗಳ ನಡುವಿನ ಸೂಕ್ಷ್ಮ ಗೆರೆಯನ್ನು ನಿಖರವಾಗಿ ಅರ್ಥೈಸಿಕೊಳ್ಳುವುದು ಅತಿಮುಖ್ಯ.

● ಮಹಾದೇವ ಬಸರಕೋಡ

ಲವ್‌ಎವೆರಿ ಬಾಡಿ

ಮಹಿಳೆಯು ಜೀವನ ಪರ್ಯಂತ ತನ್ನ ಬಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾದುದು ಬಹಳ ಅಗತ್ಯ. ಯಾಕೆಂದರೆ, ಆಕೆಯ ದೇಹದಲ್ಲಾಗುವ ಹಾರ್ಮೋನಿನ ವ್ಯತ್ಯಾಸಗಳು, ವಸಡಿನ ಅಂಗಾಂಶಗಳೂ ಸೇರಿದಂತೆ ದೇಹದ ಅನೇಕ ಭಾಗಗಳ ಮೇಲೆ ಪರಿಣಾಮ ಬೀರುತ್ತವೆ. ಪರಿದಂತಶಾಸ್ತ್ರ/ಪೆರಿಯೋಡಾಂಟಾಲಜಿಯ ಒಂದು ಅಧ್ಯಯನ ವರದಿಯ ಪ್ರಕಾರ, 30-54ರ ನಡುವಿನ ವಯೋಮಾನದೊಳಗಿನ ಶೇ. 23ರಷ್ಟು ಮಹಿಳೆಯರಿಗೆ ಹಲ್ಲಿನ ಸುತ್ತಲಿನ ಅಂಗಾಂಶಗಳ ಉರಿಯೂತದ ಸಮಸ್ಯೆಯಿದೆ. ಆರಂಭದಲ್ಲಿ ಹಲ್ಲಿನ ಸುತ್ತಲಿನ ಅಂಗಾಂಶಗಳಲ್ಲಿ ಉರಿಯೂತದ ರೂಪದಲ್ಲಿ ಕಾಣಿಸಿಕೊಂಡು, ಆ ಮೇಲೆ ಹಲ್ಲಿನ ಮೂಳೆಗೂ ಹರಡುವ ಇದು, ಒಂದು ರೀತಿಯ ಸೋಂಕು ಕಾಯಿಲೆ. ಹಲ್ಲು ಕ್ರಮೇಣ ದುರ್ಬಲವಾಗಿ, ಹಲ್ಲನ್ನು ಕೀಳುವ ಮಟ್ಟಕ್ಕೆ ತಲುಪಬಹುದು. ಇದೊಂದು ರೀತಿಯ ಮೌನ ಕಾಯಿಲೆಯಾಗಿದೆ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ರಾಮ ನಾಮದ ಬೆಲೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ರಾಜೀವನೆಂಬ ಒಬ್ಬ ಹಠವಾದಿ ಹುಡುಗನಿಗೆ ಭಗವಂತನ ಮೇಲೆ ನಂಬಿಕೆಯೇ ಇರಲಿಲ್ಲ. ಅವನಿಗೆ ಹೇಗಾದರೂ ಭಗವಂತನಲ್ಲಿ ನಂಬಿಕೆ ಮೂಡಿಸಬೇಕು ಎನ್ನುವುದು ಅವನ ತಂದೆ ತಾಯಿಗಳ ನಿರಂತರ ಪ್ರಯತ್ನವಾಯಿತು. ಅವರು ಗುರುಗಳನ್ನು ಈ ಬಗ್ಗೆ ಆಗ್ರಹಿಸಿ ಮನೆಯಲ್ಲಿ ಒಂದು ದೊಡ್ಡ ಪೂಜೆಯನ್ನು ಆಯೋಜಿಸಿದರು. ದಿನಗಟ್ಟಲೆ ಮನೆಯಲ್ಲಿ ಪೂಜೆ ನಡೆಯುತ್ತಿದ್ದರೂ, ಅವನು ಒಂದು ಬಾರಿಯೂ ಪೂಜಾ ಸ್ಥಳದ ಕಡೆ ತಲೆ ಹಾಕಿಯೂ ನೋಡಲಿಲ್ಲ. ಕೊನೆಗೊಮ್ಮೆ ಅವನು ಪೂಜಾ ಸ್ಥಳದ ಬಾಗಿಲ ಕಡೆ ಹೋಗುತ್ತಿದ್ದಾಗ ಆ ಗುರುಗಳು ಅವನನ್ನು ಕೈಹಿಡಿದು, ಜೋರಾಗಿ ಎಳೆದರು. ಅವನು ಎಷ್ಟೇ ಹೇಳಿದರೂ ಪಟ್ಟು ಬಿಡಲಿಲ್ಲ. ಆಗ ಅವನು, 'ಅಯ್ಯೋ ರಾಮ, ನೀನೇ ನನ್ನನ್ನು ಕಾಪಾಡಬೇಕು' ಎಂದು ಜೋರಾಗಿ ಕಿರುಚಿದ. ಅಂತೂ ಮಗನ ಬಾಯಿಯಲ್ಲಿ ರಾಮ ನಾಮ ಬಂದಿತು ಎಂದು ತಂದೆ ತಾಯಿಗೆ ಸಂತೋಷವಾಯಿತು. ಆಗ ರಾಜೀವ, 'ಇವತ್ತೇನೋ ನನ್ನ ಬಾಯಿಂದ ಅನಿವಾರ್ಯವಾಗಿ ಭಗವಂತನ ಹೆಸರು ಬಂದಿರಬಹುದು. ಆದರೆ ಮುಂದೆ ಎಂದಿಗೂ ಹೀಗಾಗಲಾರದು' ಎಂದು ಸಿಟ್ಟಿನಿಂದ ಹೇಳಿದ. ಅದನ್ನು ಕೇಳಿದ ಗುರೂಜಿ ಅಷ್ಟೇ ನಮ್ರತೆಯಿಂದ, 'ಮುಂದೆ ಭವಿಷ್ಯದಲ್ಲಿ ನೀನು ರಾಮನ ಹೆಸರು ತೆಗೆದುಕೋ, ಇಲ್ಲ ಬಿಡು. ಒಂದನ್ನು ಮಾತ್ರ ಗಮನದಲ್ಲಿ ಇಟ್ಟುಕೋ, ನೀನು ಪ್ರಭು ಶ್ರೀರಾಮನ ಹೆಸರು ಹೇಳಿರುವಿ. ಅದರ ಮೌಲ್ಯ ನಿನಗೆ ತಿಳಿಯದು. ಅದನ್ನು ಮಾರಲು ಮಾತ್ರ ಹೋಗಬೇಡ.' ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಇದಾದ ಕೆಲವು ದಿನಗಳ ಮೇಲೆ ಒಂದು ದುರ್ಘಟನೆಯೊಂದರಲ್ಲಿ ರಾಜೀವನ ಮೃತ್ಯುವಾಗುತ್ತದೆ.

ಮೃತ್ಯುವಿನ ನಂತರ ಯಮನ ಆಸ್ಥಾನಕ್ಕೆ ಹೋಗುತ್ತಾನೆ. ಯಮನು 'ಈ ಬಾಲಕನ ಪಾಪ ಪುಣ್ಯಗಳ ವರದಿ ಕೊಡಿ' ಎಂದು

ಚಿತ್ರ ಗುಪ್ತರಿಗೆ ಹೇಳುತ್ತಾನೆ. ಚಿತ್ರಗುಪ್ತನು, 'ಪ್ರಭು, ಈ ಬಾಲಕನು ಎಂದೂ ಭಗವಂತನ ನಾಮ ಜಪಿಸಲಿಲ್ಲ. ಆದರೆ ಒಂದು ವಿಪತ್ತಿನ ಸಮಯದಲ್ಲಿ ಮಾತ್ರ ರಾಮನ ಹೆಸರು ಹೇಳಿದ್ದಾನೆ! ಇದರ ಯಾವ ಪುಣ್ಯ ಇವನಿಗೆ ಲಭಿಸಬಹುದೊ ನನಗಿಲ್ಲಿ ಕಾಣುತ್ತಿಲ್ಲ.'

ಒಂದೇ ಬಾರಿ ರಾಮ ನಾಮ ಜಪಿಸಿದ್ದರ ಫಲ ಏನು ಕೊಡಬಹುದು? ಎಂದು ಯಮರಾಜ ಯೋಚಿಸಿ ಆ .ಬಾಲಕನಿಗೆ

'ಮಗು ನೀನು ಒಂದೇ ಸಲ ರಾಮನ ಹೆಸರು ಹೇಳಿರುವಿ. ಇದರ ಫಲ ನಿನಗೆ ಏನು ಕೊಡುವುದೋ ನಮಗೆ ತಿಳಿಯುತ್ತಿಲ್ಲ. ಹೀಗಾಗಿ ನೀನೇ ನಿರ್ಣಯಿಸು. ಇದರ ಬದಲಿಗೆ ನೀನು ಏನು ಇಚ್ಛಿಸುತ್ತಿ? ಎಂದು ಹೇಳಿದ. ಇದನ್ನು ಕೇಳುತ್ತಿದ್ದಂತೆ ರಾಜೀವನಿಗೆ ಗುರೂಜಿಯವರ ಮಾತು ನೆನಪಿಗೆ ಬಂತು. 'ರಾಮ ಎಂಬ ಹೆಸರಿನ ಮೌಲ್ಯದ ಬಗ್ಗೆ ಪ್ರಶ್ನೆ ಬಂದರೆ ಎಂದಿಗೂ ಅದನ್ನು ಮಾರಿಕೊಳ್ಳಬೇಡ!' ಎನ್ನುವ ಈ ಯೋಚನೆ ಬಂದ ಕ್ಷಣ 'ಯಮರಾಜ, ನೀವೇ ನನಗೆ ಇದರ ಫಲ ಕೊಡಿ. ನನಗೆ ತಿಳಿಯದಾಗಿದೆ' ಎಂದ ವಿನಮ್ರತೆಯಿಂದ.

ಯಮರಾಜ ಮತ್ತು ಚಿತ್ರಗುಪ್ತ ಪರಿಹಾರ ತಿಳಿಯದೇ ವ್ಯಾಕುಲಗೊಂಡರು. ಅನಂತರ ಅವರಿಬ್ಬರೂ ಆ ಬಾಲಕನನ್ನು ಕರೆದುಕೊಂಡು ತಮ್ಮ ರಥದಲ್ಲಿ ಬ್ರಹ್ಮನ ಹತ್ತಿರ ತಲುಪಿದರು.

ಬ್ರಹ್ಮನಿಗೆ ಈ ವಿಚಾರಕ್ಕೆ ಉತ್ತರ ತಿಳಿಯಲಿಲ್ಲ ನಂತರ ಶಿವನನ್ನು ಕೂಡ ಕಂಡು ಇದಕ್ಕೆ ಪರಿಹಾರ ಕೊಡು ಎಂದರು. ಅವನಿಗೂ ಏನೂ ತೋಚಲಿಲ್ಲ. ಕೊನೆಗೆ ಇದಕ್ಕೆ ಪರಿಹಾರ ಕಂಡುಹಿಡಿಯಲು ವಿಷ್ಣು ಲೋಕ ತಲುಪಿದರು. ವಿಷ್ಣು ಲೋಕ ತಲುಪಿದ ಮೇಲೆ ಯಮರಾಜನು ಎಲ್ಲವನ್ನೂ ಹೇಳಿ ಮುಗಿಸಿ ತಮಗೆ ಕಾಡುವ ಪ್ರಶ್ನೆ ಕುರಿತು ಹೇಳಿದ. ಇದೆಲ್ಲ ಕೇಳಿ ವಿಷ್ಣುವಿನ ಮುಖದಲ್ಲಿ ಮಂದಹಾಸ ಮೂಡಿತು. ಜತೆಗೆ – ಈ ಬಾಲಕ ಒಂದೇ ಒಂದು ಸಲ 'ರಾಮ'ನ ಹೆಸರು ಹೇಳಿದ ಇದರ ಪ್ರತಿಯಲ್ಲಿ ಅವನಿಗೆ ಸಾಕ್ಷಾತ್ ಬ್ರಹ್ಮ, ಮಹೇಶ, ವಿಷ್ಣುವಿನ ದರ್ಶನ ಪ್ರಾಪ್ತವಾಯಿತು. ಇದಕ್ಕಿಂತ ಹೆಚ್ಚಿನ ಪುಣ್ಯ ಈ ಸಂಸಾರದಲ್ಲಿ ಏನಿದೆ?

ಭಗವಂತನ ನಾಮ ಸ್ಮರಣೆಯಿಂದ ಎಂದಿಗೂ ಯಾರಿಗೂ ನಷ್ಟವಾಗಿಲ್ಲ. ನರಜನ್ಮ ಬಂದಾಗ ನಾಲಿಗೆ ಇರುವಾಗ ರಾಮ, ಕೃಷ್ಣ ಎನಬಾರದೆ ?

ನೀಲಿ ಪುಷ್ಪದ ಮಹಿಮೆಯನ್ನು ಬಲ್ಲಿರಾ?

ಜಿಹ್ವಾಚಾಪಲ್ಯ

● ವೀಣಾ ಭಟ್

ನೀಲಿ ಬಣ್ಣದ ಶಂಖಪುಷ್ಪ ಹೂವನ್ನು ಎಲ್ಲರೂ ನೋಡಿರುತ್ತೀರಿ. ಇದು ಸಾಮಾನ್ಯ ಹೂವಲ್ಲ, ಹಲವಾರು ಔಷಧೀಯ ಗುಣಗಳನ್ನು ಹೊಂದಿದೆ. ಆಯುರ್ವೇದದಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಹಲವಾರು ಆರೋಗ್ಯ ಸಮಸ್ಯೆಗಳಿಗೆ ಔಷಧವಾಗಿ ಬಳಸಲಾಗುತ್ತದೆ. ಶಂಖಪುಷ್ಪಿ, ಶಂಖಿನಿ, ಕಂಬುಮಾಲಿನಿ, ಸಂಖಪುಷ್ಪಿ, ಸದಾಪುಲಿ ಮತ್ತು ಸಂಖಪುಲಿ ಎಂಬ ಸ್ಥಳೀಯ ಹೆಸರುಗಳಿಂದ ಕರೆಯಲ್ಪಡುತ್ತದೆ. ಶಂಖದ ಆಕಾರದ ಹೂವುಗಳಿಂದಾಗಿ ಈ ಹೂವಿಗೆ ಶಂಖಪುಷ್ಪ ಎಂಬ ಹೆಸರು ಬಂದಿದೆ. ಕ್ಲಿಟೋರಿಯ ಟರ್ನಟಾ ಎಂಬುದು ಸಸ್ಯಶಾಸ್ತ್ರದ ಹೆಸರು.

ಭಾರತದಲ್ಲಿ ಸ್ಥಳೀಯವಾಗಿ ಬೆಳೆಯುವ ಸಸ್ಯವಾಗಿದೆ. ಮಾರ್ನಿಂಗ್-ಗ್ಲೋರಿ, ಸ್ನೀಡ್ ವೀಲ್ ಅಥವಾ ಇಂಗ್ಲಿಷ್‌ನಲ್ಲಿ ಅಲೋ ವೀಡ್ ಎಂದು ಪ್ರಸಿದ್ಧವಾಗಿರುವ ಈ ಔಷಧೀಯ ಮೂಲಿಕೆಯು ಬಲ್ಬ್-ಆಕಾರದ ನೀಲಿ ಅಥವಾ ಬಿಳಿ ಹೂವುಗಳನ್ನು ಹೊಂದಿದೆ. ಇದರ ಎಲೆಗಳನ್ನು ಕೂಡಾ ಔಷಧವಾಗಿ ಬಳಸಲಾಗುತ್ತದೆ. ಸಂಸ್ಕೃತದಲ್ಲಿ ಮಾಂಗಲ್ಯ ಕುಸುಮ ಎಂದು ಕರೆಯಲಾ ಗುತ್ತದೆ. ಅಂದರೆ ಅದೃಷ್ಟ ಮತ್ತು ಆರೋಗ್ಯವನ್ನು ತರುವುದು ಎಂದರ್ಥ. ಈ ಹಾಲು-ಬಿಳಿ ಹೂವಿನ ಸಸ್ಯದ ಪ್ರತಿಯೊಂದು ಭಾಗವು ಹಲವಾರು ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಮತ್ತು ದೀರ್ಘಾಯುಷ್ಯವನ್ನು ಹೊಂದಲು ಅತ್ಯಂತ ಪ್ರಯೋಜನಕಾರಿಯಾಗಿದೆ.

ಮಾಂತ್ರಿಕ ಮೂಲಿಕೆಯ ಆರೋಗ್ಯ ಪ್ರಯೋಜನ

ಈ ಮಾಂತ್ರಿಕ ಮೂಲಿಕೆ ಹಲವಾರು ಆರೋಗ್ಯಸಮಸ್ಯೆಗಳಿಗೆ ಪರಿಹಾರವನ್ನು ಕೊಡುತ್ತದೆ. ಈ ಹೂ ಜ್ಞಾಪಕ ಶಕ್ತಿ ಮತ್ತು ಮೆದುಳಿನ ಟಾನಿಕ್ ಆಗಿದ್ದು ಅದು ಬುದ್ಧಿವಂತಿಕೆ ಮತ್ತು ಮೆದುಳಿನ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತದೆ. ಇವಲ್ಲದೆ ಜ್ಞಾಪಕಶಕ್ತಿ ವರ್ಧಕ, ವಾಂತಿ ನಿವಾರಕ ಮತ್ತು ಪಚನ ಕ್ರಿಯೆಗೆ ಸಹಾಯ ಮಾಡುತ್ತದೆ, ಹಸಿವನ್ನು ಪ್ರಚೋದಿಸುತ್ತದೆ, ಚರ್ಮದ ಕಾಯಿಲೆಗೆ ಚಿಕಿತ್ಸೆ ನೀಡುತ್ತದೆ. ಹೃದಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತದೆ, ಜಂತುಹುಳು ಸಮಸ್ಯೆಯನ್ನು ನಿವಾರಿಸುತ್ತದೆ. ಶಂಖಪುಷ್ಪದ ಸಿರಪ್ ಕಫ-ವಾತ-ಪಿತ್ತ ದೋಷಗಳನ್ನು ಶಾಂತಗೊಳಿಸುತ್ತದೆ. ಇದು ಏಕಾಗ್ರತೆ, ಕಲಿಕೆಯ ಸಾಮರ್ಥ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಮಾನಸಿಕ ಆಯಾಸ, ನಿದ್ರಾಹೀನತೆ, ಒತ್ತಡ, ಆತಂಕ, ಖಿನ್ನತೆ ಇತ್ಯಾದಿಗಳನ್ನು ಕಡಿಮೆ ಮಾಡುತ್ತದೆ. ಮೆದುಳಿನ ಕಾರ್ಯನಿರ್ವಹಣೆಯನ್ನು ಹೆಚ್ಚಿಸಲು ಸಾಂಪ್ರದಾಯಿಕ ಪರಿಹಾರವಾಗಿದೆ.

ಬ್ಲೂ ಫೀ ರೈಸ್- ಭಾರತೀಯ ಶೈಲಿ

ಮಾಡುವ ವಿಧಾನ- ಬಾಸುಮತಿ ಅಕ್ಕಿ -1 ಕಪ್
ಶಂಖಪುಷ್ಪ ಹೂಗಳು- 8
ತುಪ್ಪ-2 ಟೇಬಲ್ ಚಮಚ
ಈರುಳ್ಳಿ- ಮಧ್ಯಮಗಾತ್ರ-1
ದಾಲ್ಚೀನಿ ಎಲೆ-1
ಏಲಕ್ಕಿ-3
ಲವಂಗ-4
ಜಾಯಿಕಾಯಿ ಹೋಳು-2
ಗೋಡಂಬಿ-ದ್ರಾಕ್ಷಿ -1 ಚಮಚ,ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ; ಬಾಸುಮತಿ ಅಕ್ಕಿಯನ್ನು ತೊಳೆದು 10 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿಡಿ. ಎರಡು ಗ್ಲಾಸ್ ನೀರಿನಲ್ಲಿ ಶಂಖಪುಷ್ಪ ಹೂಗಳನ್ನು ಹಾಕಿ ಕುದಿಸಿ. ಹೂಗಳನ್ನು ಎತ್ತಿಟ್ಟು ನೀಲಿ ನೀರನ್ನು ಇಟ್ಟುಕೊಳ್ಳಿ. ಒಂದು ಬಾಣಲೆಯಲ್ಲಿ ತುಪ್ಪ ಹಾಕಿ ಏಲಕ್ಕಿ, ಲವಂಗ, ಜಾಯಿಕಾಯಿ, ದಾಲ್ಚೀನಿ ಎಲೆ ಇವುಗಳನ್ನು ಹಾಕಿ ಹುರಿದುಕೊಳ್ಳಿ. ನೀರುಳ್ಳಿ ಸೇರಿಸಿ ತುಸು ಗುಲಾಬಿ ಬಣ್ಣ ಬರುವವರೆಗೆ ಹುರಿಯಿರಿ. ನಂತರ ನೆನೆಸಿಟ್ಟ ಅಕ್ಕಿಯನ್ನು ಮತ್ತು ಉಪ್ಪನ್ನು ಸೇರಿಸಿ ಮಗುಚಿಕೊಳ್ಳಿ. ನೀಲಿ ನೀರನ್ನು ಸೇರಿಸಿ 10 ನಿಮಿಷಗಳ ಕಾಲ ಬೇಯಿಸಿ. ಕುದಿ ಬಂದ ಮೇಲೆ ಬಾಣಲೆ ಮುಚ್ಚಿ ಇಟ್ಟು ಉರಿ ಕಡಿಮೆ ಮಾಡಬೇಕು. ನಿಮ್ಮ ನೀಲಿ ಗೀ ರೈಸ್‌ನ್ನು ಮೊಸರು ಗೊಜ್ಜಿನೊಂದಿಗೆ ಸವಿಯಿರಿ.

ಇದರಲ್ಲಿರುವ ಶಕ್ತಿಯುತವಾದ ರೋಗ ನಿರೋಧಕಗಳು ಮತ್ತು ಫ್ಲೇವನಾಯ್ಡ್‌ಗಳು ಜ್ಞಾಪಕ ಶಕ್ತಿ, ಗಮನ, ಏಕಾಗ್ರತೆ, ಶಾಂತತೆ, ಜಾಗರೂಕತೆಯನ್ನು ಸುಧಾರಿಸುತ್ತದೆ. ಸಸ್ಯದಲ್ಲಿರುವ ನ್ಯೂರೋಪ್ರೊಟೆಕ್ಟಿವ್ ಅಂಶಗಳು ಮೆಮೊರಿ ನಷ್ಟವನ್ನು ತಡೆಯುತ್ತದೆ ಮತ್ತು ಮೆದುಳಿನ ಒತ್ತಡವನ್ನು ನಿವಾರಿಸುತ್ತದೆ.

ಇದರಿಂದ ರುಚಿಕರವಾದ ಖಾದ್ಯವನ್ನೂ ತಯಾರಿಸಬಹುದು. ಮಕ್ಕಳು ಇದರ ನೀಲಿ ಬಣ್ಣವನ್ನು ನೋಡಿ ಇಷ್ಟಪಟ್ಟು ತಿನ್ನುತ್ತಾರೆ. ಚಹದಲ್ಲಿ ಕೂಡಾ ಬಳಸಬಹುದು. ಯುರೋಪ್, ಜಪಾನ್, ಥೈಲ್ಯಾಂಡ್, ಚೀನಾ ದೇಶಗಳಲ್ಲೂ ಈ ಬ್ಲೂ ರೈಸ್ ಅನ್ನು ವಿವಿಧ ರೀತಿಯಲ್ಲಿ ತಯಾರಿಸುತ್ತಾರೆ.

ಪ ದ ಬಂ ಧ



ಎಡದಿಂದ ಬಲಕ್ಕೆ:

2. ದೇಹವಿಲ್ಲದ ಮನ್ಮಥ (3)
5. ಗುಡ್ಡಗಾಡಿನಲ್ಲಿ ವಾಸಿಸುವ ಮಂದಿ (4)
6. ಬಂಧನಕ್ಕೆ ಮತ್ತೊಂದು ಹೆಸರು (4)
7. ನೂಲು ತೆಗೆಯುವ ಯಂತ್ರ (3)
10. ಪದ್ಧತಿಗೆ ಮತ್ತೊಂದು ಹೆಸರು (3)
12. ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
13. ಸೂರ್ಯನಿಗೆ ಮತ್ತೊಂದು ಹೆಸರು (3)
15. ಒಳ್ಳೆಯ ನಗು (3)
19. ಶುದ್ಧೋದಕವನ್ನು ಮಂತ್ರಪೂರ್ವಕವಾಗಿ ಕುಡಿಯುವುದು (4)
20. ವಿದ್ಯಾರ್ಥಿಗಳು ಕುಳಿತು ಪಾಠ ಕೇಳುವ ಕಕ್ಷೆ (4)
21. ವರನ ನಡುವೆ ಇರುವವನು ಸಂಸ್ಥೆ ಅಥವಾ ಪಕ್ಷದ ಪರವಾಗಿ ಅಧಿಕೃತವಾಗಿ ಮಾತನಾಡುವವನು (3)

ಮೇಲಿನಿಂದಕೆಳಕ್ಕೆ:

1. ವಿಷ್ಣು ಮತ್ತು ಶಿವ ಜೊತೆಯಾದರೆ ಸಿಗುವ ಊರು (4)
2. ಬೇರೆಯಲ್ಲದ ಎಂದರ್ಥ (3)
3. ಜೋರುಮಾಡು ಅಥವಾ ಅಬ್ಬರಿಸು (3)
4. ನೀರಿನ ಹಬೆಯಿಂದ ನಡೆಯುವ ರೈಲುಗಾಡಿ (4)
7. ಚಕಿತಗೊಂಡಾಗ ಕಂಡ ಒಂದು ಬಗೆಯ ಮರ ಮತ್ತದರ ಹಣ್ಣು (3)
8. ವನದಲ್ಲಿ ಬರೆದ ಪದ್ಯ (3)
9. ಕಟಕಟನೆ ಮಾಡಿದ ಮೋಸ (3)
10. ಪಿತ್ರಾರ್ಜಿತವಾಗಿ ಬಂದಿರುವ ಹಕ್ಕು (3)
11. ಕಾರ್ಯಕ್ಕೆ ಮತ್ತೊಂದು ಹೆಸರು (3)
14. ಪರಿಪರಿಯಾಗಿ ಮಾಡಿಕೊಂಡ ಗುರುತು (4)
16. ಕ್ಷೀರದಂತೆ ಮೃದುವಾದ ಕೆನ್ನೆ (4)
17. ಮಾನವನೊಂದಿಗೆ ಕಾಣಿಸಿಕೊಂಡ ರಾಕ್ಷಸ (3)
18. ನಡುವಿನ ಭಾಗ (3)

ಸರಿಯುತ್ತರಗಳು: 702

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಕುಕ್ಕುಟ 4. ಮಾರ್ಮಿಕ 6. ಗಜಗಮನ 7. ತವರು 9. ವಜನು 11. ಖನನ 12. ಪ್ರಸಂಗ 13. ಪ್ರಗತಿ 14. ಸಮುದ್ರ 16.ವರದಿ 18. ಆತಿಣ 20. ವಾಯುಮಂಡಲ 21. ನವೀನ 22. ಯನವ

ಮೇಲಿನಿಂದ ಕೆಳಕ್ಕೆ: 1. ಕುಣಿತ 2. ಟಗರು 3. ಆಗಮನ 4. ಮಾನವ 5. ಕಮಾನು 8. ವರ್ಣಸಂಕರ 10. ಜನಗಣತಿ 15. ಮುಖ್ಯಮಂತ್ರಿ 16. ವರ್ಜನ 17. ದಿವಾನ 18. ಆಲಯ 19. ಐರುವ

● ಸಿ. ರವಿಶಂಕರ ಶಾಸ್ತ್ರಿ, ದಂಬೆ



ಹುಟ್ಟುಹಬ್ಬ ಎನ್ನುವುದು ತಂದೆ ತಾಯಿ ನಮಗೆ ನೀಡಿರುವ ಗಿಫ್ಟ್. ಅವರಿಗೆ ನಾವು ಯಾವಾಗಲೂ ಚಿರ ಋಣಿಯಾಗಿರಬೇಕು. ಇಂದು ನನ್ನ ಅರವತ್ತೆರಡನೇ ಹುಟ್ಟುಹಬ್ಬ. ಇಷ್ಟು ವರ್ಷಗಳಿಂದ ಸಾವಿರಾರು ಅಭಿಮಾನಿಗಳು ನಮ್ಮ ಮನೆಗೆ ಬಂದು ನನ್ನ ಹುಟ್ಟುಹಬ್ಬವನ್ನು ಸಂಭ್ರಮಿಸಿದ್ದೀರಿ. ನಿಮ್ಮ ಅಭಿಮಾನಕ್ಕೆ ನನ್ನ ಧನ್ಯವಾದ. ಈ ಸಲದ ಹುಟ್ಟುಹಬ್ಬಕ್ಕೆ ನಾನು ನಿಮಗೊಂದು ಸ್ಪೆಷಲ್ ಗಿಫ್ಟ್ ಕೊಡಲಿದ್ದೇನೆ. ಅದೇನೆಂದರೆ, ನನ್ನ ಹುಟ್ಟುಹಬ್ಬದ ದಿನ ಬಹು ನಿರೀಕ್ಷಿತ 45 ಚಿತ್ರದ ನನ್ನ ಫಸ್ಟ್ ಲುಕ್ ರಿಲೀಸ್ ಆಗಲಿದೆ. ರಮೇಶ್ ರೆಡ್ಡಿ ನಿರ್ಮಾಣದಲ್ಲಿ, ಅರ್ಜುನ್ ಜನ್ಯ ಮೊದಲ ನಿರ್ದೇಶನದಲ್ಲಿ ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ನಾನು, ಉಪೇಂದ್ರ ಹಾಗೂ ರಾಜ್.ಬಿ.ಶೆಟ್ಟಿ ಒಟ್ಟಿಗೆ ನಟಿಸಿದ್ದೇವೆ. ಇದು ಭಾರತೀಯ ಚಿತ್ರರಂಗದಲ್ಲಿಯೇ ಉತ್ತಮ ಚಿತ್ರವಾಗಲಿದೆ ಎಂಬುದು ನನ್ನ ನಂಬಿಕೆ.

-ಶಿವರಾಜ್‌ಕುಮಾರ್

ಶಿವಣ್ಣನ ಹುಟ್ಟುಹಬ್ಬಕ್ಕೆ 45 ಉಡುಗೊರೆ

ಕರುನಾಡ ಚಕ್ರವರ್ತಿ ಶಿವರಾಜಕುಮಾರ್ ಅವರಿಗೆ ಹುಟ್ಟುಹಬ್ಬದ ಸಂಭ್ರಮ. ಈ ಶುಭದಿನದಂದು ಸಿನಿಪ್ರಿಯರಿಗೆ ಸಾಲು ಸಾಲು ಉಡುಗೊರೆಗಳು ಸಿಕ್ಕಿವೆ. ಶಿವರಾಜ್‌ಕುಮಾರ್ ಅಭಿನಯಿಸುತ್ತಿರುವ ಹಲವು ಸಿನಿಮಾಗಳ ಪೋಸ್ಟರ್, ಟೀಸರ್ ರಿಲೀಸ್ ಆಗಿವೆ. ಅಂತೆಯೇ ಶಿವಣ್ಣ 45 ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ಮಲ್ಟಿಸ್ಟಾರ್ ಚಿತ್ರವಾಗಿದ್ದು ಶಿವಣ್ಣ ವಿಭಿನ್ನ ಗೆಟಪ್‌ನಲ್ಲಿ ಮಿಂಚಿದ್ದಾರೆ. ಶಿವಣ್ಣ ಅವರ ಬರ್ತ್‌ಡೇ ಪ್ರಯುಕ್ತ 45 ಚಿತ್ರದಲ್ಲಿನ ಶಿವಣ್ಣ ಅವರ ಫಸ್ಟ್ ಲುಕ್ ಬಿಡುಗಡೆಯಾಗಿದೆ.

ಈ ಚಿತ್ರದಲ್ಲಿ ಶಿವರಾಜ್‌ಕುಮಾರ್, ಉಪೇಂದ್ರ ಮತ್ತು ರಾಜ್ ಬಿ ಶೆಟ್ಟಿ ಒಟ್ಟಿಗೆ ನಟಿಸಿದ್ದಾರೆ. ಈ ಚಿತ್ರದ ಟೈಟಲ್‌ನಂತೆಯೇ ಕಥೆಯೂ ವಿಶೇಷವಾಗಿದೆ.

ಈ ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಚಂದನವನದಲ್ಲಿ ನಿರ್ದೇಶಕರಾ ಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. 45 ಅದ್ದೂರಿ ವೆಚ್ಚದಲ್ಲಿ ಮೂಡಿಬರುತ್ತಿದ್ದು, ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಈ ಚಿತ್ರಕ್ಕೆ ಸದ್ಯದಲ್ಲೇ ಕ್ಲೈಮ್ಯಾಕ್ಸ್ ಭಾಗದ ಸಾಹಸ ಸನ್ನಿವೇಶದ ಶೂಟಿಂಗ್ ನಡೆಯಲಿದೆ. ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ಸುಮಾರು ಮೂವತ್ತು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿದ್ದು, ಇಷ್ಟು ದಿನಗಳ ಕಾಲ ಅದ್ದೂರಿಯಾಗಿ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ನಡೆಯುತ್ತಿರುವುದು ಕನ್ನಡ ಚಿತ್ರರಂಗದಲ್ಲಿ ಇದೇ ಮೊದಲ ಬಾರಿಗೆ ಎನ್ನಬಹುದು. ಸೆಪ್ಟೆಂಬರ್‌ನಲ್ಲಿ 45 ಚಿತ್ರದ ಮೊದಲ ಟೀಸರ್ ಬಿಡುಗಡೆಯಾಗಲಿದ್ದು, ಬಳಿಕ ಸಿನಿಮಾದ ರಿಲೀಸ್ ದಿನಾಂಕ ಘೋಷಣೆಯಾಗಲಿದೆ.

ಉತ್ತರಕಾಂಡದ ಮಾಲೀಕ

ಶಿವರಾಜ್‌ಕುಮಾರ್ ಅವರ ಹುಟ್ಟುಹಬ್ಬ ಅಂದರೆ ಸಾಕು ಅಂದು, ಸಾಲು ಸಾಲು ಹೊಸ ಸಿನಿಮಾಗಳು ಘೋಷಣೆಯಾಗುತ್ತವೆ. ಮುಂದೆ ತೆರೆಗೆ ಬರಲಿರುವ ಸಿನಿಮಾಗಳ ಪೋಸ್ಟರ್, ಟೀಸರ್ ರಿಲೀಸ್ ಆಗಲಿವೆ. ಅಂತೆಯೇ ಈ ವರ್ಷವೂ, ಒಂದಷ್ಟು ಹೊಸ ಸಿನಿಮಾಗಳು ಸೆಟ್ಟೇರಿವೆ. ಸದ್ಯ ಚಿತ್ರೀಕರಣ ನಡೆಯುತ್ತಿರುವ ಸಿನಿಮಾಗಳಲ್ಲಿ ಉತ್ತರಕಾಂಡ ಬಹುನಿರೀಕ್ಷಿತ ಸಿನಿಮಾವಾಗಿದ್ದು ಈ ಚಿತ್ರದಲ್ಲಿನ ಶಿವಣ್ಣ ಪಾತ್ರದ ಲುಕ್ ರಿಲೀಸ್ ಆಗಿದೆ. ಇದರಲ್ಲಿ ಶಿವಣ್ಣ ಮಾಲೀಕನ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಪ್ರತಿ ಪಾತ್ರದಲ್ಲೂ, ವಿಶಿಷ್ಟವಾಗಿ ಕಾಣುವ ಶಿವಣ್ಣ ಇದೀಗ ಉತ್ತರಕಾಂಡದಲ್ಲೂ ತಮ್ಮ ಲುಕ್ ಮೂಲಕ ಎಲ್ಲರ ಮನಗೆದ್ದಿದ್ದಾರೆ. ಡಾಲಿ ಧನಂಜಯ, ಭಾವನಾ ಮೆನನ್, ಐಶ್ವರ್ಯಾ ರಾಜೇಶ್, ದಿಗಂತ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಬಹು ನಿರೀಕ್ಷಿತ ಉತ್ತರಕಾಂಡ ಚಿತ್ರ ಆ್ಯಕ್ಷನ್ ಡ್ರಾಮಾ ಜಾನರ್‌ನಲ್ಲಿ ಮೂಡಿಬರುತ್ತಿದ್ದು, ರೋಹಿತ್ ಪದಕಿ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅಮಿತ್ ತ್ರಿವೇದಿ ಸಂಗೀತ ಸಂಯೋಜಿಸಿದ್ದಾರೆ. ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕೆಆರ್‌ಜಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಉತ್ತರಕಾಂಡ ನಿರ್ಮಾಣವಾಗುತ್ತಿದೆ.

ನೈಸ್ ರೋಡ್‌ನಲ್ಲಿ ಥ್ರಿಲ್ಲರ್ ಸ್ಟೋರಿ

ನಾವು ಮಾಡಿದ ಕರ್ಮದ ಫಲ ನಮ್ಮನ್ನು ಎಡೆಬಿಡದೆ ಕಾಡುತ್ತದೆ ಎಂಬ ಸ್ಟೋರಿ ನೈಸ್ ರೋಡ್‌ನಲ್ಲಿದೆ. ಚಿತ್ರೀಕರಣ ಮುಗಿಸಿ ತೆರೆಗೆ ಸಿದ್ಧವಾಗಿರುವ ನೈಸ್ ರೋಡ್ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕುತೂಹಲ ಕೆರಳಿಸಿದೆ. ಕಳೆದ ಜನ್ಮದಲ್ಲಿ ಮಾಡಿದ ತಪ್ಪಿಗೆ ಈ ಜನ್ಮದಲ್ಲಿ ಶಿಕ್ಷೆ ಕೊಡುವುದು ಯಾವ ನ್ಯಾಯ ಎನ್ನುವ ಅಂಶವನ್ನಿಟ್ಟುಕೊಂಡು ಕರ್ಮ ಮತ್ತು ಧರ್ಮದ ಕುರಿತ ಕಥೆ ನೈಸ್ ರೋಡ್‌ನಲ್ಲಿ ಸಾಗಲಿದೆ. ಅದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಹಾರರ್ ಅಂಶಗಳನ್ನು ಬೆರೆಸಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಗೋಪಾಲ್ ಹಳೇಪಾಳ್ಯ, ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಪುನರ್ ಗೀತಾ ಸಿನಿಮಾಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಧರ್ಮಣ್ಣ ನಾಯಕನಾಗಿ ನಟಿಸಿದ್ದು, ತನಿಖಾಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಜೋತಿ ರೈ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಗೋವಿಂದೇಗೌಡ, ಮಂಜುನಾಥ್ ರಂಗಾಯಣ, ಮಂಜು, ರೇಣುಶಿಕಾರಿ, ಪ್ರಭು, ಸಚ್ಚಿ ರವಿಕಿಶೋರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹಾಗಂತ ನೈಸ್ ರೋಡ್‌ಗೂ ಈ ಚಿತ್ರದ ಕಥೆಗೂ ಸಂಬಂಧವಿಲ್ಲ. ಹಳ್ಳಿಯ ಮುಂದೆ ಹೈವೇ ರಸ್ತೆಯಿರುತ್ತದೆ, ಆ ರಸ್ತೆ ಎಷ್ಟು ನೈಸಾಗಿದೆ ಅಂತ ಊರ ಜನರು ಹೇಳುತ್ತಿರುತ್ತಾರೆ. ಅದನ್ನೇ ಚಿತ್ರದ ಶೀರ್ಷಿಕೆಯಾಗಿ ಬಳಸಿಕೊಳ್ಳಲಾಗಿದೆ. ಬೆಂಗಳೂರು, ಕುಣಿಗಲ್ ಸುತ್ತಮುತ್ತ ಇಪ್ಪತ್ತೈದ ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಈ ಹಿಂದೆ ಹಲವು ಚಿತ್ರಗಳಲ್ಲಿ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ ಅಂತೆಯೇ ಈ ಚಿತ್ರದಲ್ಲಿಯೂ ತನಿಖಾಧಿಕಾರಿಯಾಗಿ ನಟಿಸಿದ್ದೇನೆ, ಇದು ಹೊಸತನದ ಪಾತ್ರವಾಗಿದೆ. ಇಲ್ಲಿ ಕಥೆಯೇ ನಾಯಕ ಎಂದು ನಟ ಧರ್ಮ ಹೇಳಿದರು. ಸತೀಶ್ ಆರ್ಯನ್ ಸಂಗೀತ ನಿರ್ದೇಶನ, ಪ್ರವೀಣ್ ಶೆಟ್ಟಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಈ ತಿಂಗಳಾಂತ್ಯಕ್ಕೆ ನೈಸ್ ರೋಡ್ ತೆರೆಗೆ ಬರಲಿದೆ.

ನೈಸ್ ರೋಡ್ ಸಸ್ಪೆನ್ಸ್, ಥ್ರಿಲ್ಲರ್ ಕಥೆಯಾಗಿದ್ದು ಪಾಪ, ಪುಣ್ಯ, ಪುನರ್ಜನ್ಮದ ಕಾನ್ಸೆಪ್ಟ್ ನಲ್ಲಿ ಚಿತ್ರ ಮೂಡಿಬಂದಿದೆ. ಈ ಕಥೆ ಬರೆಯುವಾಗಲೇ ತನಿಖಾಧಿಕಾರಿಯ ಪಾತ್ರಕ್ಕೆ ಧರ್ಮ ಅವರನ್ನು ಮನದಲ್ಲಿಟ್ಟುಕೊಂಡೆ ಕಥೆ ಹೆಣೆದಿದ್ದೆ. ಅವರೇ ಈ ಚಿತ್ರದಲ್ಲಿ ನಟಿಸಿರುವುದು ಚಿತ್ರಕ್ಕೆ ಹೊಸತನ ತಂದಿದೆ. ಇದೊಂದು ಕಾಲ್ಪನಿಕ ಕಥೆಯಾಗಿದ್ದರೂ, ಎಲ್ಲರಿಗೂ ಕನೆಕ್ಟ್ ಆಗುವ ಸ್ಟೋರಿಯನ್ನು ಒಳಗೊಂಡಿದೆ.

-ಗೋಪಾಲ್ ಹಳೇಪಾಳ್ಯ ನಿರ್ದೇಶಕ

ಕಿಚ್ಚು ಹಚ್ಚಿದ ಕೆಂಡ

ಸಹದೇವ್ ಕೆಲವಡಿ ನಿರ್ದೇಶನದಲ್ಲಿ ಸಿದ್ಧವಾಗಿರುವ ಕೆಂಡ, ಪಾತ್ರಗಳ ಮೂಲಕವೇ ಗಮನಸೆಳೆದಿತ್ತು. ಈಗ ಕೆಂಡದ ಟ್ರೇಲರ್ ರಿಲಿಸ್ ಆಗಿದ್ದು ಕುತೂಹಲದ ಕಿಡಿ ಹೊತ್ತಿಸಿದೆ. ಈಗಾಗಲೇ ಹಲವು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಕಂಡು ಮೆಚ್ಚುಗೆ ಪಡೆದಿರುವ ಕೆಂಡ ಇದೇ 26ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ. ಕೆಂಡದಲ್ಲಿ ಭೂಗತ ಲೋಕದ ಕಥನವಿದೆ. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಯುವಕನೋರ್ವ, ಪರಿಸ್ಥಿತಿಗಳ ಸೆಳೆತಕ್ಕೆ ಸಿಕ್ಕಿ ಹೇಗೆ ಭೂಗತದ ತೆಕ್ಕೆಗೆ ಬೀಳುತ್ತಾನೆ ಎಂಬ ಕಥೆ ಇಲ್ಲಿ ರೋಚಕವಾಗಿ ಮೂಡಿಬಂದಿದೆ. ಹಾಗಂತ ಅದು ಸಿದ್ಧ ಸೂತ್ರಗಳ ಸುತ್ತ ಗಿರಕಿ ಹೊಡೆಯುವಂತಹ ಸ್ಟೋರಿಯಲ್ಲ. ಅಚ್ಚರಿಗಳಲ್ಲೇ ಸಾಗುವ ಕುತಹಲದ ಕಥೆಯಾಗಿದೆ. ಇದು ಟ್ರೇಲರ್‌ನಲ್ಲಿ ಸ್ಪಷ್ಟವಾಗಿದೆ. ಬಿ.ವಿ ಭರತ್ ನಾಯಕನಾಗಿ ನಟಿಸಿದ್ದಾರೆ. ಉಳಿದಂತೆ, ವಿನೋದ್ ಸುಶೀಲ, ಗೋಪಾಲಕೃಷ್ಣ ದೇಶಪಾಂಡೆ, ಸಚಿನ್ ಶ್ರೀನಾಥ್, ಬಿಂದು ರಕ್ಷಿತಾ, ಶರತ್ ಗೌಡ, ಸತೀಶ್ ಕುಮಾರ್, ಅರ್ಚನಾ ಶ್ಯಾಮ್, ಪೃಥ್ವಿ ಬನವಾಸಿ, ದೀಪ್ತಿ ನಾಗೇಂದ್ರ, ರೇಖಾ ಕೂಡ್ಲಿಗಿ, ಪ್ರಭಾಕರ್ ಜೋಶಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಈ ಹಿಂದೆ ಗಂಟು ಮೂಟೆ ಚಿತ್ರವನ್ನು ನಿರ್ದೇಶಿಸಿದ್ದ ರೂಪಾ ರಾವ್, ಅಮೇಯುಕ್ತಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರಿತ್ವಿಕ್ ಕಾಯ್ಕಿಣಿ ಸಂಗೀತ ನಿರ್ದೇಶನ, ಪ್ರದೀಪ್ ನಾಯಕ್ ಸಂಕಲನ, ಲಕ್ಷ್ಮಿಕಾಂತ್ ಜೋಶಿ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.